
ಸಂಪುಟ 20 ಸಂಚಿಕೆ 29 ಜುಲೈ 12-18, 1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಐಕ್ಯರಂಗ



ಎಡರಂಗದ ವಿಶ್ವದಾಖಲೆ



ಇವರ ಬಲಿದಾನ ವ್ಯರ್ಥವಾಗದಿರಲಿ



ಭೂಮಿ ಕಬಳಿಸುವ ಸ್ವಾಮಿಯ ವಿರುದ್ಧ

ರೊಚ್ಚಿಗೆದ್ದ ಮಹಿಳೆಯರು

ಅಲ್ಪಸಂಖ್ಯಾತರು ಮತ್ತು ಬಿಜೆಪಿ

ಚುನಾವಣೆಗಳು ಹತ್ತಿರವಾಗುತ್ತಿರುವಂತೆ ಬಿಜೆಪಿಯು ಮತದಾರರನ್ನು ಸೆಳೆಯಲು ಹಲವು ವೇಷಾವಳಿಗಳನ್ನು ಹಾಕಲಾರಂಭಿಸಿದೆ. ಅಲ್ಪಸಂಖ್ಯಾಂತರ ಹಿತಾಸಕ್ತಿಗಳು, ಹಕ್ಕುಗಳನ್ನು ಪ್ರತಿಪಾದಿಸುವವರನ್ನು 'ಓಟಿನ ಬ್ಯಾಂಕ್' ನ ರಾಜಕಾರಣಿಗಳೆಂದು ಜರಿಯುತ್ತಾ ಬಂದಿರುವ ಬಿಜೆಪಿ ತಾನು ನಡೆಸಿದ ರಾಜ್ಯ ಮಟ್ಟದ ಅಲ್ಪಸಂಖ್ಯಾತರ ಸಮಾವೇಶವು ಅವರನ್ನು 'ಮುಖ್ಯವಾಹಿನಿ' ಗೆ ತರುವ ಯತ್ನವೆಂದು ತಾನೇ ಬಣ್ಣಿಸಿಕೊಂಡಿದೆ. ಮುಸ್ಲಿಂರು ಎರಡನೆಯ ದರ್ಜೆಯ ನಾಗರೀಕರೆಂದು, ಅವರ ನಿಷ್ಠೆ ಪಾಕಿಸ್ತಾನಕ್ಕೆ ಎಂದು ವಿಷ ಬೀಜ ಬಿತ್ತಲಾಗಿದೆ ಎಂದೂ ಅನ್ಯರನ್ನು ಆರೋಪಿಸಲಾಗಿದೆ. ಇಂತಹವುಗಳು ಸಂಘ ಪರಿವಾರದ ಸೃಷ್ಟಿಗಳೇ ಎಂಬುದು ಬೇರೆ ಹೇಳಬೇಕಾಗಿಲ್ಲ. ಆದರೆ ಸ್ವತ ತನ್ನದೇ ನಿಜವಾದ ಸೆಕ್ಯುಲರಿಸಂ ಎಂದೆಲ್ಲಾ ಬಣ್ಣಿಸಿಕೊಂಡಿರುವ ಬಿಜೆಪಿ-ಸಂಘಪರಿವಾರ ಇಂತವುಗಳನ್ನು ಹುಟ್ಟು ಹಾಕಿ ದ್ವೇಷಕಾರಿ ಕೋಮುವಾದೀ ಕರಾಳತನವನ್ನು ಮುಚ್ಚಿಕೊಳ್ಳಲು ಹೊಸ ಹೊಸ ಬಣ್ಣವನ್ನು ಬಳಿದುಕೊಳ್ಳಬಲ್ಲದು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಖೋಟಾ ಸೆಕ್ಯುಲರ್‌ವಾದಿಗಳ ಮುಚ್ಚಿಟ್ಟ ಅಜೆಂಡಾವದು.

ಅಲ್ಪಸಂಖ್ಯಾತರು ವಾಜಪೇಯಿ ಆಡಳಿತದಲ್ಲಿ ಮಾತ್ರವೇ ಸುರಕ್ಷಿತರಾಗಿದ್ದಾರೆ ಎಂಬ ಮಹಾ ಸುಳ್ಳನ್ನು ಸಚಿವ ನಕ್ವಿ ಆಡಿದ್ದಾರೆ. ಇಂತಹ ಆಸ್ಥಾನ ವಿದೂಷಕರಿಗೆ ಮಂತ್ರಿಸ್ಥಾನ ನೀಡಿ ಅಲ್ಪ ಸಂಖ್ಯಾತರ ನಾಯಕರೆಂದು ಮೆರಸುವುದು, ಆದಕ್ಕಾಗಿ ಇವರು ಸಂಘ ಪರಿವಾರಕ್ಕಿಂತಲೂ ದೊಡ್ಡ ಸ್ವರದಲ್ಲಿ ಮಾತನಾಡುವುದು ಬಿಜೆಪಿಯ ಪ್ರಚಾರದ ಒಂದು ವೈಖರಿ ಹಾಗೂ ಕುತಂತ್ರವಾಗಿದೆ.

ಅಲ್ಪಸಂಖ್ಯಾತರ ವಿಷಯದಲ್ಲಿ ಬಿಜೆಪಿಯ ನಿಲುವು ಬದಲಾಗಿದೆಯೇ? ಸಂಘಪರಿವಾರವು ಫ್ಯಾಸಿಸ್ಟ್ ಮಾದರಿಯ 'ಹಿಂದುತ್ವ' ದ ಧೋರಣೆಯಿಂದ ದೂರಸರಿದಿದೆಯೇ! ಇಲ್ಲ. ಹಲವು ನಾಲಗೆಗಳಲ್ಲಿ ಹಲವು ರೀತಿ ಮಾತನಾಡುವುದು ಹಾಗೇ ವರ್ತಿಸುವುದು ಬದಲಾಗಿಲ್ಲ ಎಂಬುದು ಇತ್ತೀಚೆಗಿನ ವಿದ್ಯಾಮಾನಗಳನ್ನು ನೋಡಿದರೂ ಸಾಕು ತಿಳಿಯುತ್ತದೆ. ಬಿಜೆಪಿಯ ಒಳಗೆ ಪ್ರಜಾಪ್ರಭುತ್ವದ ಪ್ರೇಮದ ಪೋಷಾಕು ಹಾಕಿಕೊಂಡವರು ಒಂದು ಕಡೆಗಿದ್ದರೆ ಇನ್ನೊಂದೆಡೆ ಉಗ್ರವಾದ ಹಿಂದುತ್ವದ ಪ್ರತಿಪಾದಕರು-ಇವೆಲ್ಲವುಗಳ ಗುರಿ ಒಂದೇ - ಅಂತಿಮವಾಗಿ ಜನತೆಯನ್ನು ಹಾದಿ ತಪ್ಪಿಸಿ ಭೀಕರ ಹಿಂದುತ್ವದ ರಾಷ್ಟ್ರ ಸೃಷ್ಟಿಸುವುದು.

ದೇಶದಲ್ಲಿ ಈ ಹಿಂದೆ ನಡೆಸಿದ ಪ್ರತಿಯೊಂದು ಕೋಮು ಗಲಭೆಗಳಲ್ಲಿ ತೀವ್ರ ಹಾನಿಗೆ, ಸಾವು-ನೋವಿಗೆ ಈಡಾದವರು ಅಲ್ಪಸಂಖ್ಯಾತರು. ಕೋಮುಗಲಭೆಗಳ ಬಗ್ಗೆ ತನಿಖೆ ನಡೆಸಲು ನೇಮಿಸಿದ್ದ ಎಲ್ಲಾ ಆಯೋಗಗಳೂ ಆರ್. ಎಸ್.ಎಸ್. ನ ಪರಿವಾರದ ಸ್ಪಷ್ಟ ಕೈವಾಡ ಹಾಗೂ ಕ್ರೂರ

ಸಂಪಾದಕೀಯ

ಪಾತ್ರವನ್ನು ಸ್ಪಷ್ಟ ಗುರುತಿಸಿವೆ. ಭೀವಂಡಿ, ಸೂರತ್ ಮುಂತಾದವುಗಳನ್ನು ನೆನೆದರೆ ಅಲ್ಪಸಂಖ್ಯಾಂತರ ಮೇಲಾದ ಅಮಾನುಷ ಕೃತ್ಯದ ಬಗ್ಗೆ ಆಕ್ರೋಶ ಉಕ್ಕಿಸುತ್ತವೆ. ನ್ಯಾಯಮೂರ್ತಿ ವಿದ್ಯಾತಿಲ್ ಆಯೋಗ, ನ್ಯಾಯ ಮೂರ್ತಿ ಮೇಡನ್ ಆಯೋಗ, ಹೀಗೆ.. ಹಲವಾರು ಆಯೋಗಳನ್ನು ಹೆಸರಿಸಬಹುದು. ಇತ್ತೀಚೆಗಿನ ಬಾಂಬೆಯಲ್ಲಿನ ಕೋಮುಗಲಭೆಗಳಲ್ಲಿ ಆರ್. ಎಸ್.ಎಸ್- ಶಿವಸೇನೆಯ ಕೃತ್ಯಗಳನ್ನು ಶ್ರೀಕೃಷ್ಣ ಆಯೋಗ ಬಯಲಿಗೆಳೆದರೆ, ಕರ್ನಾಟದಲ್ಲಿಯೂ ಉರ್ದು ವಾರ್ತೆ ಸನ್ನಿವೇಶ, ರಥಯಾತ್ರೆಗಳು ಈದ್ಗ ಮೈದಾನದ ಪ್ರಕರಣಗಳು, ಸುರತ್ಕಲ್, ಭಟ್ಕಳ, ಕೊಡಗು ಗಲಭೆಗಳು ಇತ್ತೀಚಿನ ನಿದರ್ಶನಗಳು.

'ಮಹಾ ಮತಸಹಿಷ್ಣು' ವಾಜಪೇಯಿಯವರ ಆಡಳಿತದಲ್ಲಿಯೇ ಅಲ್ಪಸಂಖ್ಯಾತರ, ಕ್ರಿಶ್ಚಿಯನ್ನರ ಮೇಲೆ ನೂರಕ್ಕೂ ಅಧಿಕ ಆಕ್ರಮಣಗಳು ನಡೆದಿವೆ. ೨೪ ಕ್ಕಿಂತ ಅಧಿಕ ಪ್ರಾರ್ಥನಾ ಮಂದಿರಗಳಿಗೆ ಬೆಂಕಿ ಹಚ್ಚಲಾಗಿದೆ. ಕ್ರೈಸ್ತ ಸನ್ಯಾಸಿನಿಯರ ಮೇಲೆ ನಡೆದ ಅತ್ಯಾಚಾರಗಳು, ಮುಗ್ಧ ಮಕ್ಕಳ ಸ್ಟೈನ್ ಕುಟುಂಬಕ್ಕೆ ಬೆಂಕಿ ಹಾಕಿ ಕೊಂದ ಘಟನೆಗಳನ್ನು ಮರೆಯಲಾದೀತೆ?

ತಮ್ಮದು ಸೌಹಾರ್ದತೆಯ ಪರಂಪರೆಯೆಂದು ಬೊಗಳೆ ಹೊಡೆಯುವ ಇದೇ ಬಿಜೆಪಿ ನಾಯಕರು ಕೋಮು ಸೌಹಾರ್ದತೆಯ ಸಂಕೇತವಾಗಿರುವ ಬಾಬಾಬುಡನ್‌ಗಿರಿಗೆ ಬೆಂಕಿ ಹಚ್ಚಿದ್ದನ್ನು ನಾಚಿಕೆ ಯಿಲ್ಲದೇ ಮರೆಸಬಯಸುತ್ತಾರೆ.

ಇತ್ತೀಚೆಗೆ (೧೯೯೮ ನವೆಂಬರ್) ರಾಷ್ಟ್ರೀಯ ಅಲ್ಪ ಸಂಖ್ಯಾತರ ಆಯೋಗ ಬಿಡುಗಡೆ ಮಾಡಿರುವ ವರದಿಯಲ್ಲಿ "ದೇಶದಲ್ಲಿ ಅಲ್ಪಸಂಖ್ಯಾತರ ಪರಿಸ್ಥಿತಿ ಬಗ್ಗೆ ನಮಗೆ ಆತಂಕ ಮತ್ತು ಸಂಕಟವಾಗುತ್ತಿದೆ. ಸಮಾಜದಲ್ಲಿ ಹೆಚ್ಚು ಹೆಚ್ಚಾಗಿ ಕೋಮು ಆಧಾರದಲ್ಲಿ ಧೃವೀಕರಣ ಗೊಳ್ಳುತ್ತಿರುವುದು ಕಳವಳದ ವಿಷಯ. ಅಪರಾಧಗಳು, ಕೋಮುವಾದೀಕರಣವನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ. ಕಾನೂನು ಪ್ರಕಾರ ಅಧಿಕಾರಿಗಳೂ ಸಹ ದೃಢವಾಗಿ ಶಿಕ್ಷಿಸುವುದಿಲ್ಲ...." ಎಂದಿದೆ. ಬಾಬ್ರಿ ಮಸೀದಿಯನ್ನು ಕೆಡವಲು ಸಹಕರಿಸಿದ ಅಧಿಕಾರಿಗಳನ್ನು, ಕ್ರೈಸ್ತರ ಮೇಲೆ ಆಕ್ರಮಣ ಮಾಡಿದವರನ್ನೂ ಪುರಸ್ಕರಿಸಿದ್ದು ಇದೇ ಬಿಜೆಪಿಯ ಸರ್ಕಾರಗಳಲ್ಲವೆ? ಇಂತಹ ಕೋಮು ಗಲಭೆಗಳನ್ನು ಸೃಷ್ಟಿಸುವುದು, ಅದರಿಂದ ಉಂಟಾದ ವಿಭಜನೆಯಿಂದ ಚುನಾವಣೆಗಳಲ್ಲಿ ಆರಿಸಿಬರುವುದು, ಮತ್ತು ಅದೇ ಕಾವನ್ನು ಕಾಯ್ದು ಕೊಳ್ಳುವ ಅಂತಹುದೇ ಆಟಗಳನ್ನು ಆಡುತ್ತಾ ಬರುವುದು ಬಿಜೆಪಿಯ ಜಾಯಮಾನ.

ತನ್ನ ಹದಿಮೂರು ತಿಂಗಳ ಆಡಳಿತದುದ್ದಕ್ಕೂ ಅಲ್ಪಸಂಖ್ಯಾತರ ಮೇಲೆ ಹರಿಹಾಯ್ದ ಬಿಜೆಪಿ ಸಂಘಪರಿವಾರಕ್ಕೆ ತಕ್ಕ ಉತ್ತರ ಹೇಳಲು ಜನತೆ ಅವಕಾಶ ಕಾಯುತ್ತಿದ್ದಾರೆ. ಎಲ್ಲಾ ರಂಗಗಳಲ್ಲಿಯೂ ವಿಫಲವಾಗಿ ವಿನಾಶಕಾರಿ ಆಡಳಿತ ಹೇರಿದ ಬಿಜೆಪಿ ತನ್ನ ಬಲದಲ್ಲೇ ಗೆಲ್ಲವುದು ಅಸಾಧ್ಯವೆಂದು ಭಾವಿಸಿ ಅಲ್ಪ ಸಂಖ್ಯಾಂತರನ್ನು ಸಳೆಯಲು ಮುಂದಾಗುತ್ತಿದೆ. ಈ ಮೂಲಕವಾಗಿ ಅಲ್ಪಸಂಖ್ಯಾತರು ಸೆಕ್ಯುಲರ್ ರಾಜಕಾರಣದತ್ತ ಸರಿಯುವುದನ್ನು ತಪ್ಪಿಸುವ ಬಯಕೆ. ಇಂತಹ ಶಕ್ತಿ ಪಡೆದುಕೊಳ್ಳುವುದೇ ಮತ್ತೇ ಮತ್ತೇ ಕ್ರೂರ ದಾಳಿ ನಡೆಸಲು ಎಂಬುದನ್ನು ಎಲ್ಲರು ಅರಿಯಬೇಕು. ಸಮಾರಂಭಗಳಲ್ಲಿನ ಬಣ್ಣದ ಮಾತುಗಳು ಇತಿಹಾಸಕ್ಕೆ ಅಂಟಿಕೊಂಡಿರುವ ರಕ್ತ, ಕಣ್ಣೀರುಗಳನ್ನು ತೊಳೆಯಲಾರವು, ಶಾಂತಿ ಸೌಹಾರ್ದತೆ ತರಲಾರವು. ಅಂತಹ ಶಕ್ತಿಗಳನ್ನು ಧೂಳೀಪಟಗೊಳಿಸುವದೊಂದೇ ಉಳಿದಿರುವ ದಾರಿ. ಆಗಲೇ ಅಲ್ಪ ಸಂಖ್ಯಾತರ ಹಕ್ಕು- ಹಿತಾಸಕ್ತಿ ಕಾಯುವುದು ಸಾಧ್ಯ.

ನಮ್ಮ ವೀರ ಸೈನಿಕರ ಬಲಿದಾನ ವ್ಯರ್ಥವಾಗದಿರಲಿ ಅಮೆರಿಕಾಕ್ಕೆ ಮೂಗು ತೂರಿಸಲು ಅವಕಾಶವಾಗದಿರಲಿ

ಕಾರ್ಗಿಲ್ ಸನ್ನಿವೇಶ ಹೊಸ ತಿರುವು ಪಡೆದಿದೆ. ಪಾಕಿಸ್ತಾನಿ ಪ್ರಧಾನಿ ತುರ್ತಾಗಿ ವಾಶಿಂಗ್ಟನ್‌ಗೆ ಹೋಗಿ ಅಮೆರಿಕದ ಅದ್ಯಕ್ಷ ಕ್ಲಿಂಟನ್‌ರೊಡನೆ ಮಾತುಕತೆ ನಡೆಸಿ ಜಂಟಿ ಹೇಳಿಕೆ ನೀಡಿದ್ದಾರೆ. ಶಿಮ್ಲಾ ಒಪ್ಪಂದದ ಪ್ರಕಾರ ನಿಯಂತ್ರಣ ರೇಖೆಯನ್ನು ಗೌರವಿಸಿ, ಅದನ್ನು ಮತ್ತೆ ಸ್ಥಾಪಿಸಲು ಕ್ರಮ ಕೈಗೊಳ್ಳುವುದಾಗಿ ಈ ಹೇಳಿಕೆ ತಿಳಿಸಿದೆ. ದ್ವಿಪಕ್ಷೀಯ ಮಾತುಕತೆಗಳೇ ಅತ್ಯುತ್ತಮ ವೇದಿಕೆ ಎಂದೂ ಅದು ಹೇಳಿದೆ. ಅಧ್ಯಕ್ಷ ಕ್ಲಿಂಟನ್ ತಕ್ಷಣ ಘರ್ಷಣೆಗಳನ್ನು ನಿಲ್ಲಿಸಬೇಕು ಎಂದಿದ್ದಾರಂತೆ. ಈ ದ್ವಿಪಕ್ಷೀಯ ಪ್ರಯತ್ನಗಳು ಬೇಗನೇ ಪುನರಾರಂಭಗೊಳ್ಳುವಲ್ಲಿ ಅವರು 'ವೈಯುಕ್ತಿಕ ಆಸಕ್ತಿ' ವಹಿಸುತ್ತಾರಂತೆ.

ಪುಟ 5 ನೋಡಿ

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಜೆ.ಹೆಚ್. ಪಟೇಲ್, ಜಾರ್ಜ್ ಫರ್ನಾಂಡಿಸ್ ಮತ್ತು ಯು.ಆರ್. ಅನಂತಮೂರ್ತಿ ಇವರೆಲ್ಲಾ ಸಮಾಜವಾದಿಗಳೆಂದು ಹೇಳಿಕೊಳ್ಳುತ್ತಾರೆ. ಇವರು ಯಾವ ರೀತಿಯ ಸಮಾಜವಾದಿಗಳು?

ಎ.ನಾಗರಾಜನ್
ಬೆಂಗಳೂರು

ಇದು ಕರ್ನಾಟಕದಲ್ಲಿ ಅನೇಕ ಪತ್ರಿಕಾ ವರದಿಗಾರರು, ಸಾಹಿತಿಗಳು ಹಾಗೂ ಬುದ್ದಿ ಜೀವಿಗಳು ಎತ್ತಿರುವ ಪ್ರಶ್ನೆ ಹಾಗೂ ಜನಜನಿತವಾಗಿರುವ ಅಭಿಪ್ರಾಯ.

ಭಾರತದಲ್ಲಿ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಸಮಾಜವಾದಿ ಎಂದು ಕರೆದುಕೊಳ್ಳದ ರಾಜಕಾರಣಿಗಳು, ರಾಜಕೀಯ ಪಕ್ಷಗಳು ಇಲ್ಲವೆಂದು ಹೇಳಬಹುದು

ಕಾಂಗ್ರೆಸ್ ಪಕ್ಷ 1957 ರಲ್ಲಿಯೇ ಸಮಾಜವಾದೀ ಸ್ವರೂಪದ ಸಮಾಜ ನಿರ್ಮಾಣ ತನ್ನ ಗುರಿ ಎಂದು ಘೋಷಿಸಿತು. ಇದು ನೆಹರೂ ಸಮಾಜವಾದ ಎಂದು ಹೆಸರಾದರೆ ಇಂದಿರಗಾಂಧಿಯವರ ಗರೀಬಿ ಹಟಾವೋ, ಬ್ಯಾಂಕ್ ರಾಷ್ಟ್ರೀಕರಣಗಳ ಘೋಷಣೆಗಳ ಮೂಲಕ ಇಂದಿರಾ ಮಾದರಿಯ ಸಮಾಜವಾದವನ್ನು ಜನತೆ ನೋಡಿದರು. ಅದರ ಫಲವಾಗಿ ಸಂವಿಧಾನ ತಿದ್ದುಪಡಿಯೂ ಆಗಿ ಭಾರತ ಸಮಾಜವಾದಿ ಗಣರಾಜ್ಯ ಎಂಬ ಹೆಸರನ್ನು ತಳೆಯಿತು. ಆದ್ದರಿಂದ ಹೆಸರಿನ ಪ್ರಕಾರ ಹೋದರೆ ಭಾರತ ದೇಶವೆಲ್ಲಾ ಸಮಾಜವಾದಿಯೇ ಸಮಾಜವಾದಿ ಎಂದು ಕರೆದು ಕೊಳ್ಳುವ ಫ್ಯಾಷನ್ ಮುಂದುವರೆದು ಸಂಘ ಪರಿವಾರಕ್ಕೂ ಧಾಳಿಯಿಟ್ಟಿತು. ಸಾಕಷ್ಟು ಚಿಂತನ ಬೈಠಕ್ ಗಳನ್ನು ನಡೆಸಿ ನಾಗಪುರ ಆರಸ್ಸೆಸ್ ದೊರೆಗಳು ಜನತಾ ಪಕ್ಷವನ್ನೂ ಮುರಿದು ಹುಟ್ಟಿದ ಭಾರತೀಯ ಜನತಾ ಪಕ್ಷ ಗಾಂಧೀವಾದಿ ಸಮಾಜ ವಾದವನ್ನು ಅಪ್ಪಿಕೊಳ್ಳಲು ಅನುಮತಿ ನೀಡಿದರು. ಈ ಫ್ಯಾಸಿಸ್ಟ್ ಸಂಘಪರಿವಾರಕ್ಕೆ ಗಾಂಧಿಯ ಬಗ್ಗೆ ಎಷ್ಟೊಂದು ಪ್ರೀತಿ ಎಂದು ಎಲ್ಲರಿಗೂ ಗೊತ್ತು. ಅಷ್ಟೇ ಪ್ರೇಮವನ್ನು ಸಮಾಜವಾದದ ಬಗ್ಗೆಯೂ ಅವರ ಎಲ್ಲಾ ಬರೆಹ ನಡೆವಳಿಕೆಗಳಲ್ಲಿ ತೋರಿಸಿದ್ದಾರೆ ಆದರೂ ಅವರಿಗೆ ಗಾಂಧಿವಾದವೂ, ಸಮಾಜವಾದವೂ ಒಟ್ಟಿಗೆ ಬೇಕಾಯಿತು.

ಹೀಗೆ ಸ್ವಾತಂತ್ರ್ಯ ನಂತರ ನಾಲ್ಕು ದಶಕಗಳ ಕಾಲ ಅದೆಷ್ಟು ಬುದ್ಧಿ ಜೀವಿಗಳು, ಸಾಹಿತಿಗಳು ಸಮಾಜವಾದಿ ಎಂದು ಕರೆದುಕೊಂಡರೂ ಲೆಕ್ಕವಿಲ್ಲ. ಅದೊಂದು ಅಲೆ, ಫ್ಯಾಷನ್.

ಇದಕ್ಕೆ ಮುಖ್ಯಕಾರಣ ಸಮಾಜದವಾದ ಎನ್ನುವುದು ಬಡವರ ಪರ ಎಂಬುದನ್ನು ದೇಶದ ಜನತೆ ಗುರುತಿಸಿದ್ದಾರೆ ಹಾಗೂ ಸಮಾಜವಾದದ ಹೆಸರು ಹೇಳಿ ಅವರ ಮತ ಪಡೆಯಬಹುದು ಎಂದು. (ಜೊತೆಗೆ ಅಂದಿನ ಕಾಲದಲ್ಲಿ ಸಮಾಜವಾದಿ ದೇಶಗಳ ಪ್ರಭಾವ, ಸಾಮರ್ಥ್ಯಗಳು ಅದರಲ್ಲಿಯೂ ಮಹಾಹತುಗಳ ಸ್ವಾತಂತ್ರ್ಯ ಹೋರಾಟಕ್ಕೆ ಸಮಾಜವಾದ ನೀಡಿದ ಪ್ರೇರೇಪಣೆಯ ಫಲ ಅದು)

ಇದೇ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯಕ್ಕೆ ಮೊದಲೇ 1930 ರಲ್ಲಿಯೇ ಕಾಂಗ್ರೆಸ್ಸಿನ ಒಳಗಡೆಯೇ ಒಂದು ಕಾಂಗ್ರೆಸ್ ಸಮಾಜವಾದಿ ಪಕ್ಷ ಎಂಬ ಬಣ ರೂಪುಗೊಂಡಿತ್ತು. ಜಯಪ್ರಕಾಶ್ ನಾರಾಯಣ್, ಮೀನೂ ಮಸಾನಿ, ನೆಹರೂ, ಇಎಂಎಸ್ ನಂಬೂದರಿ ಪಾದ್ ಇದರ ನೇತಾರರಾಗಿದ್ದರು. ಮುಂದೆ ಈ ಪಕ್ಷದ ಬಹಳ ಭಾಗ ಕಮ್ಯೂನಿಸ್ಟ್ ಪಕ್ಷದ ಕಡೆಗೆ ಆಕರ್ಷಿತರಾಗಿ ಸಮಾಜವಾದವನ್ನು ಸಾಧಿಸುವ ವೈಜ್ಞಾನಿಕ ದಾರಿಯನ್ನು ಕಂಡುಕೊಂಡು ಇನ್ನುಳಿದವರು ಸ್ವಾತಂತ್ರ್ಯದವರೆಗೂ ಕಾಂಗ್ರೆಸ್ ನಲ್ಲಿಯೇ ಮುಂದುವರೆದು ನಂತರ ಕಾಂಗ್ರೆಸ್ ತ್ಯಜಿಸಿ ಸಮಾಜವಾದಿ ಪಕ್ಷ ರಚಿಸಿದರು. ಇದರಲ್ಲಿಯೇ ಹಲವಾರು ಬಾರಿ ಒಡಕು ಬಂದು ಪ್ರಜಾ ಸಮಾಜವಾದಿ ಪಕ್ಷ, ಸಂಯುಕ್ತ ಸಮಾಜವಾದಿ ಪಕ್ಷ ಎಂದೆಲ್ಲಾ ರೂಪು ತಳೆಯುತ್ತಾ ಹೋಯಿತು. ಜಾರ್ಜ್ ಫರ್ನಾಂಡಿಸ್, ರಾಮಮನೋಹರ ಲೋಹಿಯಾ ಮುಂತಾದವರ ನೇತೃತ್ವದ ಪ್ರಮುಖ ಬಣಗಳೂ ಹಲವಾರು ಬಿಡಿ ಸಮಾಜವಾದಿ ಗುಂಪುಗಳೂ ಇದ್ದವು. ಇದರಲ್ಲಿ ಕರ್ನಾಟಕದ ಮೇಲೆ ಪ್ರಮುಖ ಪ್ರಭಾವ ಬೀರಿದ್ದು ರಾಮಮನೋಹರ ಲೋಹಿಯಾ ಇವರತ್ತ ಆಕರ್ಷಿತರಾದ ಶಾಂತವೇರಿ ಗೋಪಾಲ ಗೌಡರು, ಅವರು ನಾಯಕತ್ವ ನೀಡಿದ ಕಾಗೋಡು ಸತ್ಯಾಗ್ರಹ ಹಲವಾರು ಸಮಾಜವಾದಿಗಳನ್ನು ರೂಪಿಸಿತು. ಕರ್ನಾಟಕದ ಸಾಂಸ್ಕೃತಿಕ ರಂಗದ ಮೇಲೆಯೂ ಪ್ರಭಾವ ಬೀರಿತು.

1967 ರವರೆಗೆ ರಾಜಕೀಯದಲ್ಲಿ ಗಣನೀಯ ಪಾತ್ರ ವಹಿಸುತ್ತಿದ್ದ ಮತ್ತು ಅನೇಕ ಎಂ.ಎಲ್.ಎ ಗಳನ್ನು ಹೊಂದಿದ ಬಣಗಳು ಇಂದಿರಾ ಗಾಂಧಿಯವರು ಕಾಂಗ್ರೆಸ್ ನ್ನು ಒಡೆದು ಗರಿಬಿ ಹಟಾವೋ ರಾಜಕಾರಣ ಆರಂಭಿಸಿದಾಗ ಮತ್ತು ಪ್ರಬಲವಾಗಿ ಬೆಳೆದಾಗ ಸಮಾಜವಾದಿಗಳಲ್ಲಿ ಅನೇಕರು ಇಂದಿರಾ ಗಾಂಧಿಯವರ ಸಮಾಜವಾದವೇ ಶ್ರೇಷ್ಟವೆಂದು ಪರಿಗಣಿಸಿ ಕಾಂಗೆಸ್ ನ ಆ ಆಡಳಿತ ಬಣಕ್ಕೆ ಹಾರಿದರು. ಅದರಲ್ಲಿ ಈಗ ಕಾಂಗ್ರೆಸ್ ನ ಅಧ್ಯಕ್ಷರಾಗಿರುವ ಎಸ್.ಎಂ.ಕೃಷ್ಣ, ಕಾಗೋಡು ತಿಮ್ಮಪ್ಪ, ಎಸ್. ಬಂಗಾರಪ್ಪ, ಹಿಂದೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೆ.ಎಚ್. ರಂಗನಾಥ್ ಮೊದಲಾದವರು ಪ್ರಮುಖರು.

ಇಂದಿರಾ ಗಾಂಧಿಯವರ ನೀತಿಗಳ ವಿರುದ್ಧ ಸೆಣಸಾಡುತ್ತಾ ಸಮಾಜವಾದಿ ಯುವಜನ ಸಭಾ ಜಯಪ್ರಕಾಶ್ ನಾರಾಯಣ್ ರವರ ಚಳುವಳಿ ಇವುಗಳ ಜೊತೆ ಸೇರಿದ್ದ ಸಮಾಜವಾದಿಗಳ ಒಂದು ಬಣ 1977 ರಲ್ಲಿ ನಿಜಲಿಂಗಪ್ಪನವರ ನೇತೃತ್ವದ ಸಂಸ್ಥಾ ಕಾಂಗ್ರೆಸ್, ಜನಸಂಘ, ಚರಣ್ ಸಿಂಗ್‌ರ ಲೋಕದಳಗಳ ಜೊತೆ ಸೇರಿ ಜನತಾ ಪಕ್ಷದಲ್ಲಿ ಹುದುಗಿ ಹೋದರು. ಅಲ್ಲಿಗೆ ಸಮಾಜವಾದಿ ರಾಜಕೀಯದ ಅಂತ್ಯವಾಯಿತು.

ಸಾಂಸ್ಕೃತಿಕ ರಂಗದ ಮೇಲೆ ಲೋಹಿಯ ವಾದದ ಪ್ರಭಾವ ಇನ್ನೂ ಮುಂದುವರೆದಿದ್ದರೂ ಒಬ್ಬಬ್ಬರದೊಂದಂದು ಬಣವಾಗಿ ಒಬ್ಬರ ವಿರುದ್ಧ ಮತ್ತೊಬ್ಬರು ಕತ್ತಿ ಮಸೆಯುತ್ತಾ ಕರ್ನಾಟಕದ ಸಾಂಸ್ಕೃತಿಕ ರಂಗದಲ್ಲಿ ಇಂದಿಗೂ ಮನರಂಜನೆಯ ಕೇಂದ್ರವಾಗಿದ್ದಾರೆ. ಈ ಸಾಂಸ್ಕೃತಿಕ ರಂಗದಲ್ಲಿ ಕ್ರಿಯಾ ಶೀಲವಾಗಿರುವ ಸಮಾಜವಾದಿಗಳಲ್ಲಿ ಬಹುತೇಕ ಎಲ್ಲರೂ ಯು.ಆರ್. ಅನಂತ್ ಮೂರ್ತಿಯವರನ್ನು ಸಮಾಜವಾದಿ ಎಂದು ಒಪ್ಪಿಕೊಳ್ಳುವುದಿಲ್ಲ. ಅನಂತ ಮೂರ್ತಿಯವರ ವರ್ಣಾಶ್ರಮ ಧರ್ಮ ಪ್ರಿಯತೆ, ಪೇಜಾವರ ಸ್ವಾಮೀಜಿಯವರ ಮೇಲಿನ ಭಕ್ತಿ ಮತ್ತು ಇತ್ತೀಚಿನ ಡಾಲರ್ ಕಾಲೋನಿಯಲ್ಲಿ ಸರ್ಕಾರದಿಂದ ಪಡೆದ ಮನೆ ಇತ್ಯಾದಿಗಳನ್ನು ಕಟುವಾಗಿ ಟೀಕಿಸುತ್ತಾರೆ.

ಒಟ್ಟಿನಲ್ಲಿ ಸಮಾಜವಾದದ ಹೆಸರನ್ನು ದುರ್ಬಳಕೆ ಮಾಡುವ ಪ್ರವೃತ್ತಿ ಸಮಾಜವಾದ ಹುಟ್ಟಿನಿಂದಲೂ ಇದೆ. ಮೂಲದಲ್ಲಿ ಅಸಾಧ್ಯಆದರ್ಶವಾದಿ ಸಮಾಜವಾದಿಗಳು ಅಥವಾ ಕಾಲ್ಪನಿಕ ಸಮಾಜವಾದಿಗಳ ಪರಂಪರೆಯನ್ನು ಅಭ್ಯಾಸ ಮಾಡಿ ಅದಕ್ಕೆ ವೈಜ್ಞಾನಿಕ ತಳಹದಿ ಹಾಗೂ ಸಮಾಜ ಬದಲಾವಣೆಯ ಕ್ರಿಯೆಯಲ್ಲಿ ನಿರ್ದಿಷ್ಟ ಸ್ಥಾನವನ್ನು ನೀಡಿದ್ದು ಮಾರ್ಕ್ಸ್ ಮತ್ತು ಎಂಗೆಲ್ಸ್. ಇವರ ಪ್ರಭಾವದಿಂದ ಕಾರ್ಮಿಕ ಚಳುವಳಿ ಹಾಗೂ ಇತರ ದುಡಿಯುವ ಜನರ ಚಳುವಳಿ ಬೆಳೆದು ಇಡೀ ವಿಶ್ವದಲ್ಲಿ ಕೋಟ್ಯಾಂತರ ಜನ ಸಮಾಜವಾದದತ್ತ ಆಕರ್ಷಿತರಾಗತೊಡಗಿದರು. ಮತ್ತು ಬಂಡವಾಳಶಾಹಿ ವ್ಯವಸ್ಥೆಯನ್ನು ತಮ್ಮ ಹೋರಾಟಗಳಿಂದ ತಲ್ಲಣಗೊಳಿಸಿದರು. ಆಗ ಯುರೋಪಿನ ಆಳುವವರ್ಗ ಜನರನ್ನು ವಂಚಿಸಲು ಸಮಾಜವಾದದ ಹೆಸರನ್ನು ತಾವ ಬಳಸತೊಡಗಿದರು. ಕಮ್ಯೂನಿಸ್ಟ್ ಮ್ಯಾನಿಫೆಸ್ಟೋದಲ್ಲಿಯೇ ನಾಲ್ಕಕ್ಕಿಂತಲೂ ಹೆಚ್ಚು ಸಮಾಜವಾದದ ಹೆಸರಿನ ದುರ್ಬಳಕೆಯ ವಿಧಾನಗಳನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್ ಹೆಸರಿಸುತ್ತಾರೆ. ಭಾರತದ ಎಲ್ಲಾ ಪಕ್ಷಗಳು, ಎಲ್ಲಾ ಬಣಗಳ ಸಮಾಜವಾದದ ಮೂಲ ಸಿದ್ಧಾಂತಗಳನ್ನು ಅಂದು ಎಂದರೆ 1848 ರಲ್ಲಿ ಅಸ್ತಿತ್ವದಲ್ಲಿದ್ದ ಈ ಕಲಬೆರಕೆ ಸಮಾಜವಾದಿ ಸಿದ್ಧಾಂತಗಳಲ್ಲಿಯೇ ಗುರುತಿಬಹುದು. ಈ ಕಲಬೆರಕೆ ಸಮಾಜವಾದಿ ಸಿದ್ಧಾಂತಗಳ ಹೆಸರುಗಳನ್ನು ನೋಡಿದರೆ ಸಾಕು ಇದು ಅರಿವಾಗುತ್ತದೆ.

1) ಪಾಳೆಗಾರಿ ಸಮಾಜವಾದ
2) ಬಂಡವಾಳಶಾಹಿ ಸಮಾಜವಾದ
3) ಪುಟ್ಟ ಬಂಡವಾಳಶಾಹಿಗಳ (ಮಧ್ಯಮ ವರ್ಗಿಯ) ಸಮಾಜವಾದ
4) ವಿಮರ್ಶಾ-ಕಾಲ್ಪನಿಕ ಸಮಾಜವಾದ

ರಷ್ಯನ್ ಕ್ರಾಂತಿಯು ನಂತರದ ದಿನಗಳಲ್ಲಂತೂ ಕಾರ್ಮಿಕವರ್ಗ ಹಾಗೂ ಅದರ ಜೊತೆಗೆ ಇತರ ದುಡಿಯುವ ವರ್ಗ, ತಮ್ಮ ಅಧಿಕಾರವನ್ನು ಕಸಿದುಕೊಳ್ಳುವ ಭಯದಿಂದ ತಲ್ಲಣಿಸಿ ಹೋದ ಬಂಡವಾಳಶಾಹಿ ನಿಜವಾದ ಅಂದರೆ ವೈಜ್ಞಾನಿಕ ಸಮಾಜವಾದವೆಂದು ಹೆಸರಾದ ಮಾರ್ಕ್ಸ್ ವಾದವನ್ನು ಬಿಟ್ಟು ಬೇರೆ ಎಲ್ಲಾ ಸಮಾಜವಾದದ ಸ್ವರೂಪಗಳನ್ನು ದುಡಿಯುವ ಜನರನ್ನು ವಂಚಿಸುವ ಹಾಗೂ ಕಮ್ಯೂನಿಸ್ಟ್ ಚಳುವಳಿಯ ಬೆಳವಣಿಗೆಯನ್ನು ತಡೆಗಟ್ಟುವ ಸಾಧನವಾಗಿ ಬಳಸಿಕೊಳ್ಳತೊಡಗಿದರು. ಆದ್ದರಿಂದ ಆ ನಂತರದಲ್ಲಿ ಪ್ರಮುಖವಾದ ಸಮಾಜವಾದದ ರೂಪಗಳು ಎರಡೇ ಒಂದು ನಿಜವಾದ ವೈಜ್ಞಾನಿಕವಾದ ಸಮಾಜವಾದ ಕಮ್ಯೂನಿಸಂ ಎಂಬ ಹೆಸರಿನಲ್ಲಿ. ಈ ಕಮ್ಯೂನಿಸಂ ಎಂಬ ಹೆಸರು ಉಳಿದೆಲ್ಲಾ ಸಮಾಜವಾದ ಚಳುವಳಿಗಳನ್ನು ಸೆಳೆದುಕೊಂಡ ನಂತರ ಮಾರ್ಕ್ಸ್ ವಾದಿಗಳಿಗೆ ಲಭ್ಯವಾಗಿದ್ದೇ ಆಕ್ಟೋಬರ್ ರಷ್ಯನ್ ಕ್ರಾಂತಿಯು ನಂತರ ಬಂಡವಾಳಶಾಹಿಗಳು ಕೈಗೊಂಬೆಯಾದ ವಂಚನೆಯ ಸಮಾಜವಾದ ಇಂದಿಗೂ ಯುರೋಪಿನಲ್ಲಿ ಜನಪ್ರಿಯವಾಗಿರುವ ಆಗಾಗ್ಗೆ ಅಲ್ಲಿಯ ಸಂಪ್ರಾದಾಯವಾದೀ (ಕನ್ಸರ್ವೇಟಿವ್) ಪಕ್ಷಗಳನ್ನು ಥ್ಯಾಚರ್, ಕೊಹ್ ಗಳನ್ನು ಸೋಲಿಸಿ ಅಧಿಕಾರಕ್ಕೆ ಬಂದು ಅದೇ ಬಂಡವಾಳಶಾಹಿ ನೀತಿಗಳನ್ನು ಜಾರಿಗೆ ತರುವ ಸಮಾಜವಾದಿ ಪಕ್ಷಗಳು (social democratic) ಎಂದೇ ಕರೆದುಕೊಳ್ಳುತ್ತವೆ. ಈ ಕಾರಣದಿಂದಲೇ ಸಮಾಜವಾದಿಗಳು ಯಾವುದೇ ಹಿಂಜರಿಕೆ ಹಾಗೂ ಅಪರಾಧಿ ಮನೋಭಾವವಿಲ್ಲದೆ ತಮ್ಮ ತವರು ಮನೆಗೆ ಹೊದಷ್ಟೇ ಸಲೀಸಾಗಿ ಬಂಡವಾಳಿಶಾಹಿ ಪಕ್ಷಗಳಾದ ಕಾಂಗ್ರೆಸ್ ಪಕ್ಷ ಮತ್ತು ಜನತಾ ಪಕ್ಷವನ್ನು ಸೇರಿ ಅವುಗಳಲ್ಲಿ ಲೀನವಾಗಿ ಹೊಗಿದ್ದು ಮತ್ತು ಈಗ ಪ್ಯಾಸಿಸ್ಟ್ ಸ್ವರೂಪದ ಬಿಜೆಪಿಯ ಜೊತೆ ಕೈ ಜೊಡಿಸಲು ಅಥವಾ ತಟಸ್ಥ (ಜೆ.ಹೆಚ್. ಪಟೇಲರು ಹೇಳಿದ) ಅನುಸರಿಸಲು ಯಾವುದೇ ರೀತಿಯ ಹಿಂಜರಿಕೆ ಕಾಣದ್ದು. ಆದುದರಿಂದ ಕಮ್ಯೂನಿಸಂ ಹೊರತಾಗಿ ಉಳಿದೆಲ್ಲಾ ಸಮಾಜವಾದವೆಲ್ಲಾ ಕೇವಲ ಬಡವರನ್ನು ಬಂಡವಾಳಶಾಹಿಗಳ ಆಟದಲ್ಲಿ ದಾಳಗಳನ್ನಾಗಿ ಬಳಸುವ ವಿಧಾನದ ಬೇರೊಂದು ಹೆಸರಷ್ಟೇ ಅಲ್ಲದೆ ಬೇರೆ ಏನು ಅಲ್ಲ ಹೆಚ್ಚೆಂದರೆ ಮಧ್ಯಮ ವರ್ಗದ(ನಗರಗಳಲ್ಲಿಯೂ, ಗ್ರಾಮದಲ್ಲಿಯೂ ಇರುವ ಕೆಲವು ಬಂಡವಾಳಶಾಹಿ ವಿರೋಧಿ ಪ್ರಗತಿ ಪರರ ಆಶಯದ ಅಭಿವ್ಯಕ್ತಿ ಅಷ್ಟೇ.

ನಿಮ್ಮ ಪತ್ರ

'ದುಡಿಯುವ ಜನರ
ಪ್ರಾಣಮಿತ್ರನಿಗೆ'

ನವ ಯೌವನ ತುಂಬಿಕೊಂಡಾಗ
ಐಕ್ಯರಂಗ-
ಆಗುತ್ತದೆ
ಜನಚಳುವಳಿಯ
ದಿಕ್ಕು ಗುರುತಿಸುವ
ಸ್ನೇಹ ತರಂಗ

- ಕೆ.ಎಸ್.ವಸ್ತ್ರದ

ಬಿಜೆಪಿಯ ಹಗಲುಗನಸು......



ಕರ್ನಾಟಕದಲ್ಲಿ ಈ ಬಾರಿ ನಮಗೇ ಅಧಿಕಾರ ಎಂದು ಬಿಜೆಪಿಯವರು ಸಂಕಲ್ಪ ಮಾಡಿಕೊಂಡು ಬಿಟ್ಟಾಗಿದೆಯಂತೆ! ಸಂಕಲ್ಪವಷ್ಟೇ ಏಕೆ? ಅವರು ಒಂದು ನಿರ್ಣಯವನ್ನೇ ಪಾಸುಮಾಡಿಕೊಳ್ಳಬಹುದು. ಇವರ ಸಂಕಲ್ಪದಿಂದಾಗಲಿ, ನಿರ್ಣಯದಿಂದಾಗಲಿ ಯಾರು ಏನನ್ನು ಕಳೆದುಕೊಳ್ಳುವುದಿದೆ? ಇವರು ಸಂಕಲ್ಪಮಾಡಿದಾಕ್ಷಣ ಕರ್ನಾಟಕದ ಮತದಾರರ ಮತಗಳು ಇವರ ಮತಪೆಟ್ಟಿಗೆಗೆ ಬಿದ್ದುಬಿಡುತ್ತವೆ ಎಂದು ಯಡಿಯೂರಪ್ಪ ಮತ್ತು ಮತ ಕಂಪನಿಯವರು ಹಗಲುಗನಸು ಕಾಣುತ್ತಿದ್ದಾರೆ.

ರಾಜ್ಯಾದ್ಯಂತ ಹಮ್ಮಿಕೊಳ್ಳಲಾದ ಸಂಕಲ್ಪಯಾತ್ರೆಯ ಸಮಯದಲ್ಲಿ ಬಿಜೆಪಿಯ ಪರವಾದ ಒಂದು ಅಲೆ ಎದ್ದಿರುವುದು ಸ್ಪಷ್ಟವಾಗಿ ಗೋಚರಿಸಿದೆ ಎಂದು ಬಿ.ಎಸ್. ಯಡಿಯೂರಪ್ಪ ಹೇಳುತ್ತಾ ಹೊರಟಿದ್ದಾರೆ. ಯಾತ್ರೆಯ ಬಗ್ಗೆ ಬಿನ್ನ ವರದಿಗಳಿವೆ, ಕೆಲವೊಂದು ಜಿಲ್ಲೆಗಳಲ್ಲಿ ಇವರ ಯಾತ್ರೆ ಸುದ್ದಿಯಾಗಲೇ ಇಲ್ಲ. ಈ ಕೊರತೆಯನ್ನು ನೀಗಿಸಲು ಹುಬ್ಬಳ್ಳಿಯಲ್ಲಿ ಏರ್ಪಡಿಸಲಾಗಿದ್ದ ಯಾತ್ರೆಯ ಮುಕ್ತಾಯ ಕಾರ್ಯಕ್ರಮಕ್ಕೆ ಬಾರೀ ಒತ್ತು ನೀಡಲಾಯಿತು. ಕೋಟಿಗಟ್ಟಲೆ ರೂಪಾಯಿ ಖರ್ಚುಮಾಡಿ ಲಕ್ಷಗಟ್ಟಲೆ ಬಾಡಿಗೆ ಜನರ ಜಾತ್ರೆಯೊಂದನ್ನು ಅದ್ದೂರಿಯಾಗಿ ಅಲ್ಲಿ ನಡೆಸಲಾಯಿತು. ಹುಬ್ಬಳ್ಳಿಗೆ ಬಂದವರೆಲ್ಲರೂ, ಬಿಜೆಪಿ ಗೆ ಮತ ನೀಡುವರೆ?

ಯಾವ ಸಾಧನೆಗೆ ಮತ ನೀಡಬೇಕು?

ಬಿಜೆಪಿಗೆ ಕರ್ನಾಟಕದ ಜನತೆ ಏತಕ್ಕಾಗಿ ಮತ ನೀಡಬೇಕು? ಕೇಂದ್ರದಲ್ಲಿ ಅಧಿಕಾರ ನಡೆಸಿದ ಬಿಜೆಪಿ ಸರ್ಕಾರದ ಸಾಧನೆಯನ್ನು ಜನತೆಗೆ ತಿಳಿಸಬೇಕು ಎಂದು ಬಿಜೆಪಿ ಯ ಮುಖ್ಯಮಂತ್ರಿ ಚಂದ್ರು ಹಾವೇರಿಯಲ್ಲಿ ಹೇಳಿದ್ದಾರೆ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಯಾವ ಸಾಧನೆಗಾಗಿ ಕರ್ನಾಟಕದ ಜನ ಬಿಜೆಪಿಗೆ ಮತ ಹಾಕಬೇಕು? ಅಗತ್ಯ ವಸ್ತುಗಳ ಬೆಲೆಯೇರಿಕೆಯ ಇಲ್ಲಿಯವರೆಗಿನ ದಾಖಲೆಗಳನ್ನು ಮೀರಿಸಿದ ಸಾಧನೆಗಾಗಿ ಬಿಜೆಪಿಗೆ ಮತ ನೀಡಬೇಕೆ? ಬಡವರಿಗೆ ರೊಟ್ಟಿಯೊಂದಿಗೆ ತಿನ್ನಲು ಕನಿಷ್ಟ ಈರುಳ್ಳಿ ಸಹ ಸಿಗದಂತೆ ಮಾಡಿದ ಸಾಧನೆಗಾಗಿ ಬಿಜೆಪಿಗೆ ಮತ ನೀಡಬೇಕೆ? ಕ್ರಿಸ್ತ ಸನ್ಯಾಸಿನಿಯರ ಮೇಲೆ ನಡೆದ ಮಾನಭಂಗ ಪ್ರಕರಣವನ್ನು ಸಮರ್ಥಿಸಲು ಹೇಸದ ಇವರ ಸಂಘ ಪರಿವಾರದ ಪೌರುಷಕ್ಕಾಗಿ ಬಿಜೆಪಿಗೆ ಮತ ನೀಡಬೇಕೆ?

ಅಲ್ಪಸಂಖ್ಯಾತರ ಪ್ರಾರ್ಥನಾ ಸ್ಥಳಗಳನ್ನು ಕೆಡವಿ ಹಾಕಲು, ಅವರ ಧರ್ಮಗ್ರಂಥಗಳನ್ನು ನಾಶಮಾಡಲು, ಅವರ ಮತ ಪ್ರಚಾರಕರನ್ನು ಜೀವಂತ ಸುಟ್ಟುಹಾಕಲು ಬೆಂಬಲ ನೀಡುವ ಸರ್ಕಾರವೊಂದು ಕರ್ನಾಟಕದಲ್ಲಿ ಅಧಿಕಾರವಹಿಸಿಕೊಳ್ಳಬೇಕೆ? ಕಾರ್ಗಿಲ್ ಕದನಕ್ಕೆ ಕಾರಣರಾದ ಇವರ ಪ್ರೋಕ್ರಾನ್ ಯುದ್ಧೋನ್ಮಾದಕ್ಕಾಗಿ ಇವರಿಗೆ ಮತ ಹಾಕಬೇಕೆ?

ಬಿಜೆಪಿ ಬೆಳೆದು ಬಂದ ರೀತಿ, ರಾಜ್ಯದ ಬಿಜೆಪಿ ನಾಯಕರು ಕೆಲಸ ಮಾಡಿದ ರೀತಿ ನನಗೆ ತುಂಬಾ ಹಿಡಿಸಿದೆ, ಆದ್ದರಿಂದ ನಾನು ಬಿಜೆಪಿ ಸೇರಿದ್ದೇನೆ" ಎಂದು ಇತ್ತೀಚಿಗೆ ಬಿಜೆಪಿಗೆ ಸೇರಿರುವ ಚಲನಚಿತ್ರ ನಟ ಶ್ರೀನಾಥ್ ಹೇಳಿದ್ದಾರೆ. 1985 ರಲ್ಲಿ ಕೇವಲ 2 ವಿಧಾನಸಭಾ ಸ್ಥಾನಗಳನ್ನು ಗಳಿಸಿದ್ದ ಬಿಜೆಪಿ 1989 ರಲ್ಲಿ 4 ಸ್ಥಾನಗಳನ್ನು ಮತ್ತು 1994 ರಲ್ಲಿ 40 ಸ್ಥಾನಗಳನ್ನು ಗೆದ್ದಿರುವುದು ವಿಚಿತ್ರವಾಗಿ ಕಾಣಬಹುದು. ರಾಜ್ಯದಲ್ಲಿ ಸಂದರ್ಭ ಸಿಕ್ಕಾಗಲೆಲ್ಲಾ ಕೋಮು ಗಲಭೆಗಳನ್ನು ಹುಟ್ಟುಹಾಕುವ ಮೂಲಕವೇ ಬಿಜೆಪಿ ಬೆಳೆದು ಬಂದದ್ದು. ಈದ್ಗಾ ವಿವಾದವನ್ನು ಹುಟ್ಟುಹಾಕಿ ಹುಬ್ಬಳ್ಳಿ ನಗರದ ಜನಗಳ ನೆಮ್ಮದಿ ಹಾಳು ಮಾಡಿದ್ದು ಬಿಜೆಪಿ ನಾಯಕರು. ಇತ್ತೀಚಿಗೆ ಬಾಬಾಬುಡಾನ್‌ಗಿರಿಯಲ್ಲಿ ಶತಮಾನಗಳಿಂದ ನೆಲೆನಿಂತ ಶಾಂತಿಯನ್ನು ಕದಡಲು ಇವರು ಮಾಡಿದ ಹುನ್ನಾರ, ದ.ಕ ಜಿಲ್ಲೆಯ ಸುರತ್ಕಲ್‌ನಲ್ಲಿ ಹಚ್ಚಿದ ದುಳ್ಳುರಿ ಇನ್ನೂ ಹೊಗೆಯಾಡುತ್ತಿರುವುದನ್ನು ನೋಡಿ ತುಂಬಾ ಪ್ರಭಾವಿತರಾಗಿ ಚಲನಚಿತ್ರ ನಟ ಶ್ರೀನಾಥ ಬಿಜೆಪಿಗೆ ಸೇರುತ್ತಾರೆ!

ಶ್ರೀನಾಥರೇ ಆಗಲಿ, ಇನ್ಯಾರೇ ಆಗಲಿ, ಯಾವುದೇ ರಾಜಕೀಯ ಪಕ್ಷವನ್ನು ಸೇರುವ ಅವರ ಹಕ್ಕನ್ನು ಪ್ರಶ್ನಿಸಲಾಗದು, ಒಂದು ಪಕ್ಷದ ಸಿದ್ಧಾಂತ, ತತ್ವ ಮತ್ತು ವಿಚಾರಧಾರೆಯನ್ನು ಮೆಚ್ಚಿ ಯಾರಾದರೂ ಯಾವುದಾದರೂ ರಾಜಕೀಯ ಪಕ್ಷವನ್ನು ಸೇರಬಹುದು. ಆದರೆ ಭಾರೀ ಮೌಲ್ಯಧಾರಿತ ಪಕ್ಷವೆಂದು ಹೇಳಿಕೊಳ್ಳುವ ಬಿಜೆಪಿಗೆ ಚುನಾವಣಾ ಪ್ರಚಾರದ ಸಮಯದಲ್ಲಿ ಮತದಾರರನ್ನು ಆಕರ್ಷಿಸಲು ಸಿನಿಮಾ ತಾರೆಯರ ಮೊರೆ ಹೋಗಬೇಕಾಗಿ ಬಂದಿರುವುದು ಅದರ ಅಸಹಾಯಕತೆಯ ದ್ಯೋತಕವಾಗಿದೆ. ತಮಿಳುನಾಡಿನ ಮುಖ್ಯಮಂತ್ರಿ ಎಂ. ಕರುಣಾನಿಧಿ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿರುವುದಕ್ಕೆ ಕರ್ನಾಟಕದಲ್ಲಿ ಶ್ರೀನಾಥ್ ಬಿಜೆಪಿ ಸೇರುವುದಕ್ಕೂ ಸಂಬಂಧವಿದೆ ಎಂದು ಕೇಳಿಬರುತ್ತಿರುವ ಸುದ್ದಿಯಲ್ಲಿ ಸಂತ್ಯಾಂಶ ಇರಬಹುದು. ಮೊದಲಿನಿಂದಲೂ ಸಂಘಪರಿವಾರದ ಮನೋಭೂಮಿಕೆಯನ್ನು ಹೊಂದಿರುವ ಶ್ರೀನಾಥ್ "ರೋಗಿ ಬಯಸಿದ್ದೂ ಹಾಲು, ವೈದ್ಯಕೊಟ್ಟದ್ದೂ ಹಾಲು" ಎಂಬಂತಾಗಿದೆ.

ಬಣ್ಣ ಬದಲಾಯಿಸುವ ವೇಷಗಾರರು

ರಾಜಕೀಯ ಲಾಭಕ್ಕಾಗಿ ಕಾಲಕ್ಕೆ ತಕ್ಕಂತೆ ವೇಷ ಬದಲಾಯಿಸುವುದರಲ್ಲಿ ರಾಜ್ಯದ ಬಿಜೆಪಿ ಯವರದು ಎತ್ತಿದ ಕೈ. ಹಿಂದೊಮ್ಮೆ ಇವರು ಹಸಿರು ಟವೆಲನ್ನು ಹಾಕಿಕೊಂಡು ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಾ ಅಡ್ಡಾಡಿದರು, ಅಧಿಕಾರದ ಏಣಿ ಏರಲು ಕಾತರಿಸುತ್ತಿದ್ದ ಮಾಜಿ ರೈತ ದುರೀಣ ಬಾಬಗೌಡ ಪಾಟೀಲ್ ಒಂದೇ ನೆಗೆತಕ್ಕೆ ಎಂ.ಪಿ ಆದರು, ಮಂತ್ರಿಯೂ ಆದರೂ. ಈಗ ಬಾಬಾಗೌಡನ ಹೆಸರು ತೆಗೆದೊಡನೆ ಉತ್ತರ ಕರ್ನಾಟಕದ ರೈತರು(ಅವರ ಭಾಷೆಯಲ್ಲಿ ಹೇಳುವುದಾದರೆ) ಕ್ಯಾಕರಿಸಿ ಉಗುಳುತ್ತಾರೆ ರೈತರ ಹೆಸರು ಹೇಳಿ ಮೇಲೆ ಬಂದಿರುವ ಗೌಡರು ಈಗ ಮೇಲೇರಿದ ಏಣಿಯನ್ನೇ ಒದೆಯತೊಡಗಿದ್ದಾರೆ. ಉದಾರೀಕರಣ ನೀತಿಯ ಭಾಗವಾಗಿ ಕೇಂದ್ರದ ಬಿಜೆಪಿ ಸರ್ಕಾರ ಜಾರಿಗೆ ತಂದ ಆಮದು ರಪ್ತು ನೀತಿಯಿಂದಾಗಿ ಕೃಷಿರಂಗ ವಿನಾಶದ ಹಾದಿ ಹಿಡಿದು ರೈತರು ದಿವಾಳಿಯಾಗಿ ಆತ್ಮಹತ್ಯೆ ಮಾಡಿಕೊಂಡರೂ ಬಾಬಾಗೌಡರು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಅತಿವೃಷ್ಟಿ ಅನಾವೃಷ್ಟಿಯಿಂದ ರಾಜ್ಯದ ರೈತರು ದಿಕ್ಕೆಟ್ಟರೂ ಅವರ ನೆರವಿಗೆ ಧಾವಿಸಲಿಲ್ಲ. ನಕಲಿ ಬೀಜ, ನಕಲಿ ಗೊಬ್ಬರ, ನಕಲಿ ಕ್ರಿಮಿನಾಶಕಗಳನ್ನು ಪೂರೈಸುತ್ತಿರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಕಡಿವಾಣ ಹಾಕಲು ಮುಂದಾಗಲಿಲ್ಲ. ಕೃಷಿ ಅಭಿವೃದ್ಧಿಗೆ ಕೇಂದ್ರದ ಬಜೆಟ್ ನಲ್ಲಿ ಹೆಚ್ಚು ಹಣವನ್ನು ಮೀಸಲಿಡಿಸಲು ಪ್ರಯತ್ನಪಡಲಿಲ್ಲ. ಈಗ ಲೋಕ ಸಭೆಗೆ ಆಯ್ಕೆಯಾಗಿ ರಾಜ್ಯದಲ್ಲಿ ಮಂತ್ರಿಯಾಗುವುದು, ಮುಖ್ಯಮಂತ್ರಿಯಾಗುವುದು ಹೆಚ್ಚು ಶ್ರೇಯಸ್ಕರ ಎಂದುಕೊಂಡಿರುವ ಬಾಬಾಗೌಡರಿಗೆ ಈ ಸಲ ಸರಿಯಾದ ಪಾಠ ಕಲಿಸಲು ರೈತರು ಸನ್ನದ್ಧರಾಗುತ್ತಿದ್ದಾರೆ. ಉತ್ತರ ಕರ್ನಾಟಕದ ಜನತೆಗೆ ಭಾರೀ ಅನ್ಯಾಯ ವಾಗಿದೆ ಎಂದು ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬಿಜೆಪಿ ಹೊಸದೊಂದು ನಾಟಕವನ್ನು ಆರಂಭಿಸಿದೆ. ಉತ್ತರ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಸಂಚರಿಸಿ ಈ ಭಾಗದ ಜನತೆಗೆ ರಾಜ್ಯ ಸರ್ಕಾರಗಳಿಂದ ಮತ್ತು ಹಿಂದಿನ ಕೇಂದ್ರ ಸರ್ಕಾರಗಳಿಂದ ಆಗಿರುವ ತಾರತಮ್ಯದ ಕುರಿತು ಅಧ್ಯಯನ ಮಾಡಿ ವರದಿ ಸಲ್ಲಿಸಲು ಬಿಜೆಪಿ ಒಂದು ಸಮಿತಿಯನ್ನು ರಚಿಸಿದೆಯಂತೆ. ಸಮಿತಿಯು ಈಗಾಗಲೇ ತನ್ನ ಪ್ರವಾಸವನ್ನು ಮುಗಿಸಿದ್ದು ಜೂಲೈ 7 ರಂದು ತನ್ನ ವರದಿಯನ್ನು ಸಲ್ಲಿಸಲಿದೆಯಂತೆ. ಸಮಿತಿಯ ಶಿಫಾರಸ್ಸುಗಳನ್ನು ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಲಾಗುವುದಂತೆ. ಉತ್ತರ ಕರ್ನಾಟಕದ ಬಗ್ಗೆ ಬಿಜೆಪಿಗೆ ಎಲ್ಲಿಲ್ಲದ ಅನುಕಂಪ ಹುಟ್ಟಿರುವ ಬಗ್ಗೆ ಈ ಭಾಗದಲ್ಲಿ ಯಾರೂ ತಲೆಕೆಡಿಸಿಕೊಂಡಿಲ್ಲ. ಉತ್ತರಕರ್ನಾಟಕದ ಜನತೆಯ ಬಗ್ಗೆ ಬಿಜೆಪಿಗೆ ಇರುವ ಕಾಳಜಿಯ ಬಣ್ಣ ನೈರುತ್ಯ ರೈಲ್ವೆ ವಲಯದ ಕಛೇರಿಯನ್ನು ಹುಬ್ಬಳ್ಳಿಗೆ ಸ್ಥಳಾಂತರಿಸುವ ವಿವಾದ ದಲ್ಲಿ ಬಯಲಾಗಿದೆ. ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸುವುದು ಸಾಧ್ಯವೇ ಇಲ್ಲ ಎಂದು ಬಿಜೆಪಿಯ ಕೇಂದ್ರ ರೈಲ್ವೆ ಮಂತ್ರಿಗಳು ಹೇಳಿಕೆ ನೀಡುತ್ತಲೇ ಇದ್ದರು. ಧಾರವಾಡ ಉತ್ತರ ಕ್ಷೇತ್ರದ ಎಂ.ಪಿ. ಬಿಜೆಪಿಯ ವಿಜಯ ಸಂಕೇಶ್ವರ ಹುಬ್ಬಳಿಯಲ್ಲಿ ಕಛೇರಿ ಸ್ಥಳಾಂತರವನ್ನು ಒತ್ತಾಯಿಸಿ ತನ್ನ ಸಂಸತ್ ಸದಸ್ಯ ಸ್ಥಾನಕ್ಕೆ ರಾಜಿನಾಮೆ ನೀಡುವ ಬೆದರಿಕೆಯ ಹುಸಿ ಬಾಂಬ್ ಸಿಡಿಸಿದ್ದರು. ಬಿಜೆಪಿಗೆ ಕೇಂದ್ರದಲ್ಲಿ ತನ್ನ ಸರ್ಕಾರ ಪತನವಾಗುವುದು ಹೆಚ್ಚು ಕಡಿಮೆ ಖಚಿತವಾದಾಗ ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟು ಅದು ಬೆಂಗಳೂರಿನಲ್ಲಿ ಕೆಲಸಮಾಡುತ್ತಿರುವ ವಲಯ ಕಛೇರಿಯನ್ನು ಹುಬ್ಬಳಿಗೆಸ್ಥಳಾಂತರಿಸುವ ಘೋಷಣೆ ಮಾಡಿತು. ಮುಗ್ಧ ಕನ್ನಡಿಗರು ಅದನ್ನು ನಂಬಿದರು ! ಕಛೇರಿ ಸ್ಥಳಾಂತರದ ಪರ ಹಾಗೂ ವಿರುದ್ಧ ಹಾಹಾಕಾರ ವ್ಯಕ್ತವಾಯಿತು. ಕರ್ನಾಟಕ ರಾಜ್ಯವೇ ಒಡೆದು ಹೋಗುವ ಪರಿಸ್ಥಿತಿ ನಿರ್ಮಾಣ ವಾಗುವಂತಾಯಿತು. ಕೆಲವರು ನ್ಯಾಯಾಲಯಕ್ಕೆ ಧಾವಿಸಿ ತಡೆಯಾಜ್ಞೆಯನ್ನು ಸಹ ಪಡೆದರು. ಇವತ್ತಿಗೂ ಬಹಳಷ್ಟು ಜನಗಳಿಗೆ ವಲಯ ಕಛೇರಿಯ ಹೆಸರಿನಲ್ಲಿ ಬಿಜೆಪಿ ಕನ್ನಡಿಗರಿಗೆ ಮಾಡಿದ ಮೋಸ ಇನ್ನೂ ಅರ್ಥವಾಗಿಲ್ಲ.

ನೈರುತ್ಯ ರೈಲ್ವೆ ವಲಯ ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ವರ್ಗಾಯಿಸುವ ಬಗ್ಗೆ ಕೇಂದ್ರ ಬಿಜೆಪಿ ಸರ್ಕಾರ ತೀರ್ಮಾನವನ್ನೇ ಕೈಗೊಂಡಿರಲಿಲ್ಲ. ಹಾಗೆ ತೀರ್ಮಾನ ಕೈಗೊಳ್ಳುವುದು ಸಾಧ್ಯವೂ ಇರಲಿಲ್ಲ. ಅಷ್ಟರಲ್ಲಿ ರೈಲ್ವೆ ಬಜೆಟ್ ಅನುಮೋದನೆ ಯಾಗಿಬಿಟ್ಟಿತ್ತು. ರೈಲ್ವೆ ಮಂಡಳಿಯ ಪ್ರಸ್ತಾವನೆ ಪಾರ್ಲಿ ಮೆಂಟಿನಲ್ಲಿ ಚರ್ಚೆಯಾದ ನಂತರವೇ ರೈಲ್ವೆ ಕುರಿತಾದ ಯಾವುದೇ ತೀರ್ಮಾನ ಜಾರಿಗೆ ಬರುವುದು ಸಾಧ್ಯ. ರೈಲ್ವೆ ವಲಯ ಕಛೇರಿಯನ್ನು ಹುಬ್ಬಳ್ಳಿಗೆ ಸ್ಥಳಾಂತರಿಸುವ ಕುರಿತು ಪ್ರಾಥಮಿಕ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲು ಬೆಂಗಳೂರು ನೈರುತ್ಯ ರೈಲ್ವೆ ವಲಯ ಕಛೇರಿಯ ವಿಶೇಷಾಧಿಕಾರಿಗೆ ಪತ್ರವೊಂದನ್ನು ಬರೆಯಲಾಗಿತ್ತೆ ವಿನಃ ಅದು ಸ್ಥಳಾಂತರದ ಆಜ್ಞೆ ಆಗಿರಲಿಲ್ಲ. ಬಿಜೆಪಿಯ ನಾಟಕ ಅಲ್ಲಿಗೇ ಮುಗಿಯಲಿಲ್ಲ. ಹುಬ್ಬಳ್ಳಿಯಲ್ಲಿ ವಲಯ ಕಛೇರಿಯನ್ನು ಪ್ರಧಾನಿ ವಾಜಪೇಯಿ ಅವರು ಉದ್ಘಾಟಿಸುವ ಕಾರ್ಯಕ್ರಮವನ್ನೇ ರೂಪಿಸಲಾಯಿತು. ಸ್ವತಃ ಪ್ರಧಾನಿ ವಾಜಪೇಯಿಯವರು ಕನ್ನಡಿಗರ ಕಣ್ಣಿಗೆ ಮಂಕು ಬೂದಿ ಎರಚಲು ಮುಂದಾದರು ನ್ಯಾಯಾಲಯದಿಂದ ಬಂದ ತಡೆಯಾಜ್ಞೆ ವಾಜಪೇಯಿಯವರ ನೆರವಿಗೆ ಬಂದಂತಾಯಿತು.

ವಲಯ ಕಛೇರಿ ಉದ್ಘಾಟನೆಯನ್ನು ದಿಢೀರನೇ ಬದಲಾಯಿಸಿ ಹುಬ್ಬಳ್ಳಿ

ಪುಟ 4 ನೋಡಿ

ಈಗ ಎರಡನೇ ಟೆಲಿಕಾಂ ಹಗರಣ!

ಎರಡು ವಾರಗಳ ಹಿಂದೆ ಸಂಪರ್ಕ ಖಾತೆಯ ಮಂತ್ರಿ ಜಗಮೋಹನ್ ರ ಖಾತೆ ಬದಲಾವಣೆ ಮಾಡಿದ್ದು ನಿಮಗೆ ನೆನಪಿದೆಯೆ? 4500 ಕೋಟಿ ರೂಪಾಯಿ ಬಾಕಿ ಇಟ್ಟುಕೊಂಡ ಬಾರಿ ಬಂಡವಾಳಶಾಹಿ ಕುಳಗಳ ಎದುರು ಮಂಡಿ ಯೂರಿದೆ ಎಂದು ಆಗ ನಾವು ಹೇಳಿದ್ದೆವು.ಅದು ಈಗ ನಿಜವಾಗಿದೆ. ಕಾರ್ಗಿಲ್‌ನ ಗಂಭೀರ ಪರಿಸ್ಥಿತಿಯ ನಡುವೆಯೂ ಈ ಉಸ್ತುವಾರಿ ಸರಕಾರ ತನ್ನ ಹದ್ದುಮೀರಿವರ್ತಿಸಿ ಟೆಲಿಕಾಂ ವಲಯದ ದೊಡ್ಡ ಕುಳಗಳಿಗೆ 4500 ಕೋಟಿ ರೂಪಾಯಿಗಳ ಭಾರೀ ಭಕ್ಷೀಸು ನೀಡುವ ನಿರ್ಣಯವನ್ನು ಯಾವುದೇ ನಾಚಿಕೆಯಿಲ್ಲದೆ ಕೈಗೊಂಡಿದೆ. ಈ ಮೂಲಕ ಸಾರ್ವಜನಿಕ ಖಜಾನೆಯ ಈ ಬಾರೀ ಲೂಟಿಯನ್ನು ಕಾನೂನುಬದ್ಧಗೊಳಿಸಲು ಮುಂದಾಗಿದೆ ಲೋಕಸಭೆಯಲ್ಲಿ ಸೋತು ಸ್ವತಃ ಕಾನೂನು ಬದ್ಧತೆಯನ್ನು ಕಳೆದುಕೊಂಡ ಈ ಸರ್ಕಾರ.

ಜುಲೈ 6 ರಂದು ತನ್ನ ಉಸ್ತುವಾರಿ ಸ್ವರೂಪವನ್ನು ಮತ್ತೊಮ್ಮೆ ಮೆರತು ತರಾತುರಿಯಿಂದ ಕೆಲವು ನಿರ್ಣಯುಗಳನ್ನು ಕೈಗೊಂಡಿದೆ. ಮುಂಬರುವ ಚುನಾವಣೆಗಳ ಮೇಲೆ ಕಣ್ಣಿಟ್ಟುಹಣದ ಥೈಲಿಗಳನ್ನು ಓಲೈಸಲಿಕ್ಕಾಗಿ ಎಂಬುದು ಸ್ಪಷ್ಟ. ಮುಂದಿನ ತನ್ನ ಚುನಾವಣೆಗಳ ಉಸ್ತುವಾರಿ ನೋಡುವುದೇ ತನ್ನ ಕೆಲಸ ಎಂದು ಅದು ಭಾವಿಸಿದಂತಿದೆ.

ಮೊದಲನೆಯದಾಗಿ 4500 ಕೋಟಿ ರೂಪಾಯಿಗಳಷ್ಟು ಲೈಸೆನ್ಸ್ ಶುಲ್ಕ ಬಾಕಿಯಿಟ್ಟುಕೊಂಡಿರುವ ಟೆಲಿಕಾಂ ಕಂಪನಿಗಳು ಮುಂದಿನ ಆರು ತಿಂಗಳವರೆಗೆ ಲೈಸೆನ್ಸ್ ಪಾವತಿ ಮಾಡಬೇಕಾಗಿಲ್ಲ, ಅವರ ವಿರುದ್ಧ ಇರುವ ಎಲ್ಲಾ ಕೇಸುಗಳನ್ನು ಹಿಂತೆಗೆದುಕೊಳ್ಳಲಾಗುತ್ತದೆ. ಅಷ್ಟೇ ಅಲ್ಲ ಆಗಸ್ಟ್ 1 ರಿಂದ ಅವರು ಲೈಸೆನ್ಸ್ ಶುಲ್ಕ ವಿಧಾನದ ಬದಲು ಆದಾಯ ಹಂಚಿಕೊಳ್ಳುವವಿಧಾನವನ್ನು ಅನುಸರಿಸಲು ಅವಕಾಶ ನೀಡಲಾಗಿದೆ. ಈ ಮೂಲಕ ಅಂಬಾನಿ, ಟಾಟಾ, ಎಸ್ಸಾರ್, ಇಸ್ಪಾತ್ ಮುಂತಾದ ಟೆಲಿಕಂ ವಲಯದ ದೊಡ್ಡ ಕುಳಗಳಿಗೆ ಅಪಾರ ಲಾಭ ಮಾಡಿಕೊಡಲಾಗಿದೆ.

ವಾಸ್ತವವಾಗಿ ಈ ಬದಲಾವಣೆಗಳು ಕಾನೂನುಬಾಹಿರ: ಏಕೆಂದರೆ ಸಂಸತ್ತಿನ ಮುಂದೆ ದೂರಸಂಪರ್ಕ ನೀತಿಯನ್ನು ಮಂಜೂರಾತಿಗೆ ಸಲ್ಲಿಸಲಾಗಿದೆ. ಅದನ್ನು ಮತ್ತೆ ಸಂಸತ್ತಿನ ಒಪ್ಪಿಗೆ ಪಡೆಯದೆ ಬದಲಾಯಿಸುವ ಹಕ್ಕು ಯಾರಿಗೂ ಇಲ್ಲ. ವಿಶ್ವಾಸಮತಕಳೆದುಕೊಂಡ ಪಕ್ಷಕ್ಕಂತೂ ಇಲ್ಲವೇ ಇಲ್ಲ. ಜಗಮೋಹನ್ ರವರ ವರ್ಗಾವಣೆಯ ನಂತರ ಟೆಲಿಕಾಂ ಇಲಾಖೆಯಲ್ಲಿ ಭಾರೀ ಕಮಿಷನ್ ನುಂಗಿದ ದೊಡ್ಡ ಹಗರಣವೊಂದು ನಡೆದಿದೆ ಎಂಬುದರ ಸಂಕೇತ ಇದು.

40 ನಗರಗಳಲ್ಲಿ ಎಫ್.ಎಂ. ರೇಡಿಯೋ ಪ್ರಸಾರವನ್ನು ಖಾಸಗಿ ಹರಾಜು ಮಾಡುವ ನಿರ್ಣಯವೂ ಇದೇ ರೀತಿಯದು.

ಇಷ್ಟೇ ಅಲ್ಲ ಹಲವು ಸಾರ್ವಜನಿಕ ವಲಯದ ಕಂಪನಿಗಳ ಶೇರುಗಳಲ್ಲಿ ಪ್ರಮುಖ ಪಾಲನ್ನು ಮಾರುವ ನಿರ್ಧಾರವನ್ನೂ ಈ ಸರ್ಕಾರ ಕೈಗೊಂಡಿದೆ. ಎಂ.ಟಿ.ಎನ್.ಎಲ್., ವಿ.ಎಸ್.ಎನ್.ಎಲ್, ಜಿ.ಎ.ಐ.ಎಲ್. ಮತ್ತು ಐ.ಓ.ಸಿ. ಇವೇ ಆ ಪ್ರಮುಖ ಕಂಪನಿಗಳು. ಈ ಹಿಂದೆ ಲೋಕಸಭೆಯಲ್ಲಿ ವಿಶ್ವಾಸಮತ ಕಳೆದುಕೊಂಡ ಕೆಲವೇ ಗಂಟೆಗಳಲ್ಲಿ ಇಂಡಿಯನ್ ಏರ್‌ಲೈನ್ಸ್ ಮತ್ತು ಏರ್ ಇಂಡಿಯಾವನ್ನು ಖಾಸಗೀಕರಿಸುವ ಈ ಸರ್ಕಾರದ ನಿರ್ಣಯದ ಬಗ್ಗೆ ರಾಷ್ಟ್ರಪತಿಗಳು ಎಚ್ಚರನೀಡಿದ್ದರೂ ಲೆಕ್ಕಿಸದೆ ಬಿಜೆಪಿ ಈ ಕ್ರಮಗಳನ್ನುಕೈಗೊಂಡಿದೆ.

ಈ ಹಿಂದೆ ಮಾರುತಿ ಕಂಪನಿಯನ್ನು ಸುಜಿಕಿಯವರಿಗೆ ಮಾರಾಟ ಮಾಡಿದ ವಿಷಯ ನಿಮಗೆ ನೆನಪಿರಬಹುದು. ಈಗ ವಿದ್ಯುತ್ ವಲಯದಲ್ಲೂ ಇಂತಹುದೇ ಪ್ರಯತ್ನ ನಡೆದಿದೆ. ಎನ್.ಟಿ.ಪಿ.ಸಿ. ಯ ಒಂದು ವಿದ್ಯುತ್ ಯೋಜನೆಗೆ ಬಿ.ಹೆಚ್.ಇ.ಎಲ್. ಅತಿ ಕಮ್ಮಿ ಬಿಡ್ ಸಲ್ಲಿಸಿದ್ದರೂ ಅದರಕಾಂಟ್ರಾಕ್ಟ್‌ನ್ನು ವಿದೇಶಿ ಬಹುರಾಷ್ಟ್ರೀಯ ಕಂಪನಿ ಎ.ಬಿ.ಬಿ.ಗೆ ಕೊಡಿಸಲು ವಿದ್ಯುತ್ ಮಂತ್ರಿಗಳು ಶತಪ್ರಯತ್ನ ನಡೆಸಿದ್ದಾರಂತೆ. ಇವೆಲ್ಲದರ ಹಿಂದೆ ಕೋಟಿಗಟ್ಟಲೆ ಡಾಲರುಗಳ ಕಮಿಶನ್ ನುಂಗುವ ಮಸಲತ್ತು ಇದೆಯೆಂಬುದನ್ನು ಗಮನಿಸಬೇಕು. ಹಗರಣಗಳ ಸೃಷ್ಟಿಯಲ್ಲಿ ನರಸಿಂಹ ರಾವ ಸರ್ಕಾರವನ್ನೂ ಹಿಂದೆ ಹಾಕುವ ತರಾತುರಿಯಲ್ಲಿ ಈ ಉಸ್ತುವಾರಿ ಸರ್ಕಾರ ಇದ್ದಂತಿದೆ.

ಜುಲೈ 16 ರಂದು ಪ್ರತಿಭಟನೆ

ಕೇಂದ್ರದಲ್ಲಿನ ಉಸ್ತುವಾರಿ ವಾಜಪೇಯಿ ಸರಕಾರ ಮತ್ತೊಮ್ಮೆ ತನ್ನ ಹದ್ದುಮೀರಿ ಜನಗಳ ಮೇಲೆ, ದೇಶದ ಮೇಲೆ ದುಷ್ಪರಿಣಾಮ ಬೀರುವಂತಹ ಈ ನಿರ್ಣಯಗಳನ್ನು ಕೈಗೊಂಡಿರುವುದನ್ನು ವಿರೋಧಿಸಲು ಜುಲೈ 16 ರಂದು ದೇಶಾದ್ಯಂತ 'ಪ್ರತಿಭಟನಾ ದಿನ'ವನ್ನು ಆಚರಿಸಲು ಸಿಪಿಐ(ಎಂ) ಹಾಗೂ ಸಿಪಿಐ ಜಂಟಿಯಾಗಿ ಕರೆ ನೀಡಿವೆ.

ನಾನು ಶಾಸಕನಾಗುತ್ತೇನೆಂದು ಎಂದೂ ಕನಸು ಕಂಡಿರಲಿಲ್ಲ. ಆದರೆ ಪಕ್ಷದ ಯೋಜನೆಯೇ ಬೇರೆಯಿತ್ತು. ಅದರ ನಿರ್ದೇಶನಗಳನ್ನು ನಾನು ಕಲಿಸಬೇಕಿತ್ತು. ಇತರ ಕೆಲವು ಅಭ್ಯರ್ಥಿಗಳೂ ಇದ್ದರು. ಕಲ್ಕತ್ತದಿಂದ ಸೋಮನಾಥಲಾಹಿರಿ, ಹೌರಾದಿಂದ ಬಂಕಿಮ್ ಮುಖರ್ಜಿ, ಬ್ಯಾರಕ್‌ಪುರದಿಂದ ಚತುರ ಅಲಿ, ಡಾರ್ಜಿಲಿಂಗ್‌ನಿಂದ ರತನ್ ಲಾಲ್ ಬ್ರಹ್ಮನ್, ಜೆಸ್ಸೋರ್‌ನಿಂದ ಕೃಷ್ಣ ವಿನೋದ್ ರಾಯ್ ಅಸ್ಸನೋಲ್ ಮೈಮೆನ್ ಸಿಂಗ್ ಮತ್ತು ದಿನಾಜ್‌ಪುರ ಕ್ಷೇತ್ರಗಳಿಂದ ಕ್ರಮವಾಗಿ ಇಂದ್ರಜಿತ್ ಗುಪ್ತ, ಮೋನಿಸಿಂಗ್ ಹಾಗೂ ರೂಪಾ ನಾರಾಯಣರಾಯ್ ಸ್ಪರ್ಧಿಸಿದರು.

ನಾನು ರೈಲ್ವೆ ಕ್ಷೇತ್ರದ ಉಮೇದುವಾರನಾಗಿದ್ದೆ. ಅಸ್ಸಾಂ ಹೊರತು ಪಡಿಸಿ ಇಡೀ ಬಿ.ಎಸ್. ರೈಲ್ವೆ ಇದರ ವ್ಯಾಪ್ತಿಗೆ ಬರುತ್ತಿತ್ತು. ಸೂಕ್ತವಾದ ಮತಪತ್ರ ಹೊಂದಿದ ರೈಲ್ವೆ ನೌಕರ ಈ ಕ್ಷೇತ್ರದ ಮತದಾರರಾಗಿದ್ದ ಅವರು ಶಾಸಕರನ್ನು ಚುನಾಯಿಸಬೇಕಿತ್ತು. ರೈಲ್ವೆ ಎಂಪ್ಲಾಯಿಸ್ ಅಸೋಸಿಯೇಷನ್ ಅಧ್ಯಕ್ಷ ಹುಮಾಯೂನ್ ಕಬೀರ್ ನನ್ನ ಪ್ರತಿಸ್ಪರ್ಧಿ. ಹೋರಾಟ ತುಂಬಾ ಕಠಿಣವಾಗಿರುತ್ತದೆ ಎಂಬುದು ನನಗೆ ಗೊತ್ತಿತ್ತು. ಕಾಂಗ್ರೆಸ್ ಪೂರ್ಣ ಬಲದೊಂದಿಗೆ ಕಬೀರ್ ಬೆಂಬಲಕ್ಕೆ ನಿಂತಿತ್ತು. ಮೌಲಾನಾ ಅಬುಲ್ ಕಲಂ ಆಜಾದ್‌ರಂಥ ಘಟಾನುಘಟಿ ನಾಯಕರೇ ಕಬೀರ್ ಪರ ಪ್ರಚಾರಕ್ಕೆ ಬಂದರು. ನಮ್ಮ ಸ್ಥಿತಿಯಾದರೂ ತುಂಬಾ ಭಿನ್ನವಾಗಿತ್ತು. ನಮ್ಮ ಸಂಘ ಹೊಸದಾಗಿತ್ತು ಹಾಗೂ ಕಾರ್ಮಿಕರ ಮಧ್ಯೆ ನಮ್ಮ ಅಸ್ತಿತ್ವ ದೀರ್ಘ ಕಾಲದ್ದೇನೂ ಆಗಿರಲಿಲ್ಲ.


ಆದರೆ ನಮ್ಮ ಸಂಗಾತಿಗಳು ಈ ಸಮರದಲ್ಲಿ ಧೈರ್ಯದಿಂದ ಮುನ್ನುಗ್ಗಿದರು. ಬಿರುಗಾಳಿಯೋಪಾದಿಯಲ್ಲಿ ಬಂಗಾಳಾದಾದ್ಯಂತ ಪ್ರಚಾರ ಸಭೆಗಳನ್ನು ನಡೆಸಿದವು. ರೈಲ್ವೆ ನೌಕರರನ್ನು ಸಂಘಟಿಸಿ ನಮಗೆ ಮತ ನೀಡುವಂತೆ ಮನವಿ ಮಾಡಿದೆವು. ಕಬೀರ್ ಬೆಂಬಲಿಗರು ಬಹಳಷ್ಟು ತಂತ್ರಗಳನ್ನು ಹೂಡಿದರು. ಉನ್ನತ ಅಧಿಕಾರಿಗಳು ಮತಪತ್ರಗಳಲ್ಲೇ ಅಕ್ರಮಗಳನ್ನೆಸಗಿದರು. ಪ್ರತಿ ಮತದಾರರಿಗೆ ರಿಜಿಸ್ಟರ್ಡ್ ಅಂಚೆಯಲ್ಲಿ ಮತಪತ್ರಗಳನ್ನು ಕಳಿಸಬೇಕೆನ್ನುವುದು ನಿಯಮ. ಆದರೆ ಅಕ್ರಮಗಳ ಸುದ್ದಿಯ ಪ್ರವಾಹವೇ ಹರಿದು ಬರುತ್ತಿತ್ತು. ಖೋಟಾ ಮತದಾರರಿಗಷ್ಟೇ ಮತಪತ್ರಗಳು ತಲುಪುತ್ತಿದ್ದವು !

ಚಿತಾಪುರ ವಾರ್ಡ್‌ಗೆ 1000 ಮತ ಪತ್ರಗಳು ಅಂಚಿ ಕಛೇರಿಯಿಂದ ತಲುಪಿದವು ಎಂಬ ಸುದ್ದಿ ತಲುಪಿತು. ಒಬ್ಬನೇ ಒಬ್ಬ ಅಧಿಕಾರಿ ಎಲ್ಲಾ ಪತ್ರಗಳನ್ನು ಸ್ವೀಕರಿದ್ದು ತೀರಾ ಆಶ್ಚರ್ಯದ ಸಂಗತಿಯಾಗಿತ್ತು. ನಾವು ಬೇರೆ ದಾರಿಯಿಲ್ಲದೆ ಬೀದಿಗಿಳಿದೆವು.

ಮತಪತ್ರಗಳು ನೈಜ ಮತದಾರರಿಗೆ ತಲುಪುವತನಕ ಮುಷ್ಕರವನ್ನು ಮುಂದುವರೆಸಲು ನಿರ್ಧರಿಸಿದೆವು. ಹರತಾಳ ಆರಂಭವಾಯಿತು. ಅಧಿಕಾರಿಗಳಿಗೆ ಬಿಸಿ ಮುಟ್ಟಿತ್ತು. ನಿರ್ದಿಷ್ಟ ಮತದಾರ ಸಹಿ ಮಾಡಿದ್ದರೆ ಮಾತ್ರವೇ ಅದನ್ನು ಸಿಂಧು ಮತವೆಂದು ಪರಿಗಣಿಸಲಾಗುತ್ತದೆ ಎಂದು ಕೆಲವೇ ಗಂಟೆಗಳಲ್ಲಿ ರೈಲ್ವೆ ಅಧಿಕಾರಿಗಳು ನಮಗೆ ಆಶ್ವಾಸನೆ ನೀಡಿದರು. ಕಾರ್ಮಿಕರ ಮುಷ್ಕರದಿಂದ ಈ ನಿರ್ಧಾರ ಹೊರಬಿತ್ತು.

ಆದರೆ ನನಗೆ ಇನ್ನೂ ಅನುಮಾನ ಇದ್ದೇ ಇತ್ತು. ನಮ್ಮ ಚುನಾವಣಾ ಏಜೆಂಟರು ರೈಲ್ವೆ ಕಾಲೋನಿಗಳಲ್ಲಿ ಸುತ್ತಾಡಿದರು. ಕಾರ್ಮಿಕರನ್ನು ಜಾಗೃತಗೊಳಿಸಲಾಯಿತು. ನಮ್ಮ ಸಂದೇಶ ಸ್ಪಷ್ಟವಾಗಿತ್ತು. ರಿಗ್ಗಿಂಗ್(ಚುನಾವಣ ಅಕ್ರಮ) ಅವಕಾಶ ಕೊಡುವುದಿಲ್ಲ ಎಂದು ನಾವು ಘೋಷಿಸಿದೆವು. ಮತಪತ್ರಗಳು ನೈಜ ಮತದಾರರಿಗೆ ತಲುಪುವಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ ಎಂದು ಅಂಚಿ ಅಧಿಕಾರಿಗಳಿಗೂ ನಾವು ಎಚ್ಚರಿಕೆ ನೀಡಿದೆವು.

ಭಾರತದ ದುಡಿಯುವ ಅಪ್ರತಿಮ ನೇತಾರರ ಐದು ದಶಕಗಳಿಗೂ ಮಿಗಿದ 'ಮಾಸದ ನೆನಪು' ಗಳಲ್ಲಿ ಇದುವರೆಗೆ ಬಾಲ್ಯದಲ್ಲಿ ರಾಷ್ಟ್ರೀಯವಾದಿ ಆಂದೋಲನದ ಪರಿಚಯ, ಬ್ರಿಟನ್ನಿನಲ್ಲಿ ಅಂತರಾಷ್ಟ್ರೀಯ ರಾಜಕೀಯದ ಪರಿಚಯ, ಸಮಾಜವಾದ ಕಮ್ಯುನಿಸಂನತ್ತ ಒಲವಿನೊಂದಿಗೆ ಲಂಡನ್ ಬಿಟ್ಟು ಸ್ವದೇಶಕ್ಕೆ ಮರಳಿ ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾಗಿ ದುಡಿಯಲಾರಂಭಿಸಿದಾಗ ಪಕ್ಷದ ಭೂಗತ ಮುಖಂಡರಿಗೆ ನೆಲೆ ಒದಗಿಸುವುದು, ಯಾತ್ರೆಗಳನ್ನು ಏರ್ಪಾಡು ಮಾಡುವುದು ಅವರ ಮುಖ್ಯ ಕೆಲಸವಾಗಿತ್ತು ಮುಂದೆ ಓದಿ....



ಚುನಾವಣಾ ರಾಜಕೀಯದಲ್ಲಿ

ಯೋಧನ ಮೊದಲ ಕದನ!

ಬಂಡವಾಳಶಾಹಿ ವ್ಯವಸ್ಥೆಯ ಚುನಾವಣೆಗಳೆಂದರೇನು ಎಂಬ ಬಗ್ಗೆ ಅಭ್ಯರ್ಥಿಯಾಗಿ ಮೊದಲ ಚುನಾವಣೆಯಲ್ಲೇ ನನಗೆ ಅನುಭವಕ್ಕೆ ಬಂತು. ಅದರ 'ರುಚಿ' ಅನುಭವಿಸಿದೆ. ಅದು ಯೋಧನ ಮೊದಲ ಕದನದಂತತಿತ್ತು. ಎಲ್ಲವೂ ಸುಸೂತ್ರವಾಗಿ ಮುಗಿಯಿತು. ಕಬೀರ್ ಸೋತರು. ಮತಗಳನ್ನು ಖರೀದಿಸಲು ಕಾಂಗ್ರೆಸ್ ಪ್ರಜ್ಞಾಪೂರ್ವಕ ಪ್ರಯತ್ನ ನಡೆಸಿದರೂ ಅದು ಫಲಿಸಲಿಲ್ಲ. ಪ್ರಾಮಾಣಿಕತೆ ಮತ್ತು ಆದರ್ಶ ಜನರಲ್ಲಿ ಇರುವುದನ್ನು ನಾನು ಕಂಡೆ. ಮತಕ್ಷೇತ್ರದ ಒಬ್ಬನೇ ಒಬ್ಬ ವ್ಯಕ್ತಿಯೂ ನಮಗೆ ದ್ರೋಹ ಬಗೆಯಲಿಲ್ಲ. ನಮ್ಮ ಸಂಗಾತಿಗಳ ಸಮರ್ಪಣಾ ಭಾವ, ಛಲ ಮತ್ತು ನಿಷ್ಠೆಯಿಂದಾಗಿ ನಾನು ಗೆದ್ದೆ. ಅದು ಅವರ ಗೆಲುವಾಗಿತ್ತು, ಪಕ್ಷದ ವಿಜಯವಾಗಿತ್ತು ಹಾಗೂ ಎಲ್ಲಕ್ಕೂ ಮುಖ್ಯವಾಗಿ ರೈಲ್ವೆ ನೌಕರರ ಜಯವಾಗಿತ್ತು.

ರತನ್ ಲಾಲ್ ಬ್ರಹ್ಮನ್ (ಡಾರ್ಜಿಲಿಂಗ್) ಮತ್ತು ರೂಪನಾರಾಯಣ್ ರಾಯ್(ದಿನಾಜ್ ಪುರ) ಕೂಡ ಗೆದ್ದರು. ಪಕ್ಷದ ಇತರ ಅಭ್ಯರ್ಥಿಗಳು ಸೋತರು.

ಅಪಪ್ರಚಾರಕ್ಕೆ ಉತ್ತರ....

ಈ ವಿಜಯಗಳು ಯಾವಾಗಲು ಪರಿಣಾಮ ಬೀರುವಂಥದ್ದಾಗಿತ್ತು. ಪಕ್ಷದ ವಿರುದ್ಧ ಅಪಪ್ರಚಾರ ಹಾಗೂ ಸಂಗಾತಿಗಳ ಮೇಲೆ ದೈಹಿಕ ಹಲ್ಲೆಯೇ ಅಂದಿನ ರಾಜಕೀಯವಾಗಿತ್ತು. ನಮ್ಮ ವಿರುದ್ಧ ದೇಶ ದ್ರೋಹದ ಆಪಾದನೆ ಹೋರಿಸಲಾಗುತ್ತಿತ್ತು. ಈ ಹಿನ್ನಲೆಯಲ್ಲಿ ನಮ್ಮ ಜಯಕ್ಕೆ ತುಂಬಾ ಮಹತ್ವವಿತ್ತು.

ಈ ಚುನಾವಣೆ ನಮಗೊಂದು ಪಾಠವನ್ನು ಕಲಿಸಿತು. ನಮ್ಮ ವಿರೋಧಿಗಳು ಬಹಿರಂಗವಾಗಿಯೋ ಗುಪ್ತವಾಗಿಯೋ ನಮ್ಮನ್ನು ತುಳಿಯಲು ಯಾವ ಮಟ್ಟಕ್ಕಾದರೂ ಇಳಿಯುವರು ಎಂಬುದು ನಮಗೆ ಗೊತ್ತಾಯಿತು.

ಬಾರಕ್‌ಪುರ ಕ್ಷೇತ್ರದ ಚುನಾವಣಾ ವೇಳೆ ನನ್ನನ್ನು ಕಂಚರಪೌರಕ್ಕೆ ಪಕ್ಷದ ವೀಕ್ಷಕನನ್ನಾಗಿ ಕಳಿಸಲಾಗಿತ್ತು. ಅಲ್ಲಿ ನಾನು ಕಾಂಗ್ರೆಸ್ ಗೂಂಡಾಗಿರಿಯನ್ನು ನೋಡಿದೆ.

ಚುನಾವಣೆಗಳ ನಂತರ ನಾನು ಪಕ್ಷದ ರಾಜ್ಯ ಕಛೇರಿಗೆ ಮರಳಿದೆ. ಕೆಳಅಂತಸ್ತಿನಲ್ಲಿ ಗಾಯಗೊಂಡಿದ್ದ ಸಂಗಾತಿಗಳು ಬಿದ್ದುಕೊಂಡಿದ್ದರು. ಕಲ್ಕತ್ತದಾದ್ಯಂತ ಕಾಂಗ್ರೆಸ್ ನಡೆಸಿದ ಗೂಂಡಾಗಿರಿಯ ಫಲವಾಗಿತ್ತದು. ಬೂರ್ಜ್ವಾ ವ್ಯವಸ್ಥೆಯಲ್ಲಿ ಕೆಲವರಿಗೆ, ಸಿದ್ಧಾಂತ,ಆದರ್ಶ, ಪ್ರಾಮಾಣಿಕತೆಗೆ ಬೆಲೆಯೇ ಇಲ್ಲ. ಹೇಗಾದರೂ ಗೆಲ್ಲಬೇಕೆನ್ನುವುದು ಅವರ ಗುರಿ ಎನ್ನುವ ಪಾಠವನ್ನೇ 1946 ಚುನಾವಣೆ ನನಗೆ ಕಲಿಸಿತು.

ನಾನೊಬ್ಬ ಶಾಸಕನಾದೆ ತಂದೆಗೆ ಸ್ವಲ್ಪ ಖುಷಿಯಾಯಿತು. ನನ್ನ ಹೋರಾಟದಲ್ಲಿ ಅದು ನೆರವಿಗೆ ಬಂತು.

ವಾಸ್ತವಾಗಿ ಪೂರ್ಣಕಾಲದ ಕಾರ್ಯಕರ್ತನಾಗಿ ನನ್ನ ಜೀವನ ಆಗಷ್ಟೇ ಆರಂಭವಾಗಲಿತ್ತು. ಶಾಸಕನಾಗಿ ನನಗೆ ಬರುತಿದ್ದ ಸಂಬಳವನ್ನು ಪಕ್ಷಕ್ಕೆ ಕೊಡುತ್ತಿದ್ದೆ. ಪಕ್ಷ ನನಗೆ ಭತ್ಯೆ ನೀಡುತಿತ್ತು.

ಆಗಿನ ರಾಜಕೀಯ ಸನ್ನಿವೇಶವನ್ನು ಸ್ವಲ್ಪ ವಿವರಿಸುವುದು ಅಗತ್ಯವೆನಿಸುತ್ತದೆ. 1946 ರಲ್ಲಿ ಸುಹ್ರಾವರ್ದಿ ನಾಯಕತ್ವದಲ್ಲಿ ಮುಸ್ಲಿಂ ಲೀಗ್ ಬಂಗಾಳದಲ್ಲಿ ಸರಕ್ಕಾರವನ್ನು ರಚಿಸಿತ್ತು. ಕಿರಣ್ ಶಂಕರರಾಯ್ ನೇತೃತ್ವದಲ್ಲಿ ಕಾಂಗ್ರೆಸ್ ಪ್ರತಿಪಕ್ಷವಾಗಿತ್ತು. ನಾವು ಮೂವರು ಕಮ್ಯೂನಿಸ್ಟ್ ಶಾಸಕರದು ಪ್ರತ್ಯೇಕ ಗುಂಪಾಯಿತು.

1946 ರ ಚುನಾವಣೆಗಳಲ್ಲಿ ಮುಸ್ಲಿಂ ಲೀಗ್‌ಗೆ ಬಹುಮತ ದೊರಕಿ ಸುಹ್ರಾವರ್ದಿ ಸರಕಾರದ ಸೂತ್ರ ಹಿಡಿದರು. ಗೃಹ ಖಾತೆಯನ್ನು ಅವರೇ ಇಟ್ಟುಕೊಂಡರು. ಸಂಪುಟದಲ್ಲಿ ಏಳು ಸಚಿವರಿದ್ದರು. ಮಹಮದ್ ಅಲಿ, ಸೈಯದ್ ಮೊಜುವತ್ ಹುಸೇನ್, ಅಹಮದ್ ಹುಸೇನ್, ಅಬ್ದುಲ್ ರೆಹಮಾನ್, ಅಬ್ದುಲ್ ಗಫ್ರಾನ್, ಅಬ್ದುಲ್ ಫಜಲ್ ಮಹಮದ್, ಶಂಸುದ್ದಿನ್ ಅಹಮದ್ ಮತ್ತು ಯೋಗೇಂದ್ರ ಮಂಡಲ್. ಯೋಗೇಂದ್ರ ಮಂಡಲ್ ಕಾಂಗ್ರೆಸ್ ವಿರೋಧಿಯಾಗಿದ್ದರು.

ವಸಾಹತುಶಾಹಿಗಳ ನಿಷ್ಠಾವಂತರು

ಸುಹ್ರಾವರ್ದಿ ಸಂಪುಟದ ಎಂಟು ಸಚಿವರ ಪೈಕಿ ಐವರು ಖಾನ್ ಬಹುದೂರ್‌ಗಳಾಗಿದ್ದು. ಬ್ರಿಟಿಷ್ ರಾಜ್ ತನಗೆ ನಿಷ್ಠರಾಗಿರುವವರಿಗೆ ಕೊಡುವ ಬಿರುದುಗಳಲ್ಲಿ ಇದು ಒಂದಾಗಿತ್ತು. ಖಾನ್ ಬಹುದೂರ್, ಖಾನ್‌ಸಾಹೇಬ್, ರಾಯ್ ಬಹುದೂರ್ ಮತ್ತು ರಾಯ್ ಸಾಹೇಬ್ - ಇವು ಇತರ ಬಿರುದಗಳು.

1946 ರಲ್ಲಿ ಹೊಸ ವಿಧಾನಸಭೆ ರಚನೆಗೊಂಡಿತು. ಮೇ 14 ರಂದು ಎರಡು ಅಧಿವೇಶನಗಳು ನಡೆದವು. ಅಧಿವೇಶನಗಳ ಕಲಾಪಗಳ ಬಗ್ಗೆ ವಿವರಿಸುವ ಮುನ್ನ ಇಡೀ ದೇಶದ, ವಿಶೇಷವಾಗಿ ಬಂಗಾಳದ ಆರ್ಥಿಕ ಪರಿಸ್ಥಿತಿಯನ್ನು ಪ್ರಸ್ತಾಪಿಸುವುದು ಸರಿಯೆಂದು ನನಗನ್ನಿಸುತ್ತದೆ.

ಕೇವಲ ಒಂದು ವರ್ಷದ ಹಿಂದೆ 1945 ಮೇ 2 ರಂದು ಸೋವಿಯತ್ ಪಡೆ ಬರ್ಲಿನ್ ಮೇಲೆ ಜಯಸಾಧಿಸಿತ್ತು. ಅಲ್ಲಿ ಕೆಂಪು ಧ್ವಜ ಹಾರಾಡಿತ್ತು. ಆಗ ನಾವು ಕಲ್ಕತ್ತದಲ್ಲಿ ವಿಜಯೋತ್ಸವ ಆಚರಿಸಿದ್ದೆವು. ಆ ವಾರ್ಷಿಕ ಅಂತ್ಯದಲ್ಲಿ ಭಾರತ ರಾಷ್ಟ್ರೀಯ ಸೇನೆಯ(INA) ಬಂಧಿತ ಸೈನಿಕರನ್ನು ಬಿಡುಗಡೆ ಮಾಡಬೇಕೆಂಬ ಬೇಡಿಕೆ ಇಡೀ ದೇಶದಲ್ಲಿ ಪ್ರತಿಧ್ವನಿತವಾಯಿತು. ದೇಶಕ್ಕೆ ದೇಶವೇ ಎದ್ದಿನಿಂತಿತ್ತು. ಈ ಸಂಬಂಧ ಈ ಸಂಬಂಧ ನವೆಂಬರ್ 21 ರಂದು ಕಲ್ಕತ್ತದಲ್ಲಿ ಬೃಹತ್ ರ್‍ಯಾಲಿಯ ನಡೆಯಿತು.

ವಿದ್ಯಾರ್ಥಿಗಳ ಬಲಿದಾನ

ಮೆರವಣಿಗೆ ಮೇಲೆ ಪೋಲೀಸರು ಗುಂಡು ಹಾರಿಸಿದರು. ಅನೇಕ ವಿದ್ಯಾರ್ಥಿಗಳು ಮೃತರಾದರು ಅಥವಾ ಗಾಯಗೊಂಡರು. 1946 ರ ಜನವರಿ ಮತ್ತು ಫೆಬ್ರವರಿಯಲ್ಲಿ ಕಲ್ಕತ್ತದಲ್ಲಿ ಪ್ರತಿಭಟನೆಯ ಅಲೆ ಅನುಕರಣೆಸಿತ್ತು. 'ರಷೀದ್ ಅಲಿ ದಿನ' ಐಎನ್‌ಎ ಯೋಧರನ್ನು ಬಿಡುಗಡೆ ಮಾಡಿ ಎಂಬುದೊಂದೇ ಸಮರ ಘೋಷಣೆಯಾಗಿತ್ತು.

ಇನ್ನೊಂದು ಮೆರವಣಿಗೆಯಲ್ಲಿ ವಿಯಾಟ್ನಾಮಿನ ಸಾಮ್ರಾಜ್ಯಶಾಹಿ ವಿರೋಧಿ ಸಂಘರ್ಷವನ್ನು ಬೆಂಬಲಿಸುವ ಘೋಷಣೆಗಳು ಮೊಳಗಿದವು. ಅಲ್ಲಿಯೂ ಪೋಲೀಸರು ಗೋಲಿಬಾರ್ ನಡೆಸಿದರು. ಇಬ್ಬರು ವಿದ್ಯಾರ್ಥಿಗಳಾದ ಅಬ್ದುಸ್ ಸಲಾಂ ಮತ್ತು ರಾಮೇಶ್ವರ್ ದಯಾಳ್ ಹುತಾತ್ಮರಾದರು.

ಕಾರ್ಮಿಕ ವರ್ಗ ಅದರಲ್ಲಿಯೂ ವಿಶೇಷವಾಗಿ, ಅಂಚಿ ಮತ್ತು ತಂತಿ ನೌಕರರು ಸಾರ್ವತ್ರಿಕ ಮುಷ್ಕರ ನಡೆಸಿದರು.

ವಿದ್ಯಾರ್ಥಿ ಯುವಜನ- ಕಾರ್ಮಿಕ-ನೌಕರರ ಪ್ರತಿಭಟನೆಗಳು ಕ್ರಮೇಣವಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ಬೃಹತ್ ಆಂದೋಲನವಾಗಿ ರೂಪುಗೊಳ್ಳುತ್ತಿತ್ತು.

ಕಮ್ಯೂನಿಸ್ಟ್ ಪಕ್ಷ ಇದರ ಮುಂಚೂಣಿಯಲ್ಲಿತ್ತು. ಬಂಗಾಳದಲ್ಲಿ ಕಾಂಗ್ರೆಸ್ ನಂತರ ನಾವು ಎರಡನೇ ಶಕ್ತಿ ಎಂದು ಪರಿಗಣಿಸಲಾಗುತ್ತಿತ್ತು. ಆದರೆ ಮುಸ್ಲಿಂ ಲೀಗ್ ಕೋಮುವಾದಿ ಅಂಶಗಳನ್ನು ಬಳಸಿಕೊಂಡು ಮುಸ್ಲಿಂ ಕ್ಷೇತ್ರದಲ್ಲಿ ಸ್ಥಾನವನ್ನು ಕಲ್ಪಿಸಿಕೊಂಡಿತ್ತು.

ಇತಿಹಾಸ ಪ್ರಸಿದ್ಧ ತೇಭಾಗ ಚಳವಳಿ ಆರಂಭವಾಯಿತು ನೋಡಿ......

(ಮುಂದುವರಿಯುವುದು)

ಬಿಜೆಪಿಯ ಹಗಲುಗನಸು......

ಪುಟ 3 ರಿಂದ

ಅಂಕೋಲ ರೈಲು ಮಾರ್ಗದ ಅಡಿಗಲ್ಲು ಸಮಾರಂಭವನ್ನು ಏರ್ಪಡಿಸಲಾಯಿತು. ಹೊಸ ರೈಲು ಮಾರ್ಗಕ್ಕೆ ಅವಶ್ಯಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೇ ರೈಲು ಮಾರ್ಗವನ್ನು ಉದ್ಘಾಟಿಸಿರುವುದು ಇನ್ನೊಂದು ದೊಡ್ಡ ವಂಚನೆ. ಉತ್ತರ ಕರ್ನಾಟಕದ ಬಗ್ಗೆ ಇವರ ಪ್ರಲಾಪದ ಹಿಂದೆ ಸೀಟು ಗಿಟ್ಟಿಸಿಕೊಳ್ಳುವ ಲೆಕ್ಕಾಚಾರವಿದೆ ಎಂಬುದನ್ನು ಉತ್ತರ ಕರ್ನಾಟಕದ ಜನತೆ ಅರ್ಥಮಾಡಿಕೊಂಡರೆ ಅವರು ಜಾಣರಾಗುತ್ತಾರೆ.

ಉತ್ತರ ಕರ್ನಾಟಕದ ಜನತೆಯ ಬೇಡಿಕೆಗಳ ಬಗ್ಗೆ ಇನ್ನೊಂದು ಮಾತಿದೆ. ತಾರತಮ್ಯಕ್ಕೆ ಒಳಗಾದ ಈ ಪ್ರದೇಶದ ಬೇಡಿಕೆಗಳನ್ನು ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸುತ್ತಾರಂತೆ. ಇವರು ಹೇಳುವುದು ಒಂದು, ಮಾಡುವುದು ಇನ್ನೊಂದು ಎಂಬುದನ್ನು ಅಖಿಲ ಭಾರತ ಮಟ್ಟದಲ್ಲಿ ಅನುಭವಿಸಿ ಆಗಿದೆ. ಬಿಜೆಪಿಗೆ ಜನರ ಮುಂದಿಡಲು ಒಂದು ಕಾರ್ಯಕ್ರಮ ವಿರುತ್ತದೆ. ಗುಟ್ಟಿನ ಕಾರ್ಯಕ್ರಮ ಮತ್ತೊಂದು ಇರುತ್ತದೆ ಓಟು ಕಿತ್ತುಕೊಳ್ಳಲು ಒಂದು ಪ್ರಣಾಳಿಕೆ ಇದ್ದರೆ ಜನತೆಯ ನೆಮ್ಮದಿ ಕಿತ್ತುಕೊಳ್ಳಲು ಇನ್ನೊಂದು ಪ್ರಣಾಳಿಕೆ ಬಿಜೆಪಿ ಮತ್ತು ಅದರ (ಮಿತ್ರ) ದುಷ್ಟಕೂಟದ ಕಾರ್ಯಕ್ರಮ, ಏನೇ ಇರಲಿ, ಜಾರಿಯಾಗುವುದು ಮಾತ್ರ ಆರ್.ಎಸ್. ಎಸ್. ಕಾರ್ಯಕ್ರಮ ಕೇವಲ ಶೇಕಡ 25 ರಷ್ಟು ಮತಗಳನ್ನು ಪಡೆದು ದೇಶಾದ್ಯಂತ ಇಷ್ಟು ಆತಂಕವನ್ನು ಹರಡಿದ ಇವರು ಪೂರ್ಣ ಬಹುಮತ ವನ್ನೇನಾದರೂ ಪಡೆದರೆ ಏನಾಗಬಹುದು ದೇಶದ ಗತಿ!

ಬಿಜೆಪಿ ಭಾರತೀಯರ ಮುಗ್ಧತೆಯನ್ನು ಬಂಡವಾಳ ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ. ಭಗವಾನ್ ಶ್ರೀರಾಮ ಚಂದ್ರನಿಗೆ ಅಯೋದ್ಯೆಯಲ್ಲಿ ಮುಸಲ್ಮಾನರಿಂದ ಅಪಾಯವಿದೆ ಎಂದು ಇವರು ಗುಲ್ಲೆಬ್ಬಿಸುತ್ತಾರೆ. ಜನ ಅದನ್ನು ನಂಬುತ್ತಾರೆ ಭಗವಂತನನ್ನು ಅಪಾಯದಿಂದ ಪಾರುಮಾಡಲು ಅವರು ಬಿಜೆಪಿಗೆ ಓಟು ಹಾಕುತ್ತಾರೆ. ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಮುಸಲ್ಮಾನರಿಂದ ರಾಷ್ಟ್ರ ಧ್ವಜಕ್ಕೆ ಅಪಮಾನವಾಗುತ್ತಿದೆ ಎಂದು ಚಡ್ಡಿ ಹುಡುಗರು ಕಿರುಚಿಕೊಂಡಾಗ ದೇಶ ಪ್ರೇಮಿ ಯುವಕರು ಕುರುಡರಾಗುತ್ತಾರೆ. ಇದೇ ರಾಷ್ಟ್ರ ಧ್ವಜವನ್ನು ಈ ಚಡ್ಡಿಗಳು ಧಾರವಾಡದ ಕಡಪಾ ಮೈದಾನದಲ್ಲಿ ಸುಟ್ಟುಹಾಕಿದ್ದನ್ನು ನಮ್ಮ ಯುವಕರು ಮರೆಯುತ್ತಾರೆ. ಮನೆಮನೆಗಳಿಗೆ ಬೆಂಕಿ ಹಚ್ಚಿ ತನ್ನ ರಾಜಕೀಯ ಬೇಳೆಕಾಳು ಬೇಯಿಸಿಕೊಳ್ಳುವ ಬಿಜೆಪಿಗೆ ಕನ್ನಡಿಗರು ಮಣೆ ಹಾಕಿದರೆ ಅದು ಕರ್ನಾಟಕದ ಪಾಲಿಗೆ ದೊಡ್ಡ ದುರಂತವಾಗಲಿದೆ.

4 ರಿಂದ 40 ಕ್ಕೆ ಏರಿದ ಕರ್ನಾಟಕದ ಬಿಜೆಪಿಯ ಲೆಕ್ಕಚಾರದ ಪ್ರಕಾರ ಈ ಸಲ ಅದು 400 ಸೀಟುಗಳನ್ನು ಗೆಲ್ಲಬೇಕು ಆದರೆ ಕರ್ನಾಟಕದಲ್ಲಿ ಇರುವುದೇ 224 ಸೀಟುಗಳಲ್ಲವೆ! ಇದು ಬಿಜೆಪಿಯ ಹಗಲುಗನಸು ಅದು ರಾಜ್ಯದಲ್ಲಿ ಕೋಮುಗಲಭೆಗಳನ್ನು ಹುಟ್ಟು ಹಾಕಿರುವ ಸುಮಾರು 20 ಕ್ಷೇತ್ರಗಳಲ್ಲಿ ತನ್ನ ಸ್ವಂತ (ದು)ಶಕ್ತಿಯಿಂದ ಗೆದ್ದಿರಬಹುದು. ಉಳಿದ 20 ಕ್ಷೇತ್ರಗಳಲ್ಲಿ ಬಿಜೆಪಿಯೇತರ ಪಕ್ಷಗಳ ಚುನಾವಣಾ ತಂತ್ರದ ವೈಫಲ್ಯದಿಂದ ಮಾತ್ರ ಬಿಜೆಪಿಗೆ ಗೆಲುವು ಸಾಧ್ಯವಾಗಿದೆ. ಈ ಸಲ ಹೀಗಾಗದಂತೆ ನೋಡಿಕೊಳ್ಳಬೇಕು.

- ಎನ್.ಎಸ್.

ಕಾರ್ಗಿಲ್ ಯೋಧನಿಗೆ ಸಿಪಿಐ(ಎಂ) ಸಂತಾಪ

ಕಾರ್ಗಿಲ್ ಕಾರ್ಯಾಚರಣೆಯಲ್ಲಿ ವೀರ ಮರಣ ಅಪ್ಪಿದ ಧೀರ ಯೋಧ ಪೆಮ್ಮಂಡ ಡಿ. ಕಾರ್ಯಪ್ಪನವರ ಪಾರ್ಥಿವ ಶರೀರ ಕೊಡಗು ಜಿಲ್ಲೆಯ ವಿರಾಜಪೇಟೆಗೆ ಆಗಮಿಸಿದಾಗ ಸಾವಿರಾರು ಶೋಕತಪ್ತ ಜನತೆ ಕಳೇಬರವನ್ನು ಬರಮಾಡಿಕೊಂಡರು. ನಗರದಲ್ಲಿ ನಡೆದ ಮೌನ ಮೆರವಣಿಗೆಯಲ್ಲಿ ಸಿಪಿಐ(ಎಂ) ಕೊಡಗು ಜಿಲ್ಲೆ ಪ್ರಾದೇಶಿಕ ಸಮಿತಿ ಹಾಗೂ ಡಿವೈಎಫ್‌ಐ ನ ಜಿಲ್ಲಾ ಮುಖಂಡರು ಭಾಗವಹಿಸಿದರು. ನಂತರ ಮೈದಾನದಲ್ಲಿ ಪಾರ್ಥಿವ ಶರೀರಕ್ಕೆ ಹೂಗುಚ್ಛಗಳನ್ನಿರಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಎಸ್.ವೈ. ಗುರುಶಾಂತ್, ಕೊಡಗು ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಕಾಳಯ್ಯ, ಪೀಟರ್ ಲೋಬೋ, ಶ್ರೀಧರನ್, ಜೋಸ್, ಇಬ್ರಾಹಿಂ ಮುಂತಾದವರು ಪ್ರತಿನಿಧಿಸಿದ್ದರು.

ಸ್ಟೇಯಿನ್ಸ್‌ನನ್ನು ಸುಟ್ಟ ಬೆಂಕಿ

ನಿತ್ಯಾನಂದಸ್ವಾಮಿ



ಬೆಂಕಿ ಸುಡುತ್ತದೆ. ಸುಡುವುದು ಅದರ ಗುಣಧರ್ಮ. ಯಾವುದನ್ನು ಸುಟ್ಟು ಭಸ್ಮ ಮಾಡಬಹುದು ಯಾವುದನ್ನು ಸುಡಬಾರದು ಎಂಬ ಭೇದ ಅದು ಅರಿಯದು. ಕಸವನ್ನು ಅದು ಬೂದಿಮಾಡುತ್ತದೆ. ರಸವನ್ನು ಅದು ಇಲ್ಲವಾಗಿಸುತ್ತದೆ. ನಿರ್ಜೀವ ಹೆಣವನ್ನು ಅದು ಸುಡುತ್ತದೆ. ಸಜೀವ ಮನುಷ್ಯನನ್ನು ಅದುಸುಡದೆ ಇರುವುದಿಲ್ಲ. ಸುಡುವುದು ಬೆಂಕಿಯ ಧರ್ಮ. ಆದರೆ ಬೆಂಕಿಯನ್ನು ಬಳಸಿಕೊಂಡು ಬಂದಿರುವ ಮಾನವನ ಧರ್ಮ ಯಾವುದು? ಬೆಂಕಿಹಚ್ಚಿ ಸುಡುವುದು ಯಾವ ಧರ್ಮ?

ಈ ನಮ್ಮ ಪುಣ್ಯ ಭೂಮಿ ಭರತ ಖಂಡದಲ್ಲಿ ಬೆಂಕಿಯು ಮೇಲಿಂದ ಮೇಲೆ ದಲಿತರ,ಕೂಲಿಕಾರರ ಮನೆಗಳನ್ನು ಕೇರಿಗಳನ್ನು ಆಹುತಿ ತೆಗೆದುಕೊಳ್ಳುತ್ತದೆ. ಅಂದೊಂದು ದಿನ ಒರಿಸ್ಸಾದ ಮಯೂರ್‌ಭಂಜ್ ಜಿಲ್ಲೆಯ ಬಾರಿಪಡ ಎಂಬ ಕುಗ್ರಾಮದಲ್ಲಿ ಸಂಭವಿಸಿದ ಭೀಕರ ಬೆಂಕಿ ಅನಾಹುತದಲ್ಲಿ ಸ್ಥಳೀಯ ಗಿರಿಜನರ ನೂರಾರು ಗುಡಿಸಲುಗಳು ಭಸ್ಮವಾಗಿದ್ದವು. ಸರ್ವಸ್ವವನ್ನು ಕಳೆದು ಕೊಂಡು ಸುಟ್ಟಗಾಯಗಳಿಂದ ನರಳಾಡುತ್ತಿದ್ದಾಗ ಅವರ ನೆರವಿಗೆ ಧಾವಿಸದವನು ಗ್ರೆಹ್ಯಾಂ ಸ್ಟುವರ್ಟ್ ಸ್ಟೇಯಿನ್ಸ್ ಮತ್ತು ಆತನ ಪತ್ನಿ ಗ್ಲೇಡ್ಸ್. ಸತ್ತು ಹೋಗಬೇಕಾದವರು ಬದುಕಿ ಉಳಿದರು. ಬೆಂಕಿಯ ನಾಲಗೆಗೆ ಅವರ ಜೀವದ ರುಚಿ ದಕ್ಕಿತ್ತಾದರೂ ಜೀವಗಳನ್ನು ನುಂಗುವ ತೃಪ್ತಿ ದೊರೆಯಲಿಲ್ಲ. ಬಾಯಿಗೆ ಬಂದ ತುತ್ತನ್ನು ಕಿತ್ತುಕೊಂಡ ಸ್ಟೇಯಿನ್ಸ್ ಬೆಂಕಿಯ ಸೇಡಿಗೆ ಗುರಿಯಾದ ನೆನ್ನಬಹುದೆ?

ಅಂದು ಸ್ಟೇಯಿನ್ಸ್ ಕಿಯೋಂಜಾರ್ ಜಿಲ್ಲೆಯ ಮನೋಹರಪುರಕ್ಕೆ ಬಂದಿದ್ದರು. ಸ್ಥಳೀಯ ಚರ್ಚಿನವರು 'ವನಶಿಬಿರ' ವೊಂದನ್ನು ಏರ್ಪಡಿಸಿದ್ದರು.

ಜನವರಿ 22 ರ ರಾತ್ರಿ. ಸುಸ್ತಾದ ಸ್ಟೇಯಿನ್ಸ್ ತನ್ನ ಇಬ್ಬರು ಅಪ್ರಾಪ್ತ ವಯಸ್ಸಿನ ಪುತ್ರರೊಂದಿಗೆ ಚರ್ಚಿನ ಆವರಣದಲ್ಲಿ ನಿಲ್ಲಿಸಲಾಗಿದ್ದ ಜೀಪಿನಲ್ಲಿ ನಿಶ್ಚಿಂತೆಯಿಂದ ನಿದ್ದೆಹೋದರು. ರಬೀಂದ್ರ ಕುಮಾರ್ ಪಾಲ್ ಎಂದೂ ಕರೆಯಲಾಗುತ್ತಿದ್ದ ದಾರಾ ಸಿಂಗ್ ಮತ್ತು ಇತರ 45 ಜನರು ಮಧ್ಯ ರಾತ್ರಿ ಸುಮಾರು 11-00 ಘಂಟೆಗೆ ಮನೋಹರಪುರ ಗ್ರಾಮದತ್ತ ಹೆಜ್ಜೆ ಹಾಕತೊಡಗಿದರು. ಕೆಲವರು ಬಿಲ್ಲು ಬಾಣಗಳನ್ನು ಹಿಡಿದಿದ್ದರು. ಉಳಿದವರು ಉರಿಯುತ್ತಿರುವ ಪಂಜುಗಳನ್ನು ಹಿಡಿದಿದ್ದರು. ದಾರಾಸಿಂಗ್ ಕೈಯಲ್ಲಿ ಕೊಡಲಿಯೊಂದನ್ನು ಹಿಡಿದಿದ್ದನು. ತಲೆಗೆ ಪ್ರತಿಯೊಬ್ಬರೂ ಕೇಸರಿ ಪಟ್ಟಿಗಳನ್ನು ಧರಿಸಿದ್ದರು. ಮನೋಹರ ಪುರ ತಲಪಿದ ಬಳಿಕ ಅವರಲ್ಲಿ 15 ಜನ ಸ್ಟೇಯಿನ್ಸ್ ಮತ್ತು ಅವರ ಮಕ್ಕಳು ನಿದ್ರಿಸುತ್ತಿದ್ದ ಜೀಪನ್ನು ಸುತ್ತುವರೆದು ನಿಂತರು. ಗ್ರಾಮಸ್ಥರು ಅಲ್ಲಿಗೆ ಧಾವಿಸಿಬರುವುದನ್ನು ತಡೆಯಲು ಇನ್ನುಳಿದವರು ನಾಲ್ಕೂಕಡೆ ಕಾವಲು ನಿಂತರು.

ಮೊದಲು ವಾಹನದ ಟಯರುಗಳಿಂದ ಗಾಳಿಯನ್ನು ತೆಗೆದುಹಾಕಲಾಯಿತು. ಅನಂತರ ಒಣ ಹುಲ್ಲಿನ ಸಹಾಯದಿಂದ ವಾಹನಕ್ಕೆ ಬೆಂಕಿಹಚ್ಚಲಾಯಿತು. ಗಾಬರಿಗೊಂಡ ಸ್ಟೇಯಿನ್ಸ್ ವಾಹನದ ಬಾಗಿಲು ತೆರೆದು ತನ್ನ ಮಕ್ಕಳೊಂದಿಗೆ ಹೊರಬರಲು ಪ್ರಯತ್ನ ಪಟ್ಟಾಗ ದಾರಾಸಿಂಗ್ ಮತ್ತು ಇತರರು ಅವರನ್ನು ಉರಿಯುತ್ತಿರುವ ವಾಹನದೊಳಗೆ ನೂಕಿದರಲ್ಲದೆ ಅವರು ಹೊರಗೆ ಬರುವುದನ್ನು ಯಶಸ್ವಿಯಾಗಿ ತಡೆದರು. ಎಳೆಯ ಕೂಸುಗಳ ಆರ್ತನಾದ ಎಂಥಹ ಕಲ್ಲುಹೃದಯವನ್ನೂ ಕರಗಿಸುವಂತಿತ್ತು! ನಿರಪರಾಧಿ ನಿಸ್ಸಹಾಯಕ ಜೀವಿಗಳು ಬೆಂದು ಭಸ್ಮವಾಗುತ್ತಿದ್ದಂತೆ ದಾರಾಸಿಂಗ್ ಮತ್ತು ಇತರ ಅಸುರರು ಅಟ್ಟಹಾಸಗೈದು ಚದುರಿದರು. ಮರುದಿನ ಪಕ್ಕದ ಕುಮುಲಿಬಾಹಲ ಗ್ರಾಮದಲ್ಲಿ ಕಾಣಿಸಿಕೊಂಡ ದಾರಾಸಿಂಗ್ ಮತ್ತು ದೀಪು ದಾಸ್ ಗ್ರಾಮಸ್ಥರನ್ನು ಕರೆದು ಮಿಶಿನರಿಯ ಕಥೆಯನ್ನು ಮುಗಿಸಿದ್ದೇವೆ ಎಂದು ಹೇಳಿ ಅಲ್ಲಿಂದ ಕಣ್ಮರೆಯಾದರು. ದೀಪು ದಾಸ್ ಮತ್ತು ಇತರ 7 ಜನ ಕೊಲೆಗಾರರು ಈಗ ನ್ಯಾಯಾಂಗ ಕಸ್ಟಡಿಯಲ್ಲಿದ್ದರೂ ದಾರಾಸಿಂಗ್ ಮತ್ತು ಇತರರ ಸುಳಿವು ದೊರೆತಿಲ್ಲ.

ವಿಶ್ವದ ಇಡೀ ಮನುಕುಲವನ್ನೇ ತಲ್ಲಣಗೊಳಿಸಿದ ಈ ಬರ್ಬರ ಹತ್ಯೆಯನ್ನು ಭಾರತೀಯರು ಪಂಥ ಪಕ್ಷ ಭೇದವಿಲ್ಲದೆ ಖಂಡಿಸಿದರು. ಕೇಂದ್ರದ ಬಿಜೆಪಿ ಸರ್ಕಾರವು ಈ ಘಟನೆಯ ಹೊರೆಯನ್ನು ರಾಜ್ಯ ಸರ್ಕಾರದ ಮೇಲೆ ಹೇರಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನ ಪಟ್ಟಿತಾದರೂ ಬಲವಾದ ಸಾರ್ವಜನಿಕ ಅಭಿಪ್ರಾಯವನ್ನು ಧಿಕ್ಕರಿಸಲಾಗದೆ ಅನಿವಾರ್ಯವಾಗಿ ಪ್ರಕರಣದ ಬಗ್ಗೆ ತನಿಖೆ ನಡೆಸಲು ನ್ಯಾಯಮೂರ್ತಿ ವಾದ್ವಾ ಆಯೋಗವನ್ನು ನೇಮಿಸಿತು. ತನಿಖಾ ಆಯೋಗವು 52 ಸಾಕ್ಷಿಗಳನ್ನು ವಿಚಾರಣೆಗೆ ಗುರಿಪಡಿಸಿ, 130 ಅಫಿಡವಿಟ್‌ಗಳನ್ನು ಪಡೆದು ಸುಮಾರು ಒಂದು ಸಾವಿರಕ್ಕೂ ಹೆಚ್ಚು ಪುಟಗಳ ದಾಖಲೆಗಳೊಂದಿಗೆ ಒಟ್ಟು 250 ಪುಟಗಳ ವರದಿಯನ್ನು ಜೂನ್ 21 ರಂದು ಕೇಂದ್ರ ಗೃಹ ಕಾರ್ಯದರ್ಶಿ ಕಮಲ್ ಪಾಂಡೆ ಅವರಿಗೆ ಸಲ್ಲಿಸಿದೆ. ಇದೊಂದು ಯಾರೂ ಸಮರ್ಥಿಸಿಕೊಳ್ಳಲಾಗದ ಹೇಯ ಕೃತ್ಯವಾಗಿದೆ ಎಂದೂ ಸ್ಟೇಯಿನ್ಸ್ ಮತ್ತು ಅವರ ಮಕ್ಕಳಾದ ಫಿಲಿಪ್ ಹಾಗೂ ತಿಮತಿ ಅವರ ಹತ್ಯೆ ಅತ್ಯಂತ ಅಮಾನವೀಯ ಹಾಗೂ ನಾಗರಿಕ ಸಮಾಜಕ್ಕೆ ಹಚ್ಚಲಾದ ಕಪ್ಪು ಚುಕ್ಕೆ ಎಂದು ವಾದ್ವಾ ಆಯೋಗ ಅಭಿಪ್ರಾಯ ಪಟ್ಟಿದೆ. ಆದರೆ ಪೋಲಿಸರು ಪ್ರಕರಣದ ಬಗ್ಗೆ ತನಿಖೆಯನ್ನು ಇನ್ನೂ ಪೂರ್ಣಗೊಳಿಸದೆ ಇರುವುದರಿಂದ ವರದಿಯಲ್ಲಿ ಘಟನೆಗೆ ಕಾರಣವಾದ ವ್ಯಕ್ತಿ ಅಥವಾ ಸಂಘಟನೆಗಳ ಕುರಿತಾದ ವಿವರಗಳನ್ನು ಬಹಿರಂಗಗೊಳಿಸಲು ನ್ಯಾಯಮೂರ್ತಿ ವಾದ್ವಾ ನಿರಾಕರಿಸಿದ್ದಾರೆ.

ನ್ಯಾಯಮೂರ್ತಿ ವಾದ್ವಾ ವರದಿಯನ್ನು ಕೂಡಲೇ ಬಹಿರಂಗಗೊಳಿಸಬೇಕೆಂದು ತೀವ್ರ ಆತಂಕಕ್ಕೆ ಒಳಗಾದ ಕ್ರೈಸ್ತ ಅಲ್ಪಸಂಖ್ಯಾತರು ಸರ್ಕಾರವನ್ನು ಒತ್ತಾಯಿಸ ತೊಡಗಿದ್ದಾರೆ. ಅವರ ಆತಂಕ ನಿರಾಧಾರವಾದುದೇನಲ್ಲ. ಈ ಅಮಾನುಷ ಕೃತ್ಯದ ಹಿಂದಿನ ಸಂಚು ಬಯಲಾಗದೆ ಕಾಲಗರ್ಭದಲ್ಲಿ ಹೂತುಹೋಗ ಬಹುದೇ ಎಂಬ ಭೀತಿ ಅವರನ್ನು ಕಾಡುತ್ತಿದೆ. ದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ಕಳೆದ ಒಂದು ವರ್ಷದಲ್ಲಿ ತೀವ್ರಗೊಂಡ ದಾಳಿದಬ್ಬಾಳಿಕೆಗಳ ಪ್ರಕರಣಗಳಲ್ಲಿ ಒಬ್ಬ ಅಪರಾಧಿಗೂ ಇದುವರೆಗೆ ಶಿಕ್ಷೆಯಾಗಿಲ್ಲ ಮಾತ್ರವಲ್ಲ ಪ್ರಕರಣಗಳನ್ನು ಸಮರ್ಥಿಸುವ, ಪ್ರಕರಣದ ಪರಿಣಾಮವನ್ನು ತಿಳಿಗೊಳಿಸುವ, ಅಪರಾಧಿಗಳಿಗೆ ರಾಜಕೀಯ ರಕ್ಷಣೆ ನೀಡುವ ವ್ಯವಸ್ಥಿತ ಪ್ರಯತ್ನಗಳು ನಡೆದಿವೆ. ಮನೋಹರಪುರದಲ್ಲಿ ನಡೆದ ಈ ರಾಕ್ಷಸೀ ಕೃತ್ಯವನ್ನು ಸಹ. ಆಸ್ಟೇಲಿಯದ ಆ ಮಿಶಿನರಿ ಅನೇಕ ವರ್ಷಗಳಿಂದ ಅಲ್ಲಿಯ ಗಿರಿಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡುತ್ತಿದೆ ಎಂದು ವಾದಿಸಿ ಸಮರ್ಥಿಸಲು ಸಂಘ ಪರಿವಾರ ಹಿಂದೆ ಬೀಳಲಿಲ್ಲ.

ಸಿಬಿಐ ಮೂಲಗಳ ಪ್ರಕಾರ ದಾರಾಸಿಂಗ್ 6 ವರ್ಷಗಳ ಹಿಂದೆ ಉತ್ತರ ಪ್ರದೇಶದಿಂದ ಬಂದು ಒರಿಸ್ಸಾದಲ್ಲಿ ನೆಲೆಸಿದ್ದನು. ಆರಂಭದಲ್ಲಿ ಆತ ಒಂದು ಶಾಲೆಯಲ್ಲಿ ಹಿಂದಿ ಕಲಿಸುತ್ತಿದ್ದನು. ಕೆಲ ಕಾಲದ ನಂತರ ಶಿಕ್ಷಕ ಉದ್ಯೋಗವನ್ನು ಬಿಟ್ಟಿದ್ದನು. ಕ್ರೈಸ್ತ ಮಿಶಿನರಿಗಳು ಭಾರತದಲ್ಲಿ ಬಹಳಷ್ಟು ಹಣವನ್ನು ಖರ್ಚುಮಾಡುತ್ತಾ ನಮ್ಮ ಬಡ ಗಿರಿಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡುತ್ತಿದ್ದಾರೆ. ಇದನ್ನು ನಾವು ನಿಲ್ಲಿಸಲೇ ಬೇಕು ಎಂದು ಆತ ಜನರ ತಲೆತಿನ್ನುತ್ತಿದ್ದನು. ತನ್ನ ಗುರಿಸಾಧನೆಗಾಗಿ ಸಿದ್ಧತೆಯಲ್ಲಿ ತೊಡಗಿದ್ದ ದಾರಾಸಿಂಗ್ ಸುಸಂದರ್ಭಕ್ಕಾಗಿ ಕಾಯುತ್ತಿದ್ದನು. ಸುಮಾರು 150 ಸಂಥಾಲ್ ಕುಟುಂಬಗಳಿರುವ ಮನೋಹರಪುರ ಗ್ರಾಮದಲ್ಲಿ ಹಿಂದೂ ಮತ್ತು ಕ್ರೈಸ್ತರ ನಡುವೆ ಕೋಮು ಜಗಳವನ್ನು ಹುಟ್ಟುಹಾಕುವಲ್ಲಿಯೂ ಆತ ಯಶಸ್ವಿಯಾಗಿದ್ದನು. ದಾರಾಸಿಂಗನನ್ನು ಉತ್ತರ ಪ್ರದೇಶದಿಂದ ಯಾರು ಕಳುಹಿಸಿಕೊಟ್ಟಿದ್ದರು ಎಂಬುದು ಪತ್ತೆಯಾದರೆ ಹಂತಕರ ಸಂಚಿನ ಉದ್ದೇಶ ಬಯಲಾಗುತ್ತದೆ. ಬುಡಕಟ್ಟು ಮೂಲದ ಗಿರಿಜನರ ಮಧ್ಯದಲ್ಲಿ ಕೆಲಸಮಾಡಿ ಅವರು ಮತಾಂತರ ಗೊಳ್ಳುವುದನ್ನು ತಡೆಯಲು ಆರ್.ಎಸ್.ಎಸ್. ಸ್ವಯಂಸೇವಕರ ಹೊಸ ಸಂಸ್ಥೆಯೊಂದನ್ನು ಹುಟ್ಟು ಹಾಕಿರುವುದು ಮತ್ತು ಅವುಗಳಿಗೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದ ನಂತರ ವಿವಿಧ ಇಲಾಖೆಗಳಿಂದ ಹಣ ಹರಿದು ಹೋಗುವ ವ್ಯವಸ್ಥೆ ಮಾಡಿರುವುದು ಗುಟ್ಟಿನ ವಿಷಯವೇನಲ್ಲ. ಅಂತಹ ಸಂಸ್ಥೆಯ ಒಬ್ಬ ಕಾರ್ಯಕರ್ತನಾಗಿ ದಾರಾಸಿಂಗ್ ಹೆಸರು ಬದಲಾಯಿಸಿಕೊಂಡು ಬಂದು ಈ ಕೊಲೆ ಮಾಡಿದ್ದರೆ ಆಶ್ಚರ್ಯವಿಲ್ಲ. ಸಿಬಿಐ ದಾರಾಸಿಂಗ್‌ನ ತಲೆಗೆ 5 ಲಕ್ಷ ರೂಪಾಯಿ ಘೋಷಿಸಿದೆ. ಆತನ ಸುಳಿವು ನೀಡಿದವರಿಗೆ ಇನ್ನೂ ಒಂದು ಲಕ್ಷ ರೂಪಾಯಿಗಳನ್ನು ನೀಡುವುದಾಗಿ ರಾಜ್ಯ ಸರ್ಕಾರ ಪ್ರಕಟಿಸಿದೆ. ಆದಾಗ್ಯೂ ದಾರಾಸಿಂಗ್ ಪತ್ತೆಯಾಗುತ್ತಿಲ್ಲ. ಅರಣ್ಯಗಳಿಂದ ಆವೃತವಾದ ಈ ಗ್ರಾಮಗಳಲ್ಲಿ ಯಾರೋ ಕೆಲವು ಗ್ರಾಮ ನಿವಾಸಿಗಳು ಆತನನ್ನು ಮುಚ್ಚಿಟ್ಟುಕೊಂಡು ಆತನನ್ನು ಬೆಂಬಲಿಸುತ್ತಿದ್ದಾರೆ. ಎಂದೂ ಆತನ ಬಗ್ಗೆ ಸ್ಥಳೀಯ ಗಿರಿಜನರಲ್ಲಿ ಗೌರವಕ್ಕಿಂತ ಭೀತಿಯೇ ಹೆಚ್ಚಾಗಿದೆ ಎಂದು ಸಿಬಿಐ ಅಭಿಪ್ರಾಯ ಪಟ್ಟಿವೆ. ಸುವ್ಯವಸ್ಥಿತ ಸೂತ್ರಧಾರಿ ಸಂಸ್ಥೆಯೊಂದರ ಆಶ್ರಯದಲ್ಲಿ ಆತ ರಕ್ಷಿಸಲ್ಪಟ್ಟಿರುವುದು ಖಚಿತವಾಗಿದೆ.

ಸ್ಟೇಯಿನ್ಸ್ ಮತ್ತು ಆತನ ಮಕ್ಕಳ ಹಂತಕರು ಯಾರು ಎಂಬುದು ಇಂದಲ್ಲ ನಾಳೆ ಪತ್ತೆಯಾಗಬಹುದು. ಆದರೆ ತಂದೆ ಮಕ್ಕಳನ್ನು ಭಸ್ಮಮಾಡಿದ ಬೆಂಕಿ ಯಾವುದು ಎಂದು ಅದನ್ನು ಮುಟ್ಟಿನೋಡುವ ಅಗತ್ಯವಿಲ್ಲ. ಅದು ಬಾಬ್ರಿ ಮಸೀದಿಯನ್ನು ನಾಶ ಮಾಡಿದವರು ದೇಶದ ಉದ್ದಗಲಕ್ಕೂ ಹಚ್ಚಿದ ಬೆಂಕಿ! ಅದು ಈದ್ಗಾ ಮೈದಾನಿನಲ್ಲಿ ರಾಷ್ಟ್ರ ಧ್ವಜ ಹಾರಿಸುವ ಹೆಸರಿನಲ್ಲಿ ಹುಬ್ಬಳ್ಳಿಯಲ್ಲಿ ಹಚ್ಚಿದ ಬೆಂಕಿ! ಅದು ಗುಜರಾತ, ರಾಜಾಸ್ತಾನಗಳಲ್ಲಿ ಕ್ರೈಸ್ಥರ ಚರ್ಚುಗಳನ್ನು ಬೈಬಲುಗಳನ್ನು ಭಸ್ಮ ಮಾಡಿದ ಬೆಂಕಿ! ಅದು ಮುಂಬೈ ನಗರವನ್ನು ಹೊತ್ತಿ ಉರಿಸಿದ ಬೆಂಕಿ! ಅದು ಇತ್ತೀಚಿಗೆ ಸುರತ್ಕಲ್ ಪಟ್ಟಣವನ್ನು ದಹಿಸಿದ ಬೆಂಕಿ! ಅದು ಪ್ರಶಾಂತವಾದ ಬಾಬಾಬುಡಾನ್ ಗಿರಿಯ ಶಾಂತಿಯನ್ನು ಕೊಲ್ಲಲು ಬಂದ ಬೆಂಕಿ! ಅದು ನಾವೆಲ್ಲರೂ ಎಚ್ಚರದಿಂದ ಗುರುತಿಸಲೇ ಬೇಕಾದ ಬೆಂಕಿ! ಅದು ಕೋಮುವಾದದ ಬೆಂಕಿ! ಅದು ಮತೀಯವಾದದ ಬೆಂಕಿ! ಅದು ಮೂಲಭೂತವಾದದ ಬೆಂಕಿ! ಎಲ್ಲ ದೇಶ ಪ್ರೇಮಿ ದೇಶ ಬಾಂಧವರ ಆಕ್ರೋಶ ಮುಗಿಲಿನಂತೆ ಸುರಿದು, ಸಾಗರದಂತೆ ಉಕ್ಕಿ ಹರಿದು ಈ ಬೆಂಕಿಯನ್ನು ಆರಿಸಬೇಕಾಗಿದೆ, ದೇಶವನ್ನು ಉಳಿಸಬೇಕಾಗಿದೆ. ಬರಲಿರುವ ಚುನಾವಣೆಗಳು ಎಲ್ಲಾ ದೇಶ ಪ್ರೇಮಿ ಜಾತ್ಯಾತೀತ ಶಕ್ತಿಗಳಿಗೊಂದು ಆಹ್ವಾನ!

ನಮ್ಮ ವೀರ ಸೈನಿಕರ ಬಲಿದಾನ ವ್ಯರ್ಥವಾಗದಿರಲಿ

ಪುಟ 2 ರಿಂದ

ನಿಯಂತ್ರಣಾ ರೇಖೆಯನ್ನು ಗೌರವಿಸುವುದು ಎಂದರೆ ಪಾಕಿಸ್ತಾನದ ಎಲ್ಲಾ ಪಡೆಗಳನ್ನು ಹಿಂತೆಗೆದುಕೊಳ್ಳುವುದು ಎಂದಾಗಿದ್ದರೆ ಇದು ಸ್ವಾಗತಾರ್ಹ. ಆದರೆ ಅಧ್ಯಕ್ಷ ಕ್ಲಿಂಟನ್‌ರ 'ವೈಯಕ್ತಿಕ ಆಸಕ್ತಿ' ಬಗ್ಗೆ ಎಚ್ಚರದಿಂದಿರುವುದು ಒಳ್ಳೆಯದು. ಏಕೆಂದರೆ ಈ 'ಆಸಕ್ತಿ' ನಮ್ಮೆರಡು ದೇಶಗಳಲ್ಲಿನ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸುವ ಆಸಕ್ತಿಯಾಗಿ ಕಾಶ್ಮೀರದ ಪ್ರಶ್ನೆ ದ್ವಿಪಕ್ಷೀಯ ಸಮಸ್ಯೆಯಾಗುಳಿಯದೆ ಅಂತರ್‍ರಾಷ್ಟ್ರೀಯ ಪ್ರಶ್ನೆಯಾಗಿ ಬಿಡಬಹುದು. ಪಾಕಿಸ್ತಾನ ಬಯಸುವುದು ಇದನ್ನೇ. ಆದರೆ ಭಾರತ ಸದಾ ಇದನ್ನು ವಿರೋಧಿಸುತ್ತಾ ಬಂದಿದೆ.

ಪಾಕಿಸ್ತಾನದ ಪ್ರಧಾನಿ ಅಮೆರಿಕಾಕ್ಕೆ ತುರ್ತು ಭೇಟಿ ಏಕೆ ನೀಡಿದರು? ಇದಕ್ಕೆ ಮೂರು ಕಾರಣಗಳನ್ನು ಕಾಣಬಹುದು - ಒಂದು, ವಿಶ್ವದ ಅಭಿಪ್ರಾಯವನ್ನು ತನ್ನ ಪರವಾಗಿ ರೂಪಿಸುವಲ್ಲಿ ಅದು ಸಂಪೂರ್ಣ ಸೋತಿತು - ವಿಶ್ವಸಂಸ್ಥೆ, ರಶ್ಯಾ, ಚೀಣಾ, ಜಿ-8, ಅಮೆರಿಕಾ, ಬ್ರಿಟನ್ ಯಾರೂ ಪಾಕಿಸ್ತಾನದ ತರ್ಕವನ್ನು ಒಪ್ಪಲು ಸಾಧ್ಯವಾಗಿಲ್ಲ. ಎರಡನೆಯದಾಗಿ, ಭಾರತ ಸರಕಾರ ಪಾಕಿಸ್ತಾನದ ಕಸರತ್ತುಗಳನ್ನು ಗಮನಿಸುವಲ್ಲಿ ಸಾಕಷ್ಟು ತಡ ಮಾಡಿದರೂ ನಮ್ಮ ಸೈನಿಕರು ಹಲವು ಮಿತಿಗಳ ನಡುವೆಯೂ ವೀರಾವೇಶದಿಂದ ಕಾದಾಡಿ ಒಂದೊಂದಾಗಿ ನಮ್ಮ ಪ್ರದೇಶಗಳನ್ನು ಮತ್ತೆ ವಶಪಡಿಸಿಕೊಳ್ಳುತ್ತಿದ್ದಾರೆ. ಇನ್ನು ಬಹಳ ದಿನ ಪಾಕಿಸ್ತಾನೀ ಪಡೆಗಳು ಅಲ್ಲಿರಲು ಸಾಧ್ಯವಿಲ್ಲ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಇದರ ಶ್ರೇಯಸ್ಸು ನಮ್ಮ ವೀರಸೈನಿಕರಿಗೆ ಸಲ್ಲಬೇಕು. ಮೂರನೆಯದಾಗಿ, ಪಾಕಿಸ್ತಾನದ ಸನ್ನಿವೇಶ - ರಾಜಕೀಯ ಮತ್ತು ಆರ್ಥಿಕ ಸನ್ನಿವೇಶ-ಬಿಕ್ಕಟ್ಟುಗ್ರಸ್ತವಾಗಿದೆ. ಮೇ ತಿಂಗಳಲ್ಲಿ ಅಮೆರಿಕಾ ಅದಕ್ಕೆ ಐಎಂಎಫ್ ಸಾಲ ಕೊಡದಿರುತ್ತಿದ್ದರೆ ಅದು ಬಹಳ ಕಷ್ಟದ ಪರಿಸ್ಥಿತಿ ಎದುರಿಸಬೇಕಾಗುತ್ತಿತ್ತು. ಈ ರೀತಿ ಅದು ಅಮೆರಿಕಾದ ಮೇಲೆ ಬಹಳವಾಗಿ ಅವಲಂಬಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಕ್ಲಿಂಟನ್-ಶರೀಫ್ ಹೇಳಿಕೆ ಪ್ರಕಟಗೊಂಡಿದೆ.

ಆದರೆ ಈ ಹೇಳಿಕೆಯ ಅನುಷ್ಠಾನ ಅಷ್ಟು ಸುಲಭವಲ್ಲ. ನವಾಜ್ ಷರೀಫ್ ಸ್ವದೇಶಕ್ಕೆ ಮರಳಿದ ಮೇಲೆ ನಿಯಂತ್ರಣಾ ರೇಖೆಯಿಂದ ಹಿಂದಿರುಗುವ ಮಾತನಾಡುವ ಬದಲು 'ಕಾರ್ಗಿಲ್ ಸಮಸ್ಯೆ ಪರಿಹಾರಕ್ಕೆ ಸಹಕರಿಸಬೇಕು' ಎಂದು ಮುಜಾಹಿದ್ದೀನ್‌ಗಳಿಗೆ (ಅತಿಕ್ರಮಣಕೋರರಿಗೆ) ಮನವಿ ಮಾಡಿಕೊಳ್ಳಲಾಗಿದೆ. ಕ್ಲಿಂಟನ್-ಶರೀಫ್ ಹೇಳಿಕೆಗೆ ಪಾಕಿಸ್ತಾನದಲ್ಲಿ ವ್ಯಾಪಕ ಪ್ರತಿಭಟನೆಯೂ ವ್ಯಕ್ತವಾಗಿದೆ. ಅಲ್ಲಿ ನಾಗರೀಕ ಆಡಳಿತದ ಮೇಲೆ ಸೇನೆಯ ಹಿಡಿತವೂ ಗುಟ್ಟಿನ ಸಂಗತಿಯೇನಲ್ಲ.

ಆದರೂ ನವಾಜ್ ಶರೀಫ್ ಈ ಹೇಳಿಕೆಗೆ ಸಹಿ ಹಾಕುವ ಮುನ್ನ ತನ್ನ ಸೇನಾಧಿಪತಿ ಜನರಲ್ ಪರ್ವೆಜ್ ಮುಶರ್ರಫ್ ರೊಡನೆ ಸಮಾಲೋಚನೆ ನಡೆಸಿರಲೇಬೇಕು. ಈ ವ್ಯಕ್ತಿಯನ್ನು ಸೇನಾಧಿಪತಿಯಾಗಿ ನೇಮಿಸಿದ್ದೇ ನವಾಜ್ ಶರೀಫರು. (ಮುಜಾಹಿದ್ದೀನ್ ಮತ್ತಿತರ ಇಸ್ಲಾಮೀ ಗುಂಪುಗಳಿಗೆ ಪ್ರೋತ್ಸಾಹ, ಮಾರ್ಗದರ್ಶನ ನೀಡುತ್ತಿದ್ದ ವ್ಯಕ್ತಿಯಂತೆ ಈತ)


ಹೀಗೆ ಒಂದೆಡೆ ಮುಂದೊತ್ತುತ್ತಿರುವ ಭಾರತದ ಸೇನಾ ಪಡೆಗಳು, ಇನ್ನೊಂದೆಡೆ ಪ್ರತಿಕೂಲ ವಿಶ್ವ ಜನಾಭಿಪ್ರಾಯ, ಹಾಗೂ ಅಮೆರಿಕದ ಕೈಯಲ್ಲಿ ಅದು ಕೊಟ್ಟಿರುವ ಲಗಾಮು - ಇವೆಲ್ಲವುಗಳಿಂದ ಈ ಜಂಟಿ ಹೇಳಿಕೆಯನ್ನು ಜಾರಿಗೆ ತರದೆ ಪಾಕಿಸ್ತಾನಕ್ಕೆ ಬೇರೆ ದಾರಿಯಿಲ್ಲ.

ಕಾಶ್ಮೀರದ ಪ್ರಶ್ನೆಯನ್ನು ಅಂತರ್‍ರಾಷ್ಟ್ರೀಯಗೊಳಿಸುವಲ್ಲಿ ತಾವು ಯಶಸ್ವಿಯಾಗಿರುವುದಾಗಿ ಒಬ್ಬ ಮಂತ್ರಿ ಹೇಳಿದ್ದಾರಂತೆ. ಅಧ್ಯಕ್ಷ ಕ್ಲಿಂಟನ್ನರ 'ವೈಯಕ್ತಿಕ ಆಸಕ್ತಿ'ಯ ಹಿಂದಿರುವ ಅಪಾಯವನ್ನು ಈ ಹಿನ್ನೆಲೆಯಲ್ಲಿ ಗಮನಿಸದಿರಲು ಸಾಧ್ಯವೇ?

ನಮ್ಮ ಸೈನಿಕರು ಅಪಾರ ಬಲಿದಾನಗಳನ್ನು ಕೊಟ್ಟು ಮುನ್ನಡೆ ಸಾಧಿಸಿದ್ದಾರೆ. ಈ ಬಲಿದಾನ ವ್ಯರ್ಥವಾಗಬಾರದು. ಅತಿಕ್ರಮಣಕೋರರನ್ನು ಸಂಪೂರ್ಣವಾಗಿ ಹಿಂದಕ್ಕಟ್ಟುವವರೆಗೂ ಇದು ಮುಂದುವರಿಯಬೇಕು. ಲಾಹೋರ್ ಘೋಷಣೆಯ ನಂತರ ಮೈಮರೆತಂತೆ ಈಗ ಕ್ಲಿಂಟನ್-ಶರೀಫ್ ಹೇಳಿಕೆಯಿಂದ ಸಂತೃಪ್ತ ಮನೋಭಾವ ತಳೆಯಬಾರದು.

ಎರಡನೆಯದಾಗಿ, ಅಮೆರಿಕನ್ನರ ಆಸಕ್ತಿಯ ಬಗ್ಗೆ ಎಚ್ಚರದಿಂದಿರಬೇಕು. ಬಿಜೆಪಿ ಚಿತ್ರಿಸುವಷ್ಟು ಅವರು ಅಮಾಯಕರೇನಲ್ಲ. ಶಾಂತಿ ನೆಲೆಸಲು ನೆರವು ನೀಡುವುದನ್ನು ಅವರು ಮಧ್ಯಪ್ರವೇಶಕ್ಕೆ ಬಳಸಿಕೊಳ್ಳಬಹುದು. ಇದನ್ನು ಭಾರತ ಸದಾ ವಿರೋಧಿಸಿಕೊಂಡು ಬಂದಿರುವುದರಿಂದ ಈಗಲೂ ಅದಕ್ಕೆ ಅವಕಾಶ ನೀಡಬಾರದು. ಭಾರತ ಈ ಸಂಘರ್ಷದಲ್ಲಿ ನೀತಿಬದ್ಧ ನಿಲುವು ತಳೆದಿದೆ. ಆದ್ದರಿಂದ ಅದು ಯಾವುದೇ ಪರಿಸ್ಥಿತಿಯನ್ನು, ಒತ್ತಡವನ್ನು ಎದುರಿಸಲು ಶಕ್ತವಾಗಿದೆ.

ಜ್ಯೋತಿಬಸುರವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಆ ದಿನ 1977 ರ ಜೂನ್ 21 ಪ.ಬಂಗಾಳದ ಜನತೆಗೆ ಒಂದು ದೊಡ್ಡ ಹಬ್ಬ. ಉತ್ಸಾಹದ ಮಹಾಪೂರ. 8 ವರ್ಷಗಳಿಂದ ಬಂಗಾಲವನ್ನು ಆವರಿಸಿದ ಪ್ರಜಾಪ್ರಭುತ್ವನಾಶದ ಗೂಂಡಾರಾಜ್ಯದ ಗಾಢಾಂಧಕಾರವನ್ನು ಅಂತ್ಯವೇ ಇಲ್ಲವೇನೋ ಎಂದು ಭಾವಿಸಿದ ಆದ್ದರಿಂದ ಮತ್ತಷ್ಟು ಭಯಂಕರವಾಗಿ ಕಂಡಿದ್ದ ಕತ್ತಲೆಯೊಡನೆ ಹೋರಾಟ ಮಾಡಿ ಪಸರಿಸಿದ ಅರುಣಕಾಂತಿಯ ಬೆಳಕು ಮೂಡಿಸಿದ್ದ ಉತ್ಸಾಹವದು. ಅಂದಿನಿಂದ ಇಂದಿನವರೆಗೆ ಬೆಳಕಿನ ಹೊನಲು ನಿರಂತರ ಬೆಳಕಿನ ಪ್ರವಾಹ.



ಜೂನ್ 21, 1999 ರಂದು ಜ್ಯೋತಿಬಸು ಪ್ರತಿಜ್ಞೆ ಸ್ವೀಕರಿಸುತ್ತಿರುವುದು. ಪಶ್ಚಿಮ ಬಂಗಾಳದ ವಿದಾನಸೌಧ 'ರೈಟರ್ ಬಿಲ್ಡಿಂಗ್'ನ ಹೊರಗೆ ಅಂದು ವ್ಯಕ್ತಗೊಂಡ ಜನಸಾಗರದ ಅಮಿತೋತ್ಸಾಹ



22 ವರ್ಷಗಳ ನಿರಂತರ...
ವಿಶ್ವದಲ್ಲಿಯೇ ಒಂದು ದಾಖಲೆ

ಜಿ.ಎನ್.ನಾಗರಾಜ್

ಇಂದಿರಾಗಾಂಧಿಯವರ ದಾರುಣ ಹತ್ಯೆಯ ಹಿನ್ನೆಲೆಯಲ್ಲಿ 1984 ರಲ್ಲಿ ದೇಶದ ಅನೇಕ ರಾಜಕೀಯ ಪಕ್ಷಗಳು ತರಗೆಲೆ, ಕಸಕಡ್ಡಿಯಾಗಿ ಗುಡಿಸಿ ಹೋದಾಗ ಕೂಡಾ ಮಿಣಕ್ಕೆಂದು ಕೆಲವು ಸೆಕೆಂಡ್ ಡಿಮ್ ಆಗಿ ಮತ್ತೆ ಪ್ರಕಾಶಮಾನವಾಗಿ ಬೆಳಕುಚೆಲ್ಲುವ ವಿದ್ಯುದ್ದೀಪದಂತೆ ಎಡರಂಗ ಸರ್ಕಾರ ಸಶಕ್ತವಾಗಿ ಮುಂದುವರೆಯಿತು. ಜನಶಕ್ತಿಯೆಂಬ ವಿದ್ಯುತ್‌ನ ಹರಿವಿನಲ್ಲಿ ಪವರ್‌ಕಟ್ ಆಗಲಿಲ್ಲ. ಎಡರಂಗ ಸರ್ಕಾರ ಬೆಳಕನ್ನು ಕೊಡುವಲ್ಲಿ ಆತಂಕ ಉಂಟಾಗಲಿಲ್ಲ.

ಎಡರಂಗ ಸರ್ಕಾರ ಪ್ರಥಮವಾಗಿ ಅಧಿಕಾರ ಸ್ವೀಕಾರ ಮಾಡಿದ ದಿನ ಹುಟ್ಟಿದ ಶಿಶು ಇಂದು 22 ರ ವಯಸ್ಸಿನ ನವ ಯುವಕ ಯುವತಿ ಕಾಂಗ್ರೆಸ್ ಎಂಬ ಕತ್ತಲೆಯ ನೇರ ಪರಿಚಯವಿಲ್ಲದೆ ಬೆಳಕಿನಲ್ಲಿಯೇ ಬೆಳೆದಿದ್ದಾನೆ/ಳೆ. ಅವನು ಮಾತ್ರವಲ್ಲ, ಬುದ್ಧಿ ಬರುವ ವಯಸ್ಸು ಎಂದು ಸಾಮಾನ್ಯವಾಗಿ ಹೇಳುತ್ತಾರಲ್ಲ, ನಮ್ಮ ಅನುಭವಗಳು ಅರೆಬರೆ ಅರ್ಥವಾಗುವ, ಅವನ್ನು ನೆನಪಿನ ಮೂಸೆಯಲ್ಲಿ ಇಟ್ಟುಕೊಳ್ಳಲಾರಂಭಿಸುವ ವಯಸ್ಸು, ಅಂದರೆ ಸುಮಾರು 10-12 ವಯಸ್ಸಿನ ಬಾಲಕರು ಅವರಿಗೆ ಇಂದು 32-35 ರ ಹರಯ. ಅಂದರೆ ಸುಮಾರು 35 ವರ್ಷ ವಯಸ್ಸು ಮತ್ತು ಅದಕ್ಕಿಂತ ಕೆಳಗಿನ ಯುವಕ-ಯುವತಿಯರು, ಎಡರಂಗ ಸರ್ಕಾರದ ಅವಧಿಯಲ್ಲಿಯೇ ಬೆಳೆದವರು ಕೋಟಿಗಟ್ಟಲೆ ಇದ್ದಾರೆ. ಈ ಯುವಕ-ಯುವತಿಯರಿಗೆ ಪ.ಬಂಗಾಲದ ಜನ ಕಾಂಗ್ರೆಸ್ ಆಳ್ವಿಕೆಯಲ್ಲಿ ಅನುಭವಿಸಿದ ಘೋರ ನರಕದ ಪ್ರತ್ಯಕ್ಷ ಪರಿಚಯವಿಲ್ಲ. ಅಲ್ಲಿಯ ಕಾಲೇಜು ವಿ.ವಿ.ಕೇಂದ್ರಗಳಲ್ಲಿ ತುಂಬಿ ತುಳುಕಾಡುತ್ತಿದ್ದ ಅರಾಜಕತೆಯ, ವರ್ಷಗಟ್ಟಲೆ ಪರೀಕ್ಷೆಗಳು ನಡೆಯದೇ ಪದವಿಗಳು ಸಿಗದೇ ಪರದಾಡುತ್ತಿದ್ದ, ಸಂಜೆಯಾದರೆ ಸಾಕು ಕಲ್ಕತ್ತಾದಲ್ಲಿ ಮಾಫಿಯಾ-ಗೂಂಡಾ ಆಳ್ವಿಕೆಯಲ್ಲಿ ಯುವತಿಯರಿರಲಿ, ಯುವಕರು ಕೂಡಾ ಬೀದಿಗಳಲ್ಲಿ ತಿರುಗಾಡಲಂಜುವ ದಿನಗಳನ್ನು ನೋಡಿಲ್ಲ. ಇಡೀ ದೇಶದಲ್ಲಿ ಪ್ರಸಿದ್ಧವಾದ ಕಲ್ಕತ್ತಾದ 'ಪವರ್ ಕಟ್' ಆಗಲೇ ಮಾಸಿಹೋಗಿರುವ ನೆನಪು. ಇನ್ನೂ ನಗರ ಸಭೆ, ಪಂಚಾಯ್ತಿಗಳಿಗೆ ದಶಕಗಟ್ಟಲೇ ಚುನಾವಣೆ ನಡೆಯದೆ ಇದ್ದದ್ದು, ನಡೆದಾಗಲೂ ಭ್ರಷ್ಟಚಾರ ತಾಂಡವವಾಡುತ್ತಿದ್ದದ್ದು ಈ ಕೋಟಿಗಟ್ಟಲೆ ಯುವಕರಿಗೆ ಗೊತ್ತಿಲ್ಲ. ಹಳ್ಳಿ ಹಳ್ಳಿಗಳಲ್ಲಿ ಭೂಮಾಲಕ ಶ್ರೀಮಂತರ ಅಟ್ಟಹಾಸ, ಗೂಂಡಾಪಡೆಗಳು, ದಿನನಿತ್ಯ ದೌರ್ಜನ್ಯ, ದಬ್ಬಾಳಿಕೆ, ಕೊಲೆಗಳ ಕಥೆ ಈಗ ಅವನಿಗೆ ಕೇವಲ ಗತಕಾಲದ ಇತಿಹಾಸ. ಜಾತಿ ಭಾವನೆ ಅಸ್ಪೃಶ್ಯತೆಯ ಆಚರಣೆಗಳು ಅವನಿಗೆ ಅವನ ಬದುಕನ್ನು ಹಿಂಡುವ ವಾಸ್ತವಗಳಾಗಿಲ್ಲ.

ಪಶ್ಚಿಮ ಬಂಗಾಳದ ಜನರ ಹಿರಿಯ ತಲೆಮಾರಿನ ಆ ಯಾತನೆಯ ಅರಿವು ಮಾತ್ರ ಅಲ್ಲ, ಭಾರತದ ಇತರ ರಾಜ್ಯಗಳ ನೆರೆಯ ಬಿಹಾರದ, ಅಸ್ಸಾಮಿ, ಒರಿಸ್ಸಾದ ದೂರದ ಮಹಾರಾಷ್ಟ್ರದ, ಕರ್ನಾಟಕದ ಯುವಕ-ಯುವತಿಯರು ಈ 22 ವರ್ಷಗಳಲ್ಲಿ ಅನುಭವಿಸಿದ, ಅನುಭವಿಸುತ್ತಿರುವ ಘೋರ ಬದುಕು ಆತನ ಪಾಲಿಗೆ ದೂರದ ಕಥೆಗಳಾಗಿವೆ.

ಈ 22 ವರ್ಷಗಳಲ್ಲಿ ಭಾರತದ ಜನತೆ ಏನೆಲ್ಲಾ ಕಂಡಿದ್ದಾರೆ, ಅನುಭವಿಸಿದ್ದಾರೆ! ಭಾರತದ ರಾಜಕೀಯ ಎಂತಹ ಇಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದೆ! ಭಾರತದ ಇತರ ರಾಜ್ಯಗಳ ಜನರು ಕಂಡ ಸರ್ಕಾರಗಳೆಷ್ಟು, ಎಂತಹವು! ಬಿಹಾರದ ಜೆಹಾನ್‌ಬಾದ್‌ನ ಕಗ್ಗೊಲೆಗಳು, ದಲಿತರ ಮೇಲಿನ ದೌರ್ಜನ್ಯ, ಜಾ... ದಂಗೆಗಳು, ಮಹಿಳೆಯರ ಮೇಲಿನ ಅತ್ಯಾಚಾರ... ವ್ಯಾಪಕವಾಗಿರುವ ವರದಕ್ಷಿಣೆ ಹತ್ಯೆಗಳ... ಕಾಲಹಂದಿಯ ಬರಗಾಲ, ಬೀದರ್ ಗುಲ್ಬರ್ಗ ರೈತ... ಆತ್ಮಹತ್ಯೆ ಪ.ಬಂಗಾಲದ ಜನತೆಗೆ ಅಪರಿಚಿತ.

ಕೋಮುದಂಗೆಗಳು, ಬಾಂಬ್ ಆಸ್ಫೋಟಗಳು... ಈದ್ಗಾ ವಿವಾದ, ಅದಕ್ಕಾಗಿ ತಿಂಗಳುಗಟ್ಟಲೆ ಕರ್ಫ್ಯೂ... ಹೊಡೆದಾಟ ಇವು ಕೂಡ ಆತಂಕಪಡುವ ಆದ... ನೇರ ಅನುಭವಕ್ಕೆ ಬರದ ಸಂಗತಿಗಳು. ಏಕೆಂದ... ಇದೇ 22 ವರ್ಷದ ಅವಧಿಯಲ್ಲಿ ಪ.ಬಂಗಾ...

ದೇಶದ ಮಾತ್ರವಲ್ಲ, ಇಡೀ ವಿಶ್ವದ ಗಮನ ಸೆಳೆದ ಗ್ರಾಮೀಣ ಅಭಿವೃದ್ಧಿಯ ಪರ್ಯಾಯದಾರಿ.....



"ಬಡ ರೈತರು ಹಾಗೂ ಉತ್ಪಾದಕರು ಹೆಚ್ಚು ಉತ್ಪಾದನೆ ಮಾಡುವ ಸಾಮರ್ಥ್ಯ ಹೊಂದಿದ್ದಾರೆ ಎಂಬುದನ್ನು ಗಟ್ಟಿ ಪುರಾವೆಗಳ ಆಧಾರದಲ್ಲಿ ನಾವು ಗುರುತಿಸಿದ್ದೇವೆ. ಆದ್ದರಿಂದ ಮುಖ್ಯವಾಗಿ ಗ್ರಾಮೀಣ ಬಡವರ ಮೂಲಕ ನಡೆಯುವ ಗ್ರಾಮೀಣ ಅಭಿವೃದ್ಧಿಯ ಪ್ರಗತಿಯ ಪ್ರಕ್ರಿಯೆಯೇ ಉತ್ಪಾದಕತೆ ಮತ್ತು ಸಮಾನತೆಯತ್ತ ಪ್ರಗತಿಯಾಗುತ್ತದೆ ಎಂದೂ ನಾವು ಗುರುತಿಸಿದ್ದೇವೆ"

ಇದು 1986 ರಲ್ಲಿ ಮುಖ್ಯಮಂತ್ರಿ ಜ್ಯೋತಿಬಸುರವರು ಗ್ರಾಮೀಣ ಅಭಿವೃದ್ಧಿ ಕುರಿತಂತೆ ಪ್ರಧಾನ ಮಂತ್ರಿಗಳಿಗೆ ಬರೆದ ಒಂದು ಪತ್ರದಲ್ಲಿನ ಸಾಲುಗಳು. ಎಡರಂಗದ ಮೂಲಭೂತ ನೀತಿಯನ್ನು ಬಿಂಬಿಸುವ ಸಾಲುಗಳಿವು. ಎಡರಂಗ ಸತತವಾಗಿ ಐದು ಬಾರಿ ಮೂರನೇ ಎರಡು ಬಹುಮತದಿಂದ ಗೆದ್ದು ಬರುತ್ತಿರಲು, ಬೂರ್ಜ್ವಾ ಚುನಾವಣಾ ವೀಕ್ಷಕರ ಸಿದ್ಧಾಂತಗಳನ್ನೆಲ್ಲಾ ತಲೆಕೆಳಗು ಮಾಡುತ್ತಿರಲು ಕಾರಣ ಇಲ್ಲಿದೆ. ದೇಶದ ಮಾತ್ರವಲ್ಲ, ಇಡೀ ವಿಶ್ವದ ಗಮನವನ್ನು ಸೆಳೆಯುವ ಸಂಗತಿಯಿದು.

ಸಾಮಾಜಿಕ ನ್ಯಾಯದೊಂದಿಗೆ ಅಭಿವೃದ್ಧಿಯಾಗ ಬೇಕಾದರೆ ಅಭಿವೃದ್ಧಿಗಿಂತ ಮೊದಲು ಮರು ವಿತರಣೆಯಾಗ ಬೇಕು - ಇದು ಎಡರಂಗ ಗ್ರಾಮೀಣ ಅಭಿವೃದ್ಧಿ ಧೋರಣೆಯ ತಾತ್ವಿಕ ಆಧಾರ. ಇದರಲ್ಲಿ ಎರಡು ಮುಖ್ಯ ಗುರಿಗಳಿವೆ. ಮೊದಲನೆಯದಾಗಿ ಜನರನ್ನು ಅಭಿವೃದ್ಧಿ ಕಾರ್ಯಕ್ರಮಗಳ ಜಾರಿಯಲ್ಲಿ ತೊಡಗಿಸಿಕೊಳ್ಳುವುದಷ್ಟೇ ಅಲ್ಲ, ಅಭಿವೃದ್ಧಿ ಯೋಜನೆಗಳ ಸಿದ್ಧತೆ ಮತ್ತು ಉಸ್ತುವಾರಿಯಲ್ಲೂ ಅವರನ್ನು ತೊಡಗಿಸಿಕೊಳ್ಳುವುದು. ಎರಡನೆಯದಾಗಿ, ವರ್ಗ ಬಲಾಬಲದಲ್ಲಿ ಬಡವರು ಮತ್ತು ದುಡಿವ ಜನರ ಪರವಾಗಿ ಬದಲಾವಣೆ ತರುವ ಪ್ರಯತ್ನದಲ್ಲಿ ಅವರನ್ನು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಂಘಟಿತ ರೀತಿಯಲ್ಲಿ ಒಳಗೊಳ್ಳುವುದು. ಆದ್ದರಿಂದಲೇ ಭೂಸುಧಾರಣೆ ಹಾಗೂ ಪಂಚಾಯತುಗಳು ಈ ನೀತಿಯ ಎರಡು ಕಾಲುಗಳಂತಾದವು.

ಎಡರಂಗ ಅಧಿಕಾರಕ್ಕೆ ಬಂದ ಕೂಡಲೇ ಪ್ರಥಮ ಆದ್ಯತೆ ನೀಡಿದ ವಿಷಯವೆಂದರೆ ಭೂ ಸುಧಾರಣೆ. ಏಕೆಂದರೆ ಕರ್ಷಕ ಸಂಬಂಧಗಳ ಪುನರ್ರಚನೆ ಎಡರಂಗದ ಮುಖ್ಯ ಗುರಿಯಾಗಿತ್ತು. ಇದರಲ್ಲಿ ಎರಡು ಅಂಶಗಳಿದ್ದವು - ಒಂದು, ಬರ್ಗಾದಾರರ ಅಂದರೆ ಭಾಗ ಬೆಳೆಗಾರರ ಹೆಸರುಗಳನ್ನು ರೆವಿನ್ಯೂ ದಾಖಲೆಗಳಲ್ಲಿ ದಾಖಲಿಸುವುದು ಮತ್ತು ಮಿಗುತೆ ಭೂಮಿಯನ್ನು ಭೂಹೀನರ ನಡುವೆ ಹಂಚುವುದು. ಇಷ್ಟಕ್ಕೇ ನಿಲ್ಲದೇ, ಭೂ ಸುಧಾರಣೆಯ ಈ ಫಲಾನುಭವಿಗಳಿಗೆ ಕಡಿಮೆ ಬಡ್ಡಿದರಗಳಲ್ಲಿ ಸಾಲ ಮತ್ತು ಇತರ ಲಾಗುವಾಡುಗಳನ್ನು ಒದಗಿಸುವುದು.

ಭಾಗ ಬೆಳೆಗಾರರ ಹೆಸರುಗಳ ದಾಖಲಾತಿಗೆ 'ಆಪರೇಷನ್ ಬರ್ಗಾ' ಕಾರ್ಯಕ್ರಮವನ್ನು ನಡೆಸಲಾಯಿತು. ರೆವಿನ್ಯೂ ದಾಖಲೆಗಳಲ್ಲಿ ಹೆಸರು ನೊಂದಾಯಿಸುವ ಈ ಕೆಲಸವನ್ನು ಅಧಿಕಾರಶಾಹಿಗಳ ಹಿಡಿತದಿಂದ ಬಿಡಿಸಿ ಗ್ರಾಮ ಪಂಚಾಯತುಗಳು ಮತ್ತು ರೈತರ ಸಂಘಟನೆಗಳನ್ನು ಅವರಲ್ಲಿ ಒಳಗೊಳ್ಳಲಾಯಿತು. ಇದರಿಂದಾಗಿ ದೇಶದ ಇತರೆಡೆಗಳಲ್ಲಿ ಆದಂತೆ ಗ್ರಾಮೀಣ ಪಟ್ಟಭದ್ರ ಹಿತಾಸಕ್ತಿಗಳ ಆಟ ಸಾಗದೆ ನಿಜವಾದ ಉತ್ಪಾದಕರಿಗೆ ಅವರ ಕಾನೂನುಬದ್ಧ ಹಕ್ಕು ಕೊಡಿಸಲು ಸಾಧ್ಯವಾಯಿತು. ಪಂಚಾಯತುಗಳನ್ನು ಒಳಗೊಳ್ಳಲಾಯಿತು. ಪ್ರತಿಯೊಂದು ಪಂಚಾಯತು ಸಮಿತಿಯಲ್ಲೂ ಭೂಸುಧಾರಣೆ ಕುರಿತ ಒಂದು ಸ್ಥಾಯೀ ಸಮಿತಿ ರಚಿಸಲಾಯಿತು. ಯಾರ್‍ಯಾರಿಗೆ ಭೂಮಿಯ ಮರುವಿತರಣೆಯಾಗಬೇಕು ಎಂಬ ಪಟ್ಟಿಯನ್ನು ಇದು ಗ್ರಾಮ ಪಂಚಾಯತುಗಳ ನೆರವಿನಿಂದ ತಯಾರಿಸಿತು.

ಈ ಕಾರ್ಯಾಚರಣೆಯಿಂದಾಗಿ 60% ಕೃಷಿ ಭೂಮಿ ಸಣ್ಣ ಹಾಗೂ ಅಂಚಿನಲ್ಲಿರುವ ರೈತರ ಒಡೆತನದಲ್ಲಿದೆ. (ಅಖಿಲ ಭಾರತ ಸರಾಸರಿ 29% ಮಾತ್ರ) ಗೇಣಿಗೆ ಪಡೆದ ಭೂಮಿಯಲ್ಲಿ 95% ಎರಡು ಹೆಕ್ಟೇರ್‌ಗಳಿಗಿಂತ ಕಡಿಮೆ ಭೂಮಿ ಹೊಂದಿರುವ ರೈತರ ಕೈಯಲ್ಲಿದೆ. ಸಣ್ಣ ರೈತರಲ್ಲಿ 98% ಮಂದಿ ತಮ್ಮ ಒಡೆತನದಲ್ಲಿರುವ ಹಾಗೂ ದೊಡ್ಡ ರೈತರಿಂದ ಗೇಣಿಗೆ ಪಡೆದ ಭೂಮಿಗಳಲ್ಲಿ ಕೃಷಿ ಮಾಡುತ್ತಿದ್ದಾರೆ. ಪಶ್ಚಿಮ ಬಂಗಾಳದ ಕೃಷಿ ಭೂಮಿಯ ಪ್ರಮಾಣ ಇಡೀ ದೇಶದ 3.5% ರಷ್ಟು ಮಾತ್ರ. ಆದರೆ ಇಡೀ ದೇಶದಲ್ಲಿ ಸರಕಾರ ವಹಿಸಿಕೊಂಡ ಮಿಗುತೆ ಭೂಮಿಯಲ್ಲಿ 17% ಈ ಒಂದೇ ರಾಜ್ಯದಲ್ಲಿದೆ. ವಿತರಣೆಯಾದ ಭೂಮಿಯ 18.61% ಭೂಮಿ ಕೂಡಾ ಇದೇ ರಾಜ್ಯದಲ್ಲಿದೆ. ಭೂಸುಧಾರಣೆಗೆ ಎಡರಂಗ ಸರಕಾ... ನೀಡಿದ ಆದ್ಯತೆಯ ಫಲ ಇಲ್ಲಿ ಎದ್ದು ಕಾಣುತ್ತದೆ.

ಪಂಚಾಯತುಗಳ ಪುನರುಜ್ಜೀವನ

ಪಂಚಾಯತು ಸಂಸ್ಥೆಗಳಿಗೆ ನಿಯಮಿತ ಚುನಾವ... 1977 ರಲ್ಲಿ ಎಡರಂಗದ ಚುನಾವಣೆ ಭರವಸೆಗಳ... ಒಂದಾಗಿತ್ತು. 1963 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದರೂ ಆದುವರೆ... ಚುನಾಯಿತ ಪಂಚಾಯತು ವ್ಯವಸ್ಥೆಯೆಂಬುದು ರಾಜ್ಯದ... ಇರಲೇ ಇಲ್ಲ. 1978 ರಲ್ಲಿ ಎಡರಂಗ ಮೊದಲಬಾ... ಪಕ್ಷಗಳ ಆಧಾರದಲ್ಲಿ ಚುನಾವಣೆ ನಡೆಸಿತು. ಅಂದಿನಿ... ಪ್ರತಿ ಐದು ವರ್ಷಕ್ಕೊಮ್ಮೆ ನಿಯಮಿತವಾಗಿ ಪಂಚಾಯ... ಚುನಾವಣೆಗಳು ನಡೆದಿವೆ. ಕಳೆದ ವರ್ಷ ಐದನೇ ಬಾ... ಚುನಾವಣೆಗಳು ನಡೆದಿವೆ.

ಪಂಚಾಯತುಗಳ ಚುನಾವಣೆಗಳನ್ನು ಮುಂದೂ... ವುದಕ್ಕೆ ನೆಪಗಳನ್ನು ಹುಡುಕದಿರುವುದು ಮಾತ್ರವೇ ಎಡ... ಜಾರಿಗೆ ತಂದ ಪಂಚಾಯತು ವ್ಯವಸ್ಥೆಯ ಮು... ಲಕ್ಷಣವಲ್ಲ. "ಪಟ್ಟಭದ್ರ ಹಿತಾಸಕ್ತಿಗಳ ಕೇಂದ್ರಗಳನ್ನು ಧ್ವ... ಮಾಡಿ" - ಇದು 1971 ರ ಪಂಚಾಯತು ಚುನಾವಣೆ... ಎಡರಂಗ ನೀಡಿದ ಘೋಷಣೆ. ಇದರಿಂದಾಗಿ ದೇ... ಇತರೆಡೆಗಳಂತೆ ಪಂಚಾಯತುಗಳು ಭೂಮಾಲಕರ ಹಿತ... ಕಾಪಾಡುವ ಕೇಂದ್ರಗಳಾಗುವುದನ್ನು, ಗ್ರಾಮೀ... ಅಭಿವೃದ್ಧಿಯ ಫಲಗಳು ದುರ್ಬಲ ವಿಭಾಗಗ... ತಲುಪದಂತೆ ತಡೆಯುವ 'ಗೇಟ್‌ಕೀಪರ್' ಗಳು ಆಗುವ... ತಡೆಯಲು ಸಾಧ್ಯವಾಯಿತು. ತದ್ವಿರುದ್ಧವಾಗಿ ಗ್ರಾ... ಪಂಚಾಯತುಗಳು ಪಶ್ಚಿಮ ಬಂಗಾಳದಲ್ಲಿ ಸಾಮಾ...

ಕೋಮು ದಂಗೆಗಳನ್ನು ಕಾಣಲೇ ಇಲ್ಲ ಎನ್ನುವಷ್ಟು ಕಡಿಮೆ. ಡಿ. 6, 1992 ರ ನಂತರದ ದಿನಗಳಲ್ಲಿ ಸಹ ಇಡೀ ಭಾರತ ತಿಂಗಳುಗಟ್ಟಲೆ ಕರ್ಫ್ಯೂ, ಕೊಲೆ, ಸುಲಿಗೆ, ಅತ್ಯಾಚಾರ, ಬೆಂಕಿ, ಇವುಗಳಲ್ಲಿ ಮುಳುಗಿದರೆ ಪ.ಬಂಗಾಳ ಇಡೀ ನಮ್ಮದಿಯಾಗಿತ್ತು. ಕಲ್ಕತ್ತಾದಲ್ಲಿ ಕೂಡ ಒಂದೆರಡು ದಿನಗಳಲ್ಲಿಯೇ ಪರಿಸ್ಥಿತಿ ಮಾಮೂಲು ಪರಿಸ್ಥಿತಿಗೆ ಮರಳಿತು. ಏಕೆಂದರೆ 1986 ರಿಂದ 92 ರವರೆಗೆ ಇಡೀ ದೇಶದಲ್ಲಿ ಹಬ್ಬಿದ ಕೋಮುವಿಷ ಪ.ಬಂಗಾಲವನ್ನು ಆವರಿಸಲು ಅಲ್ಲಿಯ ಸರ್ಕಾರ ಜನ ಸಂಘಟನೆಗಳು ಎಡರಂಗ ಪಕ್ಷಗಳು ಬಿಡಲಿಲ್ಲ. ಪ್ರತಿ ನಗರ, ಹಳ್ಳಿ, ಮನೆ, ಮನಸ್ಸುಗಳಲ್ಲಿ ಕೋಮು ಶಕ್ತಿಗಳ ಆಟ ನಡೆಯದಂತೆ ಪ್ರತಿಕಾಳಗ ನಡೆಸಿದರು. ನಿರಂತರ ರಾಜಕೀಯ ಶಿಕ್ಷಣ ರಾಜಕೀಯ ಪಕ್ಷಗಳಿಂದ, ಸಂಘಟನೆಗಳಿಂದ ನಡೆಯಿತು. ಜೊತೆಗೆ ಕೋಮು ದಂಗೆಯನ್ನು ಎದುರಿಸಲು ಬೇಕಾದ ರಾಜಕೀಯ ಧೃಡತೆಯಿಂದ ಆರಂಭದಲ್ಲಿಯೇ ದಂಗೆಕೋರರ ವಿರುದ್ಧ ತೀಕ್ಷ್ಣ ಕ್ರಮಗಳನ್ನು ಸರ್ಕಾರ ತೆಗೆದುಕೊಂಡರೆ, ಎಡರಂಗದ ಸಿಪಿಐ(ಎಂ) ರಾಜಕೀಯ ಕಾರ್ಯಕರ್ತರು ಎಲ್ಲವನ್ನು ಪೋಲೀಸರ ಮೇಲೆ ಹಾಕಿ ಕೈಕಟ್ಟಿ ಕೂಡದೆ ಒಂದು ಕಡೆ ಉದ್ರಿಕ್ತ ಜನತೆಯನ್ನು ಸಮಾಧಾನ ಪಡಿಸುತ್ತಾ ಮತ್ತೊಂದು ಕಡೆ ದಂಗೆಕೂರರನ್ನು ನೇರವಾಗಿ ಮುಖಾಮುಖಿಯಾಗಿ ಎದುರಿಸಿದರು. ಹೀಗೆ ಶೀಘ್ರವಾಗಿ ಜನಜೀವನ ಯಥಾಸ್ಥಿತಿಗೆ

...ಕಿನ ಹೊನಲು ...ಬಂಗಾಳದ ಎಡರಂಗ

ಮರಳುವಂತಾಯಿತು. ಇಂತಹ ಸಾಮೂಹಿಕ, ಸಂಘಟಿತ, ಎದೆಗಾರಿಕೆಯ ಪ್ರಾಣದ ಹಂಗು ತೊರೆದ ಪ್ರಯತ್ನ ಯಾವ ರಾಜ್ಯದಲ್ಲಿ ನಡೆದಿದೆ.

ಕರ್ನಾಟಕದಲ್ಲಿ 9 ಜನ ಮುಖ್ಯಮಂತ್ರಿಗಳು

ಪ.ಬಂಗಾಲದಲ್ಲಿ ಒಂದೇ ಸರ್ಕಾರ ಒಬ್ಬನೇ ಮುಖ್ಯಮಂತ್ರಿ ಇರುವ ಈ22 ವರ್ಷಗಳಲ್ಲಿ 9 ಜನ ಮುಖ್ಯಮಂತ್ರಿಗಳು ಆಗಿಹೋಗಿದ್ದಾರೆ. ಅವರಲ್ಲಿ ಎಷ್ಟು ಜನರ ಹೆಸರುಗಳು ಜನರಿಗೆ ಮರೆತುಹೋಗಿವೆ. ಕೆಲವು ಹೆಸರು ಜ್ಞಾಪಕವಿರುವುದು ಅದರ ಆಡಳಿತ ಎಂಬ ದುಃಸ್ವಪ್ನ ಮರೆಯಬೇಕೆಂದರೂ ಮರೆಯಲಾಗದೆ ಕಾಡಿಸುವುದರಿಂದ ಉದಾಹರಣೆಗೆ ಗುಂಡೂರಾವ್. ಈ ಅವಧಿಯಲ್ಲಿ ಚುನಾವಣೆಗಳಾಗಿರುವುದು ನಾಲ್ಕೇ ಆದರೂ ಒಂದು ಇಡೀ 5 ವರ್ಷ ಅವಧಿಗೆ ಒಂದೇ ಪಕ್ಷ ಆರಿಸಿಬಂದರೂ 5 ವರ್ಷಗಳ ಅವಧಿಗೆ 3 ಜನ ಮುಖ್ಯಮಂತ್ರಿಗಳು ಒಬ್ಬ ಮುಖ್ಯಮಂತ್ರಿ ಎರಡು ವರ್ಷ ಆಚರಿಸಿದರೆ ಅದಕ್ಕೇ ಒಂದು ದೊಡ್ಡ ಅದ್ದೂರಿ ಉತ್ಸವ ಇವನ್ನೂ ಕರ್ನಾಟಕ ನೋಡಿತು. ಮುಖ್ಯಮಂತ್ರಿಯಾಗಿ ಕುಳಿತು ಕರ್ನಾಟಕದಲ್ಲಿ ತಾನೇನಾದರೂ ಸಾಧಿಸಬಹುದೇ, ಏನಾದರೂ ಅಭಿವೃದ್ಧಿ ಮಾಡಬಹುದೇ ಎಂದು ಅತ್ತಿತ್ತ ನೋಡುವಷ್ಟರಲ್ಲೇ ಕಾಲೆಳೆಯುವ ಪ್ರಯತ್ನ, ಗುಂಪುಗಾರಿಕೆ ಸಹಿ ಸಂಗ್ರಹ, ದೆಹಲಿಗೆ ತಿರುಗಾಟದಲ್ಲಿಯೇ, ಹೈಕಮಾಂಡ್‌ಗೆ ತೃಪ್ತಿಪಡಿಸುವುದರಲ್ಲಿಯೇ ಎಲ್ಲ ಸಮಯ ವಿನಿಯೋಗ. ಏಕ ಪಕ್ಷ ಸರ್ಕಾರವನ್ನುಳ್ಳ ಕರ್ನಾಟಕವೇ 9 ಜನ ಮುಖ್ಯಮಂತ್ರಿಗಳನ್ನು ಕಂಡರೆ ಉತ್ತರ ಪ್ರದೇಶದಂತಹ ರಾಜ್ಯಕ್ಕೆ ಈ ಅವಧಿಯಲ್ಲಿ ಎಷ್ಟು ಮುಖ್ಯಮಂತ್ರಿಗಳು!

ಮುಖ್ಯಮಂತ್ರಿಗಳ ಕಥೆಯೇ ಹೀಗಾದರೆ ಇನ್ನು ಮಂತ್ರಿಗಳ ಕಥೆ ಆರು ತಿಂಗಳಿಗೊಬ್ಬ ಮಂತ್ರಿ, ಅಥವಾ ಖಾತೆ ಬದಲಾವಣೆ. ಒಂದು ಖಾತೆಯನ್ನು ಹರಿದು ಹಂಚಿ ಒಂದು ತುಣುಕು ನೀಡುವುದು ಇದನ್ನೂ ನಾವು ನೋಡಿದ್ದೇವೆ. ಆದರೆ ಪ.ಬಂಗಾಳದಲ್ಲಿ ಮು.ಮಂತ್ರಿಗಳು ಮಾತ್ರವೇ ಅಲ್ಲ ಮಂತ್ರಿಗಳೂ ಕೂಡ 10,15,20 ವರ್ಷ ಒಂದು ಖಾತೆಗೆ ಒಬ್ಬರೇ ಮಂತ್ರಿ. ಆ ಮಂತ್ರಿಗಳ ಆಯ್ಕೆಯೂ ಖಾತೆಗೆ ಅವಶ್ಯವಿರುವ ವಿದ್ಯಾರ್ಹತೆ, ಅನುಭವ, ಇರುವಂತವರೇ. ಉದಾಹರಣೆ ಅರ್ಥ ಸಚಿವರಾಗಿ ದೇಶಪ್ರಸಿದ್ಧ ಅರ್ಥಶಾಸ್ತ್ರಜ್ಞ ಅಶೋಕ್ ಮಿತ್ರ ಹಾಗೂ ಅಸೀಮ ದಾಸ್‌ಗುಪ್ತ, ವಿದ್ಯುತ್ ಸಚಿವ ಶಾಖೆಗೆ ವಿದ್ಯುತ್ ಇಂಜನಿಯರಿಂಗ್ ಪ್ರಾಧ್ಯಾಪಕರಾಗಿ, ವಿಶ್ವವಿದ್ಯಾಲಯದ ಕುಲಪತಿಯಾಗಿ ಕೆಲಸ ಮಾಡಿದ ತಂತ್ರಜ್ಞಾನದಲ್ಲಿ ಹೆಸರಾಂತ ಡಾ. ಶಂಕರ್ ಸೇನ್, ಕಂದಾಯ, ಭೂಸುಧಾರಣೆ ಖಾತೆಗೆ 40 ವರ್ಷ ರೈತರನ್ನು ಸಂಘಟಿಸುತ್ತ ಭೂಮಿ ಪ್ರಶ್ನೆಯ ಎಲ್ಲ ಮಗ್ಗಲುಗಳನ್ನು ಬಲ್ಲ ಬಿನೋಯ್ ಕೃಷ್ಣ ಚೌಧುರಿ, ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಖಾತೆಗೆ ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿ ವಿಶ್ವವನ್ನೇ ಆಕರ್ಷಿಸುವ ಸಾಧನೆ ಮಾಡಿದ ಎಂ.ಬಿ.ಬಿ.ಎಸ್. ಪದವೀಧರ ಡಾ. ಸೂರ್ಯಮಿಶ್ರ, ಶಿಕ್ಷಣ ಖಾತೆಗೆ ಪ್ರಾಥಮಿಕ ಶಿಕ್ಷಕನಾಗಿ, ಹೈಸ್ಕೂಲ್ ಶಿಕ್ಷಕನಾಗಿ ಗ್ರಾಮಾಂತರ ಪ್ರದೇಶದಲ್ಲಿ ದುಡಿದ ದಲಿತ ಕಾಂತಿಬಿಸ್ವಾಸ್, ಉನ್ನತ ಶಿಕ್ಷಣಕ್ಕೆ ಪ್ರೊ ಸತ್ಯಸಾಧನ ಚಕ್ರವರ್ತಿ ಹೀಗೆ ಈ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು.


ನ್ಯಾಯದ ವಾಹಕಗಳಾದವು. ಪಂಚಾಯತುಗಳ ಮೂಲಕ ಒಂದು ಹೊಸ ಮಾದರಿಯ ಗ್ರಾಮೀಣ ಮುಖಂಡತ್ವ ಮೂಡಿಬಂತು. ಒಂದು ಅಧ್ಯಯನದ ಪ್ರಕಾರ ಆರಿಸಿ ಬಂದವರಲ್ಲಿ 71% ಮಂದಿ ಐದು ಎಕರೆಗಿಂತ ಕಮ್ಮಿ ಭೂಮಿಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳಿಂದ ಬಂದವರು. ಇದಲ್ಲದೆ ಸತತವಾಗಿ ಹೊಸ ಮುಖಂಡತ್ವ ಪಂಚಾಯತುಗಳ ಮೂಲಕ ಮೂಡಿ ಬರುತ್ತಿದೆ. ಈ ಕಾರಣದಿಂದಲೇ ಪಶ್ಚಿಮ ಬಂಗಾಳದ ಗ್ರಾಮ ಪಂಚಾಯತು ವ್ಯವಸ್ಥೆ ಇಡೀವಿಶ್ವದ ಪರಿಣತರ ಗಮನ ಸೆಳೆದಿದೆ.

1985 -86 ರಲ್ಲಿ ಯೋಜನೆಯ ವಿಕೇಂದ್ರೀಕರಣದೊಂದಿಗೆ ಎಡರಂಗ ಈ ಪರ್ಯಾಯ ಮಾರ್ಗದ ಇನ್ನಷ್ಟು ಸಾಧ್ಯತೆಗಳನ್ನು ದೇಶದ ಮುಂದಿಟ್ಟಿತು. ಈಗ ರಾಜ್ಯದ ವಾರ್ಷಿಕ ಯೋಜನಾ ವೆಚ್ಚದ 50% ಜಿಲ್ಲಾ ಮತ್ತು ಬ್ಲಾಕು ಮಟ್ಟದಯೋಜನಾ ಸಮಿತಿಗಳಲ್ಲಿ ನಿರ್ಧಾರವಾಗುತ್ತದೆ.

ಆಡಳಿತದಲ್ಲಿ ಜನಸಾಮಾನ್ಯರನ್ನು ಒಳಗೊಳ್ಳುವ ಪ್ರಕ್ರಿಯೆಯನ್ನು ಎಡರಂಗ 1992 ರಲ್ಲಿ ಇನ್ನೂ ಮುಂದೊಯ್ದಿತು. ಪ್ರತಿಯೊಂದು ಚುನಾವಣಾಕ್ಷೇತ್ರದಲ್ಲಿ 'ಗ್ರಾಮಸಭೆ'ಗಳನ್ನು ರಚಿಸಲಾಯಿತು. ಇದು ವರ್ಷಕ್ಕೆ ಎರಡು ಬಾರಿ ಸಭೆ ಸೇರುತ್ತದೆ. ಈ ಮೂಲಕ ಜನ ಸಾಮಾನ್ಯರು ಮತ್ತು ಮುಖಂಡರ ನಡುವೆ ಐದು ವರ್ಷಕ್ಕೊಮ್ಮೆ ಚುನಾವಣಾ ಸಮಯದಲ್ಲಿ ಮಾತ್ರವೇ ಭೇಟಿಯಾಗುವುದು ತಪ್ಪಿ ವರ್ಷದಲ್ಲಿ ಎರಡು ಬಾರಿ ಜನಗಳ ಟೀಕೆ-ಟಿಪ್ಪಣಿ, ಅಭಿಪ್ರಾಯಗಳನ್ನು ಮುಖಂಡರು ಕೇಳುವಂತಾಗಿದೆ.

ಎಡರಂಗ ತೋರಿದ ಈ ಪರ್ಯಾಯ ದಾರಿಯ ಫಲಗಳೂ ಈಗ ಇಡೀ ದೇಶದ ಮುಂದಿದೆ - ಕೃಷಿ ಉತ್ಪಾದನೆಯಲ್ಲಿ ಪಶ್ಚಿಮ ಬಂಗಾಳಕ್ಕೆ ಈಗ ಮೊದಲ ಸ್ಥಾನ ದೊರೆತಿರುವುದು ಅಂತಹ ಫಲಗಳಲ್ಲಿ ಒಂದು ಮಾತ್ರ,

ಜನಸಾಮಾನ್ಯರ ಕೊಳ್ಳುವ ಶಕ್ತಿ ಹೆಚ್ಚಿಸಿ ತೀವ್ರ ಕೈಗಾರೀಕರಣದತ್ತ



'ನಮ್ಮ ಕೈಯಲ್ಲಿ ಹಣ ಇಲ್ಲ, ಆದರೆ ನಮ್ಮ ದೇಹದಲ್ಲಿ ರಕ್ತ ಇದೆ, ಅದನ್ನು ಮಾರಿ ಹಣ ಸಂಪಾದಿಸಿ ಕಾಣಿಕೆ ನೀಡುತ್ತಿದ್ದೇವೆ. ನಮ್ಮ ಕನಸು ನನಸು ಮಾಡುತ್ತೇವೆ" ಇದು ಬಕ್ರೇಶ್ವರ ತಾಪ ವಿದ್ಯುತ್ ಯೋಜನೆಗೆ ಕೇಂದ್ರ ಸರ್ಕಾರ ಹಣ ಕೊಡಲು ಹಿಂದೇಟು ಹಾಕಿದಾಗ ಪಶ್ಚಿಮ ಬಂಗಾಳದಲ್ಲಿ ಕೇಳಿ ಬಂದ ಮಾತುಗಳು. ಯುವಜನರು, ವಿದ್ಯಾರ್ಥಿಗಳು, ಇತರ ಜನ ವಿಭಾಗಗಳು ರಕ್ತದಾನ ನೀಡಲು ಮುಂದೆ ಬಂದರು. ಸಾಂಸ್ಕೃತಿಕ ಸಮಾರಂಭಗಳು, ಉತ್ಸವಗಳು, ಫಿಲ್ಮ್ ಪ್ರದರ್ಶನಗಳ ಮೂಲಕ ನಿಧಿ ಸಂಗ್ರಹಿಸಲಾಯಿತು. ಕೇಂದ್ರ ಸರ್ಕಾರದ ನಿರಾಕರಣೆಯ ನಂತರ ಎಡರಂಗ ಸರ್ಕಾರ ಈ ವಿದ್ಯುತ್ ಯೋಜನೆಯನ್ನು ಹೇಗಾದರೂ ಪೂರ್ಣಗೊಳಿಸಲೇ ಬೇಕು ಎಂದು ನಿರ್ಧರಿಸಿದಾಗ ಜನಗಳಿಂದ ಅದಕ್ಕೆ ಅಪಾರ ಬೆಂಬಲ ದೊರೆಯಿತು. ಬಹುಶಃ ಒಂದುಯೋಜನೆಯ ಜಾರಿಗೆ ಬೇರೆಲ್ಲೂ ಇಂತಹ ಜನಬೆಂಬಲ ಕ್ರೋಢೀಕರಣಗೊಂಡ ಉದಾಹರಣೆಯಿಲ್ಲ.

ಇದು ಎಡರಂಗ ಸರಕಾರದ ವಿಶಿಷ್ಟ ಸ್ವರೂಪಕ್ಕೆ ಆದರ ಕೈಗಾರಿಕಾ ನೀತಿಯ ವಿಶಿಷ್ಟತೆಗೆ ಒಂದು ಉದಾಹರಣೆ. ಒಂದೊಮ್ಮೆ ವಿದ್ಯುತ್ ಕಡಿತಗಳಿಗೆ ಕುಖ್ಯಾತವಾದ ಒಂದು ರಾಜ್ಯ ಈಗ ಮಿಗುತೆ ವಿದ್ಯುತ್ ಹೊಂದುವಂತಾಗಿರುವುದು ಇಂತಹ ಜನ-ಪರ ಒಲವಿನ ನೀತಿಯಿಂದಾಗಿಯೇ.

ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಸಂಪನ್ಮೂಲದ ಕೊರತೆ ಮಹಾರಾಷ್ಟ್ರ, ಕರ್ನಾಟಕಗಳಂತೆ ಪಶ್ಚಿಮ ಬಂಗಾಳದಲ್ಲೂ ಇತ್ತು. ವಿದೇಶಿ ಕಂಪನಿಗಳ ಅವಲಂಬನೆ ಅಲ್ಲಿಯೂ ಬೇಕಾಗಿತ್ತು. ಆದರೂ ಅಲ್ಲಿ ಎನ್ರೋನ್, ಕೊಜೆಂಟ್ರಿಕ್ಸ್ ಮಾದರಿ ಅನುಸರಿಸಲಿಲ್ಲ. ವಿದೇಶಿ ಕಂಪನಿಗಳಿಗೆ 16% ಪ್ರತಿಫಲದ ಗ್ಯಾರಂಟಿ ಕೊಡುವುದು ಕೇಂದ್ರ ಸರ್ಕಾರದ ನಿಲುವಾಗಿತ್ತು. ಆದ್ದರಿಂದ ಅದನ್ನು ನಿರ್ಲಕ್ಷಿಸುವಂತಿರಲಿಲ್ಲ. ಆದರೆ ಈ ಮಿತಿಯೊಳಗೂ ಅದು ಪರ್ಯಾಯ ದಾರಿ ಹುಡುಕಿಕೊಂಡಿತು. ಮಹಾರಾಷ್ಟ್ರ, ಕರ್ನಾಟಕದ ಸರಕಾರಗಳಂತೆ ಅವರಿಗೆ 16% ಪ್ರತಿಫಲದ ಗ್ಯಾರಂಟಿ, ವಿದ್ಯುತ್ ಖರೀದಿಸುವ ಗ್ಯಾರಂಟಿ ನೀಡಿಯೂ ಒಡೆತನ ಆ ಕಂಪನಿಗಳಿಗೇ ಬಿಡುವ ದಾರಿ ಹಿಡಿಯದೆ ಬಿ.ಬಿ.ಟಿ ಅಂದರೆ(ಕಟ್ಟಿ-ನಿರ್ವಹಿಸಿ-ವರ್ಗಾಯಿಸಿ) ವಿಧಾನ ಅವಲಂಬಿಸಿತು. ಅಂದರೆ ಇದು ಜಂಟೀ ವಲಯದಲ್ಲಿರುತ್ತದೆ. ಖಾಸಗೀ ಕಂಪನಿ ತಾನು ತೊಡಗಿಸಿದ ಬಂಡವಾಳಕ್ಕೆ ಪೂರ್ಣ ಪ್ರತಿಫಲ ಪಡೆದನಂತರ (10-15 ವರ್ಷಗಳ ನಂತರ) ಈಯೋಜನೆಯ ಒಡೆತನ ಪಶ್ಚಿಮ ಬಂಗಾಳ ವಿದ್ಯುತ್ ಅಭಿವೃದ್ಧಿ ನಿಗಮಕ್ಕೆ ಬರುತ್ತದೆ. ಇನ್ನೂ ಇಂತಹ ಕೆಲವು ಕ್ರಮಗಳನ್ನು ಕೈಗೊಂಡದ್ದರಿಂದ ಎನ್ರೋನ್‌ನಲ್ಲಿ ಪ್ರತಿ ಮೆಗಾವಾಟ್ ವಿದ್ಯುತ್ತಿನ ಖರ್ಚು 4.36 ಕೋಟಿ ರೂ. ಬಕ್ರೇಶ್ವರ ಯೋಜನೆಯಲ್ಲಿ ಇದನ್ನು 3.11 ಕೋಟಿ ರೂ. ಗೆ ಸೀಮಿತಗೊಳಿಸಲು ಸಾಧ್ಯವಾಯಿತು. ಇದು ಒಂದು ಉದಾಹರಣೆಯಷ್ಟೆ.


ಇದೇ ರೀತಿ ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯನ್ನು ಜನ-ವಿರೋಧಿ ಅಂಶಗಳನ್ನು ವಿರೋಧಿಸುತ್ತಲೇ, ಈ ಹೊಸ ನೀತಿಯಿಂದಾಗಿ ಹಿಂದಿನ ಕೆಲವು ಅನಗತ್ಯ ಹತೋಟಿಗಳು ಹೋದುದರ ಪ್ರಯೋಜನವನ್ನು ಪಡೆಯಲು ಎಡರಂಗ ಸರಕಾರ ಹಿಂದೆಗೆಯಲಿಲ್ಲ.

1977 ರಲ್ಲಿ ಅಧಿಕಾರಕ್ಕೆ ಬಂದ ನಂತರ ಎಡರಂಗ ಸರಕಾರ ಕೆಲವು ಆದ್ಯತೆಯ ಕ್ಷೇತ್ರಗಳನ್ನು ಗುರುತಿಸಿಕೊಂಡಿತು. ಈ ಪ್ರಕಾರ ಭೂಸುಧಾರಣೆ, ಪಂಚಾಯತ್ ವ್ಯವಸ್ಥೆ, ಕೃಷಿ ಉತ್ಪಾದನೆಯಲ್ಲಿ ತೀವ್ರ ಮುನ್ನಡೆ, ಇವೆಲ್ಲದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಹುಪಾಲು ಜನಸಾಮಾನ್ಯರ ಕೊಳ್ಳುವ ಶಕ್ತಿ ಹೆಚ್ಚಿ ಕೈಗಾರಿಕಾ ಸರಕುಗಳಿಗೆ ಬೇಡಿಕೆ ಹೆಚ್ಚಿದ ಹಿನ್ನೆಲೆಯಲ್ಲಿ ಎಡರಂಗ ಸರಕಾರ ಕೈಗಾರಿಕಾ ಅಭಿವೃದ್ಧಿಯ ಧೋರಣೆಯೊಂದನ್ನು ಅಂಗೀಕರಿಸಿತು. ಇದಕ್ಕೆ ಮೊದಲೇ ಸಣ್ಣ ಪ್ರಮಾಣದ ಉದ್ದಿಮೆಗಳಿಗೆ, ಕೈಮಗ್ಗ ವಲಯಕ್ಕೆ ವಿಶೇಷ ಪ್ರೋತ್ಸಾಹ ನೀಡಲಾಗಿತ್ತು. ಈಗ ಕೃಷಿ ಆಧಾರಿತ ಉದ್ದಿಮೆಗಳು, ತೋಟಗಾರಿಕೆಗೂ ಪ್ರೋತ್ಸಾಹ ನೀಡಲಾರಂಭವಾಯಿತು. ಇಲೆಕ್ಟ್ರಾನಿಕ್ಸ್ ಉದ್ದಿಮೆ ಮತ್ತು ಇತರ ಮಧ್ಯಮ ಹಾಗೂ ದೊಡ್ಡ ಆಧುನಿಕ ಉದ್ದಿಮೆಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಯಿತು. ಹಲ್ದಿಯಾ ಪೆಟ್ರೋ-ರಾಸಾಯನಿಕ ಕಾರ್ಖಾನೆ ಇದರಲ್ಲಿ ಮುಖ್ಯವಾದದ್ದು.

ಉದ್ಯೋಗವಕಾಶವನ್ನು ಹೆಚ್ಚಿಸುವುದರೊಂದಿಗೆ ಈಗಾಗಲೇ ಇರುವ ಉದ್ಯೋಗವಕಾಶಗಳನ್ನು ಉಳಿಸಿಕೊಳ್ಳುವತ್ತಲೂ ಸರಕಾರ ವಿಶೇಷ ಗಮನ ನೀಡಿತು. ಈಗ ಜವಳಿ, ಸೆಣಬು ಹಾಗೂ ಇಂಜಿನಿಯರಿಂಗ್ ವಲಯದಲ್ಲಿ ರೋಗಗ್ರಸ್ತಗೊಂಡ ಉದ್ದಿಮೆಗಳ ಪುನರುಜ್ಜೀವನಕ್ಕೆ ವಿಶೇಷ ಪ್ರಯತ್ನ ನಡೆಸಲಾಗುತ್ತಿದೆ.

ಕೇಂದ್ರ ಸರಕಾರದ ಕೈಗಾರಿಕಾ ನೀತಿಗೂ ಎಡರಂಗ ಸರಕಾರದ ಕೈಗಾರಿಕಾ ನೀತಿಗೂ ಇರುವ ವ್ಯತ್ಯಾಸವೇನು?

ಈ ಪ್ರಶ್ನೆಗೆ ಜ್ಯೋತಿಬಸುರವರು ನೀಡಿದ ಉತ್ತರ ಹೀಗಿದೆ "ನಾವು ಪಶ್ಚಿಮ ಬಂಗಾಳದಲ್ಲಿ ಕೆಲಸ ಮಾಡುತ್ತಿರುವುದು ಬಹುಪಾಲು ಜನಸಮೂಹಗಳಿಗಾಗಿ, ಮೇಲ್ತುದಿಯಲ್ಲಿರುವ ಕೆಲವರಿಗಾಗಿ ಅಲ್ಲ....... ನಮಗೆ ವಿದೇಶಿ ತಂತ್ರಜ್ಞಾನ ಬೇಕು, ವಿದೇಶಿ ಹೂಡಿಕೆ ಬೇಕು. ಅದು ಪರಸ್ಪರ ಲಾಭದ ಆಧಾರದ ಮೇಲಿರಬೇಕು. ಆದರೆ ಭಾರತ ಸರಕಾರದ್ದು ಈ ವಿಷಯದಲ್ಲಿ ಪಕ್ಷಪಾತದ ನಿಲುವು, ವಿದೇಶಿ ಕಂಪನಿಗಳಿಗೆ ಹೆಚ್ಚು ಪ್ರಯೋಜನ ಒದಗಿಸುವ ನಿಲುವು. ನಿಜ, ನಾವು ಕೇಂದ್ರ ಸರಕಾರದ ಧೋರಣೆಗಳ ಪರಿಮಿತಿಗಳೊಳಗೆ ಕೆಲಸ ಮಾಡಬೇಕಾಗಿದೆ. ಆದರೆ ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ರಾಜ್ಯದ ಜನಗಳಿಗೆ ಸಂಬಂಧಪಟ್ಟಂತೆ ಈ ಧೋರಣೆಯ ನಕಾರಾತ್ಮಕ ಅಂಶಗಳನ್ನು ನಿವಾರಿಸಲು ಪ್ರಯತ್ನಿಸುತ್ತಿದ್ದೇವೆ"



ಮಹಿಳೆಯರನ್ನು ಶಕ್ತಿಸಂಪನ್ನಗೊಳಿಸುವತ್ತ


1972 ರಿಂದ 77 ರವರೆಗೆ ಪಶ್ಚಿಮ ಬಂಗಾಳ ಕಂಡ ಅರೆ-ಫ್ಯಾಸಿಸ್ಟ್ ದಬ್ಬಾಳಿಕೆಯಲ್ಲಿ ಎಡ ನೇತೃತ್ವದ ಮಹಿಳಾ ಸಂಘಟನೆಗಳ ಕಾರ್ಯಕರ್ತೆಯರು ಒಂದು ಪ್ರಮುಖ ಗುರಿಯಾಗಿದ್ದರು.. ಈ ಹಿನ್ನೆಲೆಯಲ್ಲಿ ಬಹುಪಾಲು ಮಹಿಳೆಯರು ಎಡರಂಗದ 36 ಅಂಶಗಳ ಚುನಾವಣಾ ಕಾರ್ಯಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿದರು. ಎಡರಂಗ ಅಧಿಕಾರಕ್ಕೆ ಬಂದ ಮೇಲೆ ಅವರ ಈ ಬೆಂಬಲವನ್ನು ಮರೆಯಲಿಲ್ಲ. ಮಹಿಳೆಯರ ಸಮಸ್ಯೆಗಳ ಪರಿಹಾರದತ್ತ ಗಮನ ಹರಿಸಿತು. ಮುಖ್ಯವಾಗಿ ಮಹಿಳೆಯರ ಶಿಕ್ಷಣ ಮತ್ತು ಮಹಿಳೆಯರಿಗೆ ಉದ್ಯೋಗವಕಾಶ ಈ ಎರಡು ಅಂಶಗಳ ಮೇಲೆ ವಿಶೇಷ ಒತ್ತು ನೀಡಲಾಯಿತು. ಇದರ ಪರಿಣಾಮವಾಗಿ ಒಂದೆಡೆ ಪ್ರಾಥಮಿಕ ಶಿಕ್ಷಣದಲ್ಲಿ ಹೆಣ್ಣು ಮಕ್ಕಳ ಸಂಖ್ಯೆ 1977 ರಿಂದ 1986 ರ ನಡುವೆ 64% ಕ್ಕೇರಿತು. 1985 ರಲ್ಲಿ ಪಶ್ಚಿಮ ಬಂಗಾಳ ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಪ್ರಥಮ ಸ್ಥಾನ ಪಡೆದು ಒಂದು ಕೋಟಿ ರೂ.ಗಳ ರಾಷ್ಟ್ರೀಯ ಪ್ರಶಸ್ತಿ ಗಳಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮಹಿಳೆಯರಿಗೆ ಉದ್ಯೋಗವಕಾಶದ ವಲಯದಲ್ಲೂ ಈ ರಾಜ್ಯದ ಸಾಧನೆ ಗಣನೀಯ. ಹೊಸ ಆರ್ಥಿಕ ನೀತಿಗಳಿಂದಾಗಿ ದೇಶದಲ್ಲೆಲ್ಲಾ ಮಹಿಳೆಯರ ಉದ್ಯೋಗ ಪ್ರಮಾಣ ಇಳಿಮುಖವಾಗುತ್ತಿದ್ದಾಗ ಪಶ್ಚಿಮ ಬಂಗಾಳದಲ್ಲಿ ಅದರಲ್ಲೂ ಗ್ರಾಮೀಣ ವಲಯಗಳಲ್ಲಿ ಮಹಿಳೆಯರ ಪ್ರಮಾಣ ಹೆಚ್ಚಿತು. ಎಡರಂಗ ಸರಕಾರದ ಮೊದಲ 5 ವರ್ಷಗಳ ಅವಧಿಯಲ್ಲಿ ಇದು 68.7% ರಿಂದ 84.6% ಕ್ಕೇರಿತು. 73ನೇ ಸಂವಿಧಾನ ತಿದ್ದುಪಡಿಯ ಮೂಲಕ ಪಂಚಾಯತು ಚುನಾವಣೆಗಳಲ್ಲಿ ಮಹಿಳೆಯರಿಗೆ 33.3% ಮೀಸಲಾತಿಯನ್ನು ಜಾರಿಗೆ ತಂದ ಮೊದಲ ರಾಜ್ಯ ಪಶ್ಚಿಮ ಬಂಗಾಳ ಎಂಬುದು ಈ ಹಿನ್ನೆಲೆಯಲ್ಲಿ ಸಹಜ ತಾನೆ?

ಕಾರ್ಮಿಕ ರಂಗದಲ್ಲಿ..........

ಕಾರ್ಮಿಕ ವರ್ಗದ ಅಗತ್ಯಗಳು ಹಾಗೂ ಆಕಾಂಕ್ಷೆಗಳಿಗೆ ಸ್ಪಂದಿಸುವ ಒಂದು ಆರೋಗ್ಯಕಾರಿ ಹಾಗೂ ಬಲಿಷ್ಠ ಕಾರ್ಮಿಕ ಆಂದೋಲನದ ಬೆಳವಣಿಗೆಗೆ ನೆರವಾಗುವುದು ಹಾಗೂ ಕಾರ್ಮಿಕರ ಅಗತ್ಯಗಳು ಮತ್ತು ಹಕ್ಕುಗಳಿಗೆ ಅನುಗುಣವಾಗಿ ಅವರ ಸಂಬಳ, ಆದಾಯಗಳನ್ನು ಹೆಚ್ಚಿಸುವುದು - ಇದು ಎಡರಂಗ ಸರಕಾರ ತನ್ನ ಮುಂದಿಟ್ಟುಕೊಂಡಿದ್ದ ಕಾರ್ಮಿಕ ನೀತಿ. ಕಳೆದ 22 ವರ್ಷಗಳಲ್ಲಿ ಇದನ್ನು ಸಾಧಿಸುವತ್ತ ಗಣನೀಯ ಹೆಜ್ಜೆ ಇಟ್ಟ ಸರಕಾರ ಇದು.

ಎಡರಂಗ ಸರಕಾರ ಅಧಿಕಾರಕ್ಕೆ ಬಂದದ್ದೇ ಕಾರ್ಮಿಕ

ಪುಟ 10 ನೋಡಿ



ಮಂಡೇಲಾ ಮತ್ತು ಜ್ಯೋತಿ

ಲಂಕೇಶರ ಟೀಕೆ ಟಿಪ್ಪಣಿಯ ಮೇಲೊಂದು ಟಿಪ್ಪಣಿ

"ನೆಲ್ಸನ್ ಮಂಡೇಲಾನಲ್ಲಿ ತಪ್ಪು ಕಂಡುಹಿಡಿಯುವುದು ಸಾಧ್ಯ. ಈತ ಬಿಳಿಯರು, ಕರಿಯರು ಮತ್ತು ಕಂದುಬಣ್ಣದವರನ್ನು ಒಟ್ಟುಗೂಡಿಸಿ ದಕ್ಷಿಣ ಆಫ್ರಿಕಾದಲ್ಲಿನ ವಿರುಪೇರುಗಳನ್ನು ಸರಿಪಡಿಸಲು ಆಗುತ್ತಿತ್ತು. ಅಲ್ಲಿಯ ಶ್ರೀಮಂತರು ಮತ್ತು ಬಡವರ ಮಧ್ಯೆ ಇರುವ ಆದಾಯದ ಕಂದರವನ್ನು ಇಲ್ಲವಾಗಿಸುವುದು ಸಾಧ್ಯವಿತ್ತು. ಇದನ್ನು ಅತ್ಯಂತ ಕಡಿಮೆ ವೇಳೆಯಲ್ಲಿ ಸಮರ್ಪಕವಾಗಿ ಮಾಡಲು ಬೇಕಾದ ಶಕ್ತಿ ಇದ್ದ ಮನುಷ್ಯ ಮಂಡೇಲಾ. ಈಗ ನಾವು ಎಷ್ಟೇ ಮರೆಯಲು ಯತ್ನಿಸಿದರೂ ದಕ್ಷಿಣ ಆಫ್ರಿಕಾ ಸಿಡಿಮದ್ದಿನಂತಿದೆ. ಇಲ್ಲಿಯ ಸಾಮಾಜಿಕ ಮತ್ತು ಮಾನಸಿಕ ಅಸಮಾನತೆ ವಿಷಮ ಅನ್ನಿಸಿಕೊಳ್ಳುವ ರೀತಿಯಲ್ಲಿದೆ. ಹೀಗೆಯೇ ಮಂಡೇಲಾ ತನ್ನ ಮಾನವೀಯತೆ ಮತ್ತು ನಿಷ್ಪುರತೆಯ ನೆರವಿನಿಂದ ಇಡೀ ಜಗತ್ತಿನ ಸಹಾಯ ಪಡೆದು ದಕ್ಷಿಣ ಆಫ್ರಿಕಾದ ಕೈಗಾರಿಕೆ, ಕೃಷಿ ಮತ್ತು ಒಟ್ಟಾರೆ ಸಂಪತ್ತನ್ನು ಬೆಳೆಸುವುದು ಸಾಧ್ಯವಿತ್ತು. ಅದನ್ನೆಲ್ಲಾ ಸಾಕಷ್ಟು ಮಾಡಲಿಲ್ಲ.

★★★

ಜ್ಯೋತಿ ಬಸು ಇವತ್ತು ಅಧಿಕಾರದಲ್ಲೂ ಹೊಣೆಯರಿತು ವರ್ತಿಸಲು ಯತ್ನಿಸುತ್ತಿರುವ ಮನುಷ್ಯ. ಈತ ಕಮ್ಯೂನಿಸ್ಟ್. ಆದರೆ ಕಮ್ಯೂನಿಸ್ಟರ ಬೌದ್ಧಿಕ ದುರಹಂಕಾರ, ಮಾರ್ಕ್ಸಿಸ್ಟ್ ಸೋಗಲಾಡಿತನ ಬಸುಗಿಲ್ಲ. ಹಾಗೆಯೇ ಈ ಜ್ಯೋತಿ ಬಸು ಕಳೆದ ಇಪ್ಪತ್ತು ವರ್ಷದಿಂದ ಒಂದು ರಾಜ್ಯಕ್ಕೆ ಕಾನೂನುಕಟ್ಟಳೆಯ ವ್ಯವಸ್ಥೆ ತರುವುದರಲ್ಲಿ, ಜನ ಆತಂಕದಿಂದ ಮುಕ್ತರಾಗಿರುವಂತೆ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಇದು ಹೇಗೆ ಸಾಧ್ಯವಾಯಿತು. ಬಾಂಗ್ಲಾ ದೇಶದ ಯುದ್ಧ, ಅಲ್ಲಿಂದ ಭಾರತಕ್ಕೆ ವಲಸೆ, ಪಶ್ಚಿಮ ಬಂಗಾಲದ ಸೋಮಾರಿತನ, ಕೊಳಕುತನ ಇವೆಲ್ಲವುಗಳನ್ನು ನಿಭಾಯಿಸಿ ಸ್ಥಿರತೆ ಮತ್ತು ನಿರಾತಂಕ ಬದುಕನ್ನು ಈತ ಕೊಟ್ಟದ್ದು ಹೇಗೆ? ಜ್ಯೋತಿಯ ವ್ಯಕ್ತಿತ್ವ ನೋಡಿದರೆ ಇದು ತಿಳಿಯುತ್ತದೆ. ಈತ ಎಂದೂ ಅಧಿಕಾರದ ಬಗ್ಗೆ ದುರಾಸೆ ಇಟ್ಟುಕೊಂಡಿಲ್ಲ. ಅಧಿಕಾರದಲ್ಲಿರುವುದು ಜನಕ್ಕೆ ನೆರವಾಗುವ ಒಂದು ಮಾರ್ಗ ಎಂದು ಮಾತ್ರ ತಿಳಿದಿದ್ದಾರೆ. ಕಮ್ಯೂನಿಸ್ಟ್ ಸಹೋದ್ಯೋಗಿಗಳ ಕ್ರಾಂತಿಕಾರಿ ಧೋರಣೆಗಳು, ವಿಚಿತ್ರ ಆತ್ಮಹತ್ಯಾತ್ಮಕ ನಿಲುವುಗಳು - ಇವೆಲ್ಲವನ್ನೂ ಬಲ್ಲ ಜ್ಯೋತಿ ಕೆಲವು ಸಣ್ಣ ಪುಟ್ಟ ಪಕ್ಷಗಳನ್ನು ಜೊತೆಗೆ ಇಟ್ಟುಕೊಂಡು ಎಂದೂ ಅಧಿಕಾರಕ್ಕೆ ಕಿತ್ತಾಡದೆ ಆಡಳಿತ ನಡೆಸಿದ್ದಾರೆ. ಆದರೆ ಜ್ಯೋತಿ ಇವತ್ತಿಗೂ ಜಾತೀಯತೆಯ ವಿರುದ್ಧ ಬಿಜೆಪಿಗಳ ಪ್ರಚ್ಛನ್ನ ನೀಚತನದ ವಿರುದ್ಧ ಕಠೋರವಾಗಿರುವ ಮನುಷ್ಯ. ಹಾಗೆಯೇ ಎಲ್ಲ ಬಡವರೊಂದಿಗೆ, ಬುದ್ಧಿಜೀವಿಗಳೊಂದಿಗೆ ಬೆರೆತು ಸಂವಾದಿಸಬಲ್ಲ ವ್ಯಕ್ತಿ. ಮದರ್ ಥೆರೆಸಾಳ ವ್ಯಕ್ತಿತ್ವಕ್ಕೆ ಗೌರವ ಸಲ್ಲಿಸಬಲ್ಲ ಕಮ್ಯೂನಿಸ್ಟ್, ಸಂಪ್ರಾದಾಯವಂತ ಸಜ್ಜನರನ್ನು ಅರ್ಥಮಾಡಿಕೊಳ್ಳಬಲ್ಲ ಜನತಂತ್ರವಾದಿ. ಇದು ಎಂಭತ್ತೇಳು ದಾಟುತ್ತಿರುವ ಜ್ಯೋತಿ ಬಸು ಯಾವುದೇ ಪ್ರಯತ್ನವಿಲ್ಲದೆ, ಬಲಾತ್ಕಾರವಿಲ್ಲದೆ, ಶ್ರಮವಿಲ್ಲದೆ ಗಳಿಸಿಕೊಂಡ ಗ್ರಹಿಕೆ.

ಜ್ಯೋತಿಯಂಥ ಮಾನವೀಯ ನಾಯಕರಲ್ಲಿ ಚಾರ್ವಾಕ ಮತ್ತು ಪುರಂದರ ಒಟ್ಟಿಗೇ ಇರಬಲ್ಲರು. ಬುದ್ಧಿಜೀವಿಗಳು ಮತ್ತು ದಡ್ಡರು ಇಬ್ಬರೂ ಈತನ ರಕ್ಷಣೆಯಲ್ಲಿ ಬದುಕಬಲ್ಲರು.

ನನಗೆ ಇವತ್ತು ಭಾರತದಲ್ಲಿ ಮಂಡೇಲಾನ ವ್ಯಕ್ತಿತ್ವಕ್ಕೆ ಹತ್ತಿರ ಬರಬಲ್ಲ ವ್ಯಕ್ತಿ ಜ್ಯೋತಿ ಬಸು ಅನ್ನಿಸುತ್ತದೆ. ಈ ಜ್ಯೋತಿ ಕೂಡ ಪಶ್ಚಿಮ ಬಂಗಾಲದ ಸಂಪತ್ತು ಬೆಳೆಸಲಿಲ್ಲ; ಕೈಗಾರಿಕೆ ರೂಪಿಸಲಿಲ್ಲ; ಜನಸಂಖ್ಯೆಯ ಸಮಸ್ಯೆ ಬಗೆಹರಿಸಲಿಲ್ಲ. ಆದರೆ ನಾವು ಮಂಡೇಲಾ ಬಗ್ಗೆ ಇಂಥದನ್ನೆಲ್ಲ ನಿರ್ಲಕ್ಷಿಸುವಂತೆಯೇ ಬಸು ಬಗ್ಗೆ ಕೂಡ ನಿರ್ಲಕ್ಷಿಸುತ್ತೇವೆ. ಅದು ಈತನ ಯಶಸ್ಸು ಎನ್ನುವುದು ನನ್ನ ಅಭಿಪ್ರಾಯ"

ಲಂಕೇಶ್ ಪತ್ರಿಕೆ,
ಜೂನ್ 30, 1999

ಲಂಕೇಶ್ ಪತ್ರಿಕೆ ಇತ್ತೀಚಿಗೆ ಸುದ್ದಿ ಮಾಡುತ್ತಿಲ್ಲ. ಲಂಕೇಶ್ ಅಂತೂ ಸುದ್ದಿಯಾಗುತ್ತಿಲ್ಲ. ಆದರೂ ಜೂನ್ 30 ರ 'ಲಂಕೇಶ್ ಪತ್ರಿಕೆ'ಯಲ್ಲಿ 'ಟೀಕೆ - ಟಿಪ್ಪಣಿ' ಯಲ್ಲಿ ಲಂಕೇಶ್ ಇದ್ದಕ್ಕಿದ್ದಂತೆ ಸುದ್ದಿ ಮಾಡಿದ್ದಾರೆ. ಕಮ್ಯುನಿಸ್ಟರನ್ನು ಹೊಗಳಿದ್ದಾರೆ! ಅದೂ ವಾಚಮಗೋಚರವಾಗಿ! ಇದು ಒಳ್ಳೆಯ ಸುದ್ದಿ ಎಂದಿಟ್ಟುಕೊಳ್ಳೋಣ ಸದ್ಯಕ್ಕೆ - 'ಕಮ್ಯುನಿಸ್ಟ್ ಸಹಜವಾದ ಸೈದ್ಧಾಂತಿಕ ವಿಶ್ಲೇಷಣೆಯನ್ನು ಒತ್ತಟ್ಟಿಗಿಟ್ಟು - ಆದರೆ ಕೆಟ್ಟ ಸುದ್ದಿ ಎಂದರೆ ಅವರು ಜ್ಯೋತಿಬಸುರವರನ್ನು ಹೊಗಳಿರುವುದು ತಪ್ಪು ಕಾರಣಗಳಿಗಾಗಿ.

ಆದರೂ 'ಮಂಡೇಲಾ ಮತ್ತು ಜ್ಯೋತಿ' ಯ ಮೇಲೊಂದು ಟಿಪ್ಪಣಿ ಮಾಡದೆ ಸುಮ್ಮನಿರಬಹುದಿತ್ತು. 'ಕಮ್ಯುನಿಸ್ಟರ ಬೌದ್ಧಿಕ ದುರಹಂಕಾರ' ಮಾರ್ಕ್ಸಿಸ್ಟ್ ಸೋಗಲಾಡಿತನ ಬಸುಗಿಲ್ಲ', 'ಪಶ್ಚಿಮ ಬಂಗಾಳದ ಸೋಮಾರಿತ, ಕೊಳಕುತನ, ಇವೆಲ್ಲವುಗಳನ್ನು ನಿಭಾಯಿಸಿ....' ಕಮ್ಯುನಿಸ್ಟ್ ಸಹೋದ್ಯೋಗಿಗಳ ಕ್ರಾಂತಿಕಾರಿ ಧೋರಣೆಗಳು, ವಿಚಿತ್ರ ಆತ್ಮಹತ್ಯಾತ್ಮಕ ನಿಲುವುಗಳು ಬುದ್ಧಿ ಜೀವಿಗಳು ಮತ್ತು ದಡ್ಡರು ಇಬ್ಬರೂ ಈತನ ರಕ್ಷಣೆಯಲ್ಲಿ ಬದುಕ ಬಲ್ಲರು' ಇಂಥ ನುಡಿಮುತ್ತುಗಳನ್ನು ಎಂದಿನಂತೆ ಸಹಿಸಬಹುದಿತ್ತು. ಇವು ಬೂರ್ಜ್ವಾ ಉದಾರವಾದಿಗಳಿಗೆ ಸಹಜವಾದ ಕುರುಡು ಕಮ್ಯೂನಿಸ್ಟ್ -ವಿರೋಧ ಪೂರ್ವಗ್ರಹ, ಅಸಹನೆ, ತಿಕ್ಕಲುತನ ಎಂದು ನುಂಗಿ ನೀರು ಕುಡಿಯಬಹುದಿತ್ತು. ಲಂಕೇಶರ 'ಕೇಸ್' ನಲ್ಲಂತೂ 'ಹುಟ್ಟು ಗುಣ ಚಟ್ಟ ಹತ್ತಿರವಾದರೂ ಬಿಡದು' ಎಂದು ಗಾದೆ ಬದಲಾಯಿಸಿ ನಕ್ಕು ಮರೆತುಬಿಡಬಹುದಿತ್ತು. ಆದರೆ ಈ 'ಟಿಪ್ಪಣಿ'ಯ ಹಿಂದಿರುವ ನೋಟ ಬರಿಯ ಲಂಕೇಶರದ್ದು ಮಾತ್ರವಲ್ಲ. ಹಲವಾರು ಪತ್ರಕರ್ತರದ್ದು, ಸಂಪಾದಕರದ್ದು. ಲಂಕೇಶರ 'ಟಿಪ್ಪಣಿ'ಗಳು ಈ ನೋಟದ ಅತ್ಯಂತ ಕೆಟ್ಟ ಉದಾಹರಣೆ ಎಂದು ಅವರ ಮೇಲೆ ರೇಗಾಡಬಹುದು - ಅಷ್ಟೇ. ಅಲ್ಲದೆ ಹಲವು ಪತ್ರಿಕೆಗಳ ಮೂಲಕ ಈ ಧೋರಣೆ ಜನಜನಿತವಾಗುತ್ತಿದೆ. ಆದ್ದರಿಂದ ಈ 'ಟಿಪ್ಪಣಿ'ಯ ಹಿಂದಿರುವ ತಪ್ಪು ಧೋರಣೆಯ ಮೇಲೊಂದು ಟಿಪ್ಪಣಿ ಅಗತ್ಯವಾಗಿದೆ. ಅನಿವಾರ್ಯವಾಗಿದೆ. ಮುಂಬರುವ ಚುನಾವಣೆಗಳ ಹಿನ್ನಲೆಯಲ್ಲಿ ತುರ್ತಿನದ್ದಾಗಿದೆ.

'ಮಂಡೇಲಾ ಮತ್ತು ಜ್ಯೋತಿ' ಟಿಪ್ಪಣಿಯ ಮತ್ತು ಇನ್ನೂ ಇಂತಹ ಹಲವಾರು ಬರಹಗಳ ಹಿಂದಿರುವ ತಪ್ಪು ಧೋರಣೆ - ಸಾಮಾಜಿಕ ಚಳುವಳಿಗಳಲ್ಲಿ, ರಾಜಕೀಯ ಜೀವನದಲ್ಲಿ ವ್ಯಕ್ತಿಗಳ ಪಾತ್ರದ ಬಗ್ಗೆ, ಅದನ್ನು ಹೇಗೆ ನೋಡಬೇಕು? ಹೇಗೆ ಮೌಲ್ಯಮಾಪನ ಮಾಡಬೇಕು? ಎಂಬುದರ ಬಗ್ಗೆ, ಸಾಮಾಜಿಕ, ರಾಜಕೀಯ ಬೆಳವಣಿಗೆಗಳನ್ನು ವಸ್ತುನಿಷ್ಟವಾಗಿ ನೋಡದೆ, ವ್ಯಕ್ತಿನಿಷ್ಟವಾಗಿ ನೋಡುವ ಧೋರಣೆ.

ದಕ್ಷಿಣ ಆಫ್ರಿಕಾದಲ್ಲಿ ವರ್ಣಬೇಧದ ವಿರುದ್ಧ ಕರಿಯರ ಚಾರಿತ್ರಿಕ ಹೋರಾಟ, ಪಶ್ಚಿಮ ಬಂಗಾಳದ ದುಡಿಯುವ ಜನರ ಉತ್ತಮ ಬದುಕಿಗಾಗಿ, ಸದ್ಯದ ಅಗಾಧ ಸಾಧನೆಗಳು, ಮುಂದಿರುವ ಸಂಕೀರ್ಣ ಸಮಸ್ಯೆಗಳು - ಇವೆಲ್ಲವುಗಳನ್ನು ಗಣನೆಗೆ ತೆಗೆದುಕೊಳ್ಳದೆ (ಅದರ ಬಗ್ಗೆ ಅಜ್ಞಾನದಿಂದಾಗಿಯೇ ಇರಬಹುದು. ಆದರೆ ಇಂತಹ ಅಜ್ಞಾನ ಒಂದು ಸಾಂಕ್ರಮಿಕ ರೋಗ ಅಂಕಣಕಾರರಲ್ಲಿ, ಸಂಪಾದಕ ಮಹಾಶಯರುಗಳಲ್ಲಿ) ಅದನ್ನು ಅತ್ಯಂತ ಕೆಟ್ಟದಾಗಿ ಸರಳೀಕರಿಸಿ ಅದರ ಇಬ್ಬರ ನಾಯಕರ ಮೌಲ್ಯಮಾಪನ ಮಾಡುವ ರೀತಿ - ಈ ಎರಡು ಮಹಾನ್ ಅಕ್ಷಮ್ಯ ಅಪಚಾರ ಮಾಡುವಂತದ್ದು. ಈ ಇಬ್ಬರು ಮಹಾನ್ ನಾಯಕರಿಗೂ ಹೋರಾಟಗಳಿಗೆ ಅದು ಅಪಚಾರವೇ. ಇಂತಹ ಹುಂಬ ಧೋರಣೆಯಿದ್ದಾಗ ಮಾತ್ರ ಈ ಎರಡು ಮಹಾನ್ ನಾಯಕರು 'ಅದು ಮಾಡಬಹುದಿತ್ತು' - 'ಇದು ಮಾಡಬಹುದಿತ್ತು' 'ಅವರು ಮಾಡಲಿಲ್ಲ' - 'ಆದರೂ ಇವರು ಮಹಾನ್ ನಾಯಕರು' ಎಂಬ ಪೆದ್ದು ತೀರ್ಮಾನಗಳಿಗೆ ಬರಲು ಸಾಧ್ಯ. ಶಬ್ದಗಳ ಜಾಲ ಒತ್ತಟ್ಟಿಗಿರಲಿ 'ಟಿಪ್ಪಣಿ' ಇವರಿಬ್ಬರು ಮಹಾನ್ ನಾಯಕರಲ್ಲಿ ಕಾಣುವುದು ಅಧಿಕಾರಕ್ಕೆ ಆಸೆ ಪಡದೆ, ಮಾನವೀಯ ಗುಣಗಳು ಮಾತ್ರ. ಇಷ್ಟೇನಾ ಅನಿಸಿಬಿಡುತ್ತದೆ.

ಚರಿತ್ರೆಗಳನ್ನು ನಿರ್ಮಿಸುವವರು, ಬದಲಾಯಿಸುವವರು ಜನ. ಕೆಲವು ವ್ಯಕ್ತಿಗಳಲ್ಲ ಎಂಬುದು ಕಮ್ಯುನಿಸ್ಟರು, ಸೋಶಲಿಸ್ಟರು ಒಪ್ಪುವ ಸಾಮಾನ್ಯ ಧೋರಣೆ. ಸಮಾಜವಾದಿ, ಲೋಹಿಯಾವಾದಿ ಎಂದು ಹೇಳಿಕೊಳ್ಳುವ ಲಂಕೇಶರಿಗೆ ಕನಿಷ್ಟ ಇದು ಗೊತ್ತಿದೆ ಎಂದು ಬಯಸುವುದನ್ನು. 'ಕಮ್ಯುನಿಸ್ಟರ ದುರಹಂಕಾರ' ಎಂದು ಲೇಬಲ್ ಮಾಡಲಿಕ್ಕಿಲ್ಲ ತಾನೆ? ಸಾಮಾಜಿಕ, ರಾಜಕೀಯ ಚಳುವಳಿಗಳನ್ನು ಬೆಳೆಸುವಲ್ಲಿ ಕೆಲವು ನಾಯಕರು ವಿಶಿಷ್ಟ ಪಾತ್ರ ವಹಿಸುತ್ತಾರೆ. ಆ ಚಳುವಳಿಗಳು, ಆ ಮಹಾನ್ ನಾಯಕರು ಬೇರ್ಪಡಿಸಲಾಗದಷ್ಟು ಬೆರೆತುಹೋಗುತ್ತಾರೆ. ಮಹಾನ್ ಚಳುವಳಿಯಲ್ಲಿ ತೊಡಗಿರುವ ಜನ ಇಂತಹ ಮಹಾನ್ ನಾಯಕರನ್ನು ಸೃಷ್ಟಿಸುತ್ತಾರೆ. ಮಹಾನ್ ಚಳುವಳಿಗಳು ಸೃಷ್ಟಿಸಿದ ಇಂತಹ ಮಹಾನ್ ನಾಯಕರು ಚಳುವಳಿಯ ಚುಕ್ಕಾಣಿ ಹಿಡಿದು ಚಾರಿತ್ರಿಕ ವಿಜಯ ಸಾಧಿಸುತ್ತಾರೆ. ಈ ಮಹಾನ್ ನಾಯಕರ ವೈಯಕ್ತಿಕ ಗುಣಗಳು, ಮಹಾನತೆಗಳು ಅವರ ಸ್ವಂತದ್ದು ಎನ್ನುವುದಕ್ಕಿಂತ ಈ ಚಳುವಳಿಯ ಮೂಸೆಯಲ್ಲಿ ರೂಪುಗೊಂಡದ್ದು.

ಮೌಲ್ಯಮಾಪನಕ್ಕೆ ಆರಿಸಿಕೊಂಡ ಇನ್ನೊಬ್ಬ ನಾಯಕ ವಿ.ಪಿ.ಸಿಂಗರನ್ನೇ ತೆಗೆದುಕೊಳ್ಳಿ. ಅವರ ಮಿತಿಯಿರುವುದು ಅವರ ಕೆಲವು ನಿರ್ಧಾರಗಳಲ್ಲಿ, ಕೆಲಸಗಳಲ್ಲಿ ಮಾತ್ರವಲ್ಲ. ಅವರ ಜತೆಗೆ ಒಂದು ದೊಡ್ಡ ಚಳುವಳಿ ಇಲ್ಲ. ಆತ ಒಂದು ವಿಶಿಷ್ಟ ಸಂದರ್ಭದಲ್ಲಿ ಒಂದು ವಿಶಿಷ್ಟ ಪಾತ್ರವಹಿಸಿದ ವ್ಯಕ್ತಿ. ಕೆಲವು ವೈಯಕ್ತಿಕ ವಿಶಿಷ್ಟತೆ ಇದ್ದಾಗ್ಯೂ ಕಾಂಗ್ರೆಸ್/ ಜನತಾದಳದ ಜನ ಬೆಂಬಲದಿಂದ, ಅರಮನೆ ರಾಜಕೀಯಗಳ ಮಿತಿಯೊಳಗೆ ಅವರು ನಲುಗುತ್ತಾರೆ. ಆದ್ದರಿಂದ ಅವರು ಮಹಾನ್ ನಾಯಕರಾಗುವುದಿಲ್ಲ.

'ನಾನು ಈ ಗುಂಪು ಕಾರ್ಯಕ್ರಮಗಳನ್ನು ಇಷ್ಟಪಡುವುದಿಲ್ಲ. ಮನುಷ್ಯ ತುಂಬಾ ಕೆಟ್ಟವನು, ಆತ ಇತರರ ಜತೆ ಗುಂಪು ಮಾಡಿಕೊಂಡಾಗ ಇನ್ನೂ ದುಷ್ಟನಾಗುತ್ತಾನೆ... ಆದ್ದರಿಂದ ಎಲ್ಲಾ ಉತ್ಸಾಹಗಳನ್ನು, ಗುಂಪುಗಳನ್ನು ಪಕ್ಷಗಳನ್ನು ಅನುಮಾನದಿಂದ ನೋಡಬೇಕಾದ್ದು ನಮ್ಮ ಕರ್ತವ್ಯ' ಎಂಬ ಪೆದ್ದು ಮಾತುಗಳನ್ನು ಹೇಳುವ ಲಂಕೇಶರಿಂದ (ಏಕಾಂಗಿಯ ಸುಖ, ಸಂಘದ ವಂಚನೆ.... ಈ ಸಂಚಿಕೆ ಮೇ 5 ರ ಲಂಕೇಶ್ ಪತ್ರಿಕೆ) ಇವನ್ನೆಲ್ಲಾ ನಿರೀಕ್ಷಿಸುವುದು ಮೂರ್ಖತನ. ಯಾವುದೋ ಓಬಿರಾಯನ ಕಾಲದಲ್ಲಿ ಲೋಹಿಯಾನಿಂದ ಪ್ರಭಾವಿತರಾದವರು ಎಂದ ಮಾತ್ರಕ್ಕೆ ಅವರಿಂದ ಇದೆಲ್ಲಾ ನಿರೀಕ್ಷಿಸುವುದು ನಮ್ಮ ಪೆದ್ದುತನವೋ ಏನೋ?

ಜನರ ಪಾತ್ರ, ಅವರ ಚಳುವಳಿಯ ಹಿನ್ನೆಲೆಯ ಅಜ್ಞಾನದಿಂದ ಮತ್ತು ಅದನ್ನು ಕಡೆಗಣಿಸಿ, ನಾಯಕರನ್ನು ಅದರಿಂದ ಪ್ರತ್ಯೇಕಿಸಿ ನೋಡಿದಾಗ ಮಾತ್ರ ಒಂದೇ ಚಳುವಳಿಯ ಇಬ್ಬರು ಮಹಾನ್ ನಾಯಕರಲ್ಲಿ ಒಬ್ಬರು ('ಸುರ್ಜಿತ್') 'ಚಿಲ್ಲರೆ ರಾಜಕರಣಿ'ಯಂತೆ ಕಾಣುತ್ತಾರೆ. ಇನ್ನೊಬ್ಬರು (ಜ್ಯೋತಿಬಸು) ಮಹಾನ್ ನಾಯಕರಂತೆ ಕಾಣುತ್ತಾರೆ. ಹಾಗೆ ನೋಡಿದರೆ ಜ್ಯೋತಿಬಸುವನ್ನು ಒಂದು ಪಶ್ಚಿಮ ಬಂಗಾಳದ ನಾಯಕನಾಗಿ ನೋಡುವುದೇ ಅವರ ಬಗೆಗಿನ ಅಜ್ಞಾನದ ಪರಮಾವಧಿ ಎನ್ನಬೇಕು. ಅವರು ಬೆಳೆಸಿ ಪ್ರತಿನಿಧಿಸಿದ ಸಿಪಿಐ(ಎಂ) ಒಂದು ಬಾರಿಯೂ ಪ್ರಸ್ತುತವಾಗದ್ದು ಆಕಸ್ಮಿಕವೇನಲ್ಲ. ಜ್ಯೋತಿಬಸು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ, ಪ್ರಧಾನ ಮಂತ್ರಿಯಾಗಬಹುದಾಗಿದ್ದವರು ಮಾತ್ರವಲ್ಲ, ಅವರು ಸಿಪಿಐ(ಎಂ) ಅಖಿಲ ಭಾರತ ನಾಯಕರು. ಇಡೀ ದೇಶದ ದುಡಿಯುವ ಜನರ ಚಳುವಳಿಯ ನೇತಾರ. ಅವರು ಮುಖ್ಯಮಂತ್ರಿಯಾದದ್ದು, ಪ್ರಧಾಮಂತ್ರಿ ಪದವನ್ನು ತಿರಸ್ಕರಿಸಿದ್ದು ದುಡಿಯುವ ಜನರ ಚಳುವಳಿ ಮುಂದಕ್ಕೊಯ್ಯುವ ಪ್ರಯತ್ನದ ಭಾಗವಾಗಿ.

ಈ ತಪ್ಪು ಧೋರಣೆ ಈ 'ಟಿಪ್ಪಣಿ'ಗೆ ಸೀಮಿತವಾಗಿಲ್ಲ. ಲಂಕೇಶ್ ಪತ್ರಿಕೆಯ 'ರಾಜಕೀಯ ವಿಶ್ಲೇಷಣೆ' ಎಂದು ಕರೆದುಕೊಳ್ಳುವ ಲೇಖನಗಳಲ್ಲಿ ಈಗಿನ ಎಲ್ಲಾ ಪತ್ರಿಕೆಗಳ ವರದಿಗಳಲ್ಲಿ ತಲೆಹಾಕುವಂತದ್ದು. ಹೆಗಡೆ, ಪಟೇಲ್, ದೇವೇಗೌಡರ ವೈಯಕ್ತಿಕ ಗುಣಗಳ ಬಗ್ಗೆ ಚರ್ಚಿಸಿ, ಅವರು ಪ್ರತಿನಿಧಿಸುವ 'ರಾಜಕೀಯ'ದ ಹಿಂದಿರುವ ಸಾಮಾಜಿಕ-ಆರ್ಥಿಕ ಹಿತಾಸಕ್ತಿಗಳ ವಿಶ್ಲೇಷಣೆ ನಡೆಸದೆ ಇರುವುದು ಇದೇ ಕಾರಣದಿಂದ. ಆದ್ದರಿಂದಲೇ 'ಹೆಗಡೆಯ 'ಗುಳ್ಳೇನರಿತನ', ಪಟೇಲರ 'ಕುಡುಕತನ', ದೇವೇಗೌಡರ 'ತೋಳಬುದ್ಧಿ' ಪ್ರಮುಖವಾಗಿ ಕಾಣುತ್ತದೆ. ಅವರು ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ ನಾಯಕರಾಗಿ ಮಾತ್ರ ಉಳಿದು ಬಿಡುತ್ತಾರೆ. ಸ್ತರಗಳ ಹಿತಾಸಕ್ತಿಗಳ ಕಿತ್ತಾಟ ಕಾಣುವುದೇ ಇಲ್ಲ. ಎಲ್ಲಾ ಆಳುವ ವರ್ಗಗಳ ರಾಜಕೀಯ ಪಕ್ಷಗಳ ಬಿಕ್ಕಟ್ಟನ್ನು ಕಾಣುವುದಂತೂ ದೂರ ಉಳಿಯಿತು. ಯಾವ ಒಬ್ಬ ನಾಯಕರು ಕಣ್ಣಿಗೆ ಹೊಡೆಯುವಂತೆ ಕಾಣದಿರುವುದರಿಂದ ಇವರೆಲ್ಲರಿಗೂ ಬದಲಿಯಾಗಬಲ್ಲ ಕಮ್ಯುನಿಸ್ಟ್ ಚಳುವಳಿ, ಪಕ್ಷ ಇಂತಹವರಿಗೆ ಕಾಣುವುದಿಲ್ಲ. ರಾಜಕೀಯವೆಲ್ಲ ಕೆಲವು ನಾಯಕರುಗಳ ತಿಕ್ಕಲುತನ, ಸ್ವಾರ್ಥ ಪೂರ್ವತನದ ಆಟಗಳಂತೆ ಕಾಣುತ್ತದೆ. ಇವೆಲ್ಲದಕ್ಕೂ 'ಪರಿಹಾರ' ವೆಂದರೆ ಒಬ್ಬ ಅಥವಾ ಕೆಲವು ಮಹಾನ್ ನಾಯಕರಿಗಾಗಿ 'ಕಾಯುವುದು' ಅಥವಾ 'ಹುಡುಕುವುದು' ಆಗಿಬಿಡುತ್ತದೆ.

○



ಭೂಮಿ ಕಬಳಿಸುವ ಸ್ವಾಮಿಯ ವಿರುದ್ಧ ರೊಚ್ಚಿಗೆದ್ದ ಮಹಿಳೆಯರು





ಜೂನ್ 27 ರಂದು ಬೆಂಗಳೂರು ನಗರದ ಹೊರವಲಯದಲ್ಲಿರುವ ಶ್ರೀನಿವಾಸಪುರದಲ್ಲಿ ಮಚ್ಚು ಚಾಕು ಗಳೊಂದಿಗೆ ಬಂದಿದ್ದ ಭೂಕಬಳಿಸುವ ಸ್ವಾಮಿಯೊಬ್ಬರ ರೌಡಿ ಗಳನ್ನು ಮಹಿಳೆಯರು ಅಟ್ಟಾಡಿಸಿದರು. ಸಂಘಟನೆ ತುಂಬಿದ ಆತ್ಮವಿಶ್ವಾಸ ಅವರ ಕಣ್ಣುಗಳಲ್ಲಿ ಮಿಂಚುತ್ತಿತ್ತು

ಎನ್.ಪ್ರಭಾ

ಬೆಂಗಳೂರಿನ ಪಟ್ಟಣಗೆರೆ ನಗರಸಭಾ ವ್ಯಾಪ್ತಿಯಲ್ಲಿ ಶ್ರೀನಿವಾಸಪುರವೆಂಬ ಕಾಲೋನಿಯೊಂದಿದೆ. ಸಂಪೂರ್ಣ ಹಳ್ಳ ದಿಣ್ಣೆಗಳಿಂದ ಗಿಡ-ಗಂಟೆಗಳಿಂದ ಕೂಡಿರುವ ಈ ಬೆಟ್ಟದಂತಹ ಪ್ರದೇಶದಲ್ಲಿ ನೂರಾರು ಗುಡಿಸಲು ನಿವಾಸಿಗಳು ವಾಸಮಾಡುತ್ತಿದ್ದಾರೆ. ಸುಮಾರು 20 ವರ್ಷಗಳಿಂದಲೂ ಇಲ್ಲಿ ನೆಲೆಯೂರಿರುವ ಕುಟುಂಬಗಳಿಗೆ ನೆಮ್ಮದಿಯ ನೆಲೆಯೆಂಬುದಿಲ್ಲ.

ಕೆಟ್ಟು ಪಟ್ಟಣ ಸೇರು ಎನ್ನುವ ಗಾದೆಯಂತೆ ದೂರ ದೂರದ ಹಳ್ಳಿಗಳಿಂದ ವಲಸೆ ಬಂದಿರುವ ಜನ ಇಲ್ಲಿನ ನಿವಾಸಿಗರು. ಹಳ್ಳಿಗಳಲ್ಲಿ ಉಳುಮೆಮಾಡಲು ಭೂಮಿಯಿಲ್ಲದೆ ವಾಸಕ್ಕೆ ಮನೆ, ಮಠವಿಲ್ಲದೆ, ಕೂಲಿಗೆ ಕೆಲಸವೂ ಇಲ್ಲದೆ ಉದರ ನಿಮಿತ್ತ ಪಟ್ಟಣದ ಕಡೆ ಆಕರ್ಷಿತರಾದವರು. ದೂರದ ಊರುಗಳಿಂದ ಉದ್ಯೋಗ ಅರಸುತ್ತಾ ಬಂದು ಈ ಜನ ತಾವು ಪಟ್ಟಣ ಸೇರಿದ ರಸ್ತೆಯ ಅಕ್ಕ ಪಕ್ಕದ ಪ್ರದೇಶಗಳಲ್ಲಿ ಕೆಲಸಗಳನ್ನು ಹುಡುಕಿಕೊಂಡು ಮೈಸೂರು ರಸ್ತೆಯ ಸಮೀಪವಿರುವ ಶ್ರೀನಿವಾಸಪುರ ಗುಡ್ಡೆಯ ಮೇಲೆ ಗುಡಿಸಲುಗಳನ್ನು ಹಾಕಿಕೊಂಡು ಅಕ್ಕ- ಪಕ್ಕದ ತೋಟ-ಗದ್ದೆಗಳಲ್ಲಿ ಕೂಲಿ ನಾಲಿ ಮಾಡುತ್ತಾ ಗಾರೆಕೆಲಸ, ಮನೆಕೆಲಸ, ನೇಯ್ಗೆ, ಗಾರ್ಮೆಂಟ್ಸ್ ಇತ್ಯಾದಿಗಳಲ್ಲಿ ಸಿಕ್ಕಷ್ಟೇ ಕೂಲಿಯಲ್ಲಿ ಜೀವನ ದೂಡುತ್ತಿದ್ದಾರೆ.

ಬಡತನ ರೇಖೆಗಿಂತ ಕೆಳಸ್ತರದಲ್ಲಿ ಜೀವನ ಸಾಗಿಸುತ್ತಿರುವ ಅಂಗೈಯಗಲ ಭೂಮಿ ಇಲ್ಲದ ಇವರಿಗೆ ಸರ್ಕಾರ ಇವರ ಮನವಿಯನ್ನಾಲಿಸಿ 1981 ರಲ್ಲಿ ಹಕ್ಕು ಪತ್ರನೀಡಿ ಅಲ್ಲಿ ವಾಸ ಮಾಡುವ ಗುಡಿಸಲು ವಾಸಿಗಳೆಲ್ಲರೂ 3 ವರ್ಷಗಳ ಒಳಗಾಗಿ ಮನೆಕಟ್ಟುವಂತೆ ನಿರ್ದೇಶನ ನೀಡಿತ್ತು.

1992 ರಲ್ಲಿ ಎರಡನೇ ಬಾರಿ ಕೆಲವು ಕುಟುಂಬಗಳಿಗೆ ಹಕ್ಕು ಪತ್ರ ನೀಡಲಾಗಿದೆ. ಹಕ್ಕು ಪತ್ರಗಳನ್ನು ನೀಡಿ ನಿಭಂಧನೆಗಳನ್ನು ಹಾಕಿದ್ದ ಸರ್ಕಾರದ ಆದೇಶದಂತೆಯೆ ಈ ವರೆಗೂ ಇಲ್ಲಿನ ಕುಟುಂಬಗಳು ವಾಸ ಮಾಡುತ್ತಾ ಬಂದಿವೆ.

ಯಮಧೂತನಂತೆ ವಕ್ಕರಿಸಿದ ಸ್ವಾಮಿ


1992 ರಲ್ಲಿ ಹಕ್ಕು ಪತ್ರ ಪಡೆದು ನಿಟ್ಟುಸಿರು ಬಿಡುತ್ತಿದ್ದಂತೆಯೆ ಒಂದೇ ವರ್ಷದಲ್ಲಿ ಶಿವಪುರಿಯೆಂಬ ಸ್ವಾಮಿ(ಉರುಫ್ ನಾಗರಾಜ್) ಖಾವಿಬಟ್ಟೆ ರುದ್ರಾಕ್ಷಿ ಮಾಲೆಯೊಂದಿಗೆ ಶ್ರೀನಿವಾಸಪುರದ ಗುಡ್ಡೆಯ ಮೇಲೆ ಸರ್ವೇ ಜನೋ ಸುಖಿನೋ ಭವಂತು ಎಂದು ಭಜನೆ ಮಾಡುತ್ತಾ ತಳವೂರಿದ.

ಪ್ರಾರಂಭಕ್ಕೆ ಗಾಣಕಲ್ಲು ಗ್ರಾಮದ ಸರ್ವೆ ನಂ 14 ರಲ್ಲಿ ಎರಡೂವರೆ ಎಕರೆ ಜಮೀನಿನಲ್ಲಿ ಶೆಡ್ ಹಾಕಿ ಠಿಕಾಣಿ ಹೂಡಿದ ಸ್ವಾಮಿ ಸುತ್ತ-ಮುತ್ತ 45 ಎಕರೆ 30 ಗುಂಟೆ ಜಮೀನನ್ನು ಕಬಳಿಸುವ ಸಂಚು ಹಾಕುತ್ತಾ ಬಂದ. 93 ರಲ್ಲಿ ಪ್ರಾರಂಭಗೊಂಡ ಈತನ ಉಪಟಳ ದಿನದಿಂದ ದಿನಕ್ಕೆ ಮಿತಿಮೀರುತ್ತಿದೆ. ಈಗ ಈ ಸ್ವಾಮಿ ಎಷ್ಟರ ಮಟ್ಟಿಗೆ ಪ್ರಭಾವವನ್ನು ವಿಸ್ತರಿಸಿಕೊಂಡಿದ್ದಾನೆಂದರೆ, ಸ್ಥಳೀಯ ಬಿಜೆಪಿ ಕಾರ್ಪೋರೇಟರ್‌ಗಳು, ಶಾಸಕ, ಲೋಕಸಭಾ ಸದಸ್ಯ, ಪುರಸಭೆಯ ಮಾಜಿ ಅಧ್ಯಕ್ಷರು, ಸ್ಥಳೀಯ ಅಧಿಕಾರಿಗಳು ಮುಂತಾದವರೆಲ್ಲಾ ಈತನ ಕುಕೃತ್ಯಗಳಿಗೆ ಬೆಂಗಾವಲಾಗಿ ನಿಂತು ಈತನನ್ನು ಪ್ರೋತ್ಸಾಹಿಸುತ್ತಿದ್ದಾರೆ. ಹಕ್ಕು ಪತ್ರ ನೀಡಿ ಮಾನ್ಯ ಮಾಡಿರುವ ಗುಡಿಸಲುವಾಸಿಗಳನ್ನೆಲ್ಲಾ ಎತ್ತಂಗಡಿ ಮಾಡಿಸಿ ಆ ಭೂಮಿಯನ್ನೆಲ್ಲಾ ಸಾರಸಗಟಾಗಿ ಗುಳುಂ ಮಾಡಲು ಸ್ವಾಮಿಗೆ ಸಹಾಯಹಸ್ತ ಚಾಚಿದ್ದಾರೆ.


ವೈ. ನಾಗರಾಜ್ ಅಲಿಯಾಸ್ ಶಿವಪುರಿ ಸ್ವಾಮಿಯ ಕುಖ್ಯಾತಿ

ಹತ್ತಾರು ವರ್ಷಗಳ ಹಿಂದೆ ಬೆಂಗಳೂರಿನ ರಾಜರಾಜೇಶ್ವರಿ ಸಂಸ್ಥಾನದಲ್ಲಿ ಅಡುಗೆ ಭಟ್ಟನಾಗಿದ್ದುಕೊಂಡು ಜೊತೆಗೆ ದೇವಸ್ಥಾನದ ವ್ಯವಹಾರಗಳನ್ನು ವಹಿಸಿಕೊಂಡಿದ್ದನೆಂದೂ ದೇವಸ್ಥಾನದ ವ್ಯವಹಾರಿಕ ದಳ್ಳಾಳಿಯಾಗಿ ಸಂಸ್ಥಾನಕ್ಕೆ ಲಕ್ಷಾಂತರ ರೂಪಾಯಿಗಳನ್ನು ವಂಚಿಸಿ ಕುಖ್ಯಾತಿ ಪಡೆದ ಈತ ಒಮ್ಮೆ ಸಿಕ್ಕಿಬಿದ್ದು ರಾತ್ರೋ ರಾತ್ರಿ ಅಲ್ಲಿಂದ ಒದ್ದೋಡಿಸಿಕೊಂಡು ಬೆಳಗಾಗುವುದರೊಂದಿಗೆ ಸ್ವಾಮಿಯಾದದ್ದೂ ಹಲವಾರು ಕಥೆಗಳು ಹರಡಿವೆ. ತಿರುಚ್ಚಿಯ ಸ್ವಾಮಿಯ ಆಶ್ರಯದಲ್ಲಿರುವಾಗಲೇ ಎಸ್ಟೇಟ್ ಏಜೆನ್ಸಿಯ ದಂಧೆಗಳಿದಿದ್ದ ಶಿವಪುರಿ ಅಲ್ಲಿಂದ ಹೊರಬಿದ್ದ ನಂತರ ಖಾವಿತೊಟ್ಟು ತನ್ನ ವ್ಯವಹಾರವನ್ನು ಸುರಕ್ಷಿತವಾಗಿ ಹಾಗೂ ಸುಲಲಿತವಾಗಿ ನಡೆಸಲು, ಸರ್ಕಾರ ಆಶ್ರಯ ಯೋಜನೆಯಡಿಯಲ್ಲಿ ಕೂಲಿ ಮಾಡುವ ಬಡಜನರಿಗೆ ಹಂಚಿದ್ದ ಗಾಣಕಲ್ಲು ಗ್ರಾಮದ ಸರ್ವೆ ನಂ 14 ರ ವಿಶಾಲವಾದ ಜಾಗವನ್ನು ಆರಿಸಿಕೊಂಡ.

'ಓಂಕಾಲ್‌ಹಿಲ್ಸ್'ನ 'ಆಧ್ಯಾತ್ಮಿಕ ತಾಣ'ದಿಂದ ಸ್ವಾಮಿಯ ಭೌತಿಕ ಕಣ್ಣುಕುಕ್ಕುತ್ತಿರುವ ಬಡಜನರ 'ಆಶ್ರಯ' ತಾಣಗಳು



ಶ್ರೀನಿವಾಸಪುರದ ಗುಟ್ಟೆಯ ಮೇಲೆ ವಿಶಾಲವಾಗಿ ಬೆಳೆದು ನಿಂತು ಸುಂದರವಾಗಿ ಕಾಣುತ್ತಿರುವ ಆಲದ ಮರದ ಸುತ್ತಲಿನ ಸುಮಾರು 5 ಎಕರೆ ಜಮೀನನ್ನು ಅಕ್ರಮವಾಗಿ ಕಬಳಿಸಿ " ಓಂಕಾರ ಹಿಲ್ಸ್ " ಎನ್ನುವ ಹೆಸರಿನ ಬಂಗಲೆ, ಗೆಸ್ಟ್ ಹೌಸ್ ಗಳನ್ನು ಕಟ್ಟಿಕೊಂಡು ಭೋಗದ ಜೀವನ ನಡೆಸಲಾರಂಭಿಸಿದ. ಜೊತೆಗೆ ದೂರ ದೂರದಿಂದ ಯುವತಿಯರನ್ನು ವಂಚಿಸಿ ಕರೆತಂದು ಅನೈತಿಕ ಚಟುವಟಿಕೆಗಳನ್ನು ಸಹ ನಡೆಸಲಾಗುತ್ತಿದೆಯೆಂದು ಸುತ್ತ ಮುತ್ತಲ ಗ್ರಾಮಸ್ಥರು ಹೇಳುತ್ತಾರೆ.



18 ಆಗಸ್ಟ್ 1992 ರಲ್ಲಿ ಕರ್ನಾಟಕ ಸರಕಾರ ಆಶ್ರಯ ಯೋಜನೆಯಡಿ ನೀಡಿದ ನಿವೇಶನ ಹಕ್ಕು ಪತ್ರ

ಸ್ವಾಮಿಯ ಸೋಗು

ಮನುಷ್ಯ ಅನುಭವಿಸ ಬಹುದಾದ ಎಲ್ಲಾ ರೀತಿಯ ಸುಖ ಭೋಗಗಳನ್ನು ಐಷಾರಾಮಿ ಬದುಕನ್ನು ಅನುಭವಿಸುತ್ತಿರುವ ಈ ಸ್ವಾಮಿ ನಿಜದಲ್ಲಿ ಒಬ್ಬ ಎಸ್ಟೇಟ್ ದಂಧೆಕೋರ, ಅಗರ ಪಂಚಾಯಿತ್ತಿಯ ಬಿ.ಎಂ.ಕಾವಲು, ಹೆಮ್ಮಿಗ್ರೇಪುರ ಪಂಚಾಯಿತ್ತಿಯ ಗ್ಲಾಸ್ ಹೌಸ್ ಬಳಿ, ಕುಂಬಳಗೋಡು ಪಂಚಾಯಿತ್ತಿಯ ದೇವಗೆರೆ, ಕಂಬೀಪುರ, ಗೇರುಪಾಳ್ಯ, ಕೆಂಗೇರಿ ಸುತ್ತಾ ಮುತ್ತಾ ನೂರಾರು ಎಕರೆ ಜಮೀನನ್ನು ಬೇನಾಮಿ ಹೆಸರಿನಲ್ಲಿ ಪಡೆದು ಬಡವರಿಗೆ ವಂಚಿಸಿ ಕಬಳಿಸುತ್ತಾರೆ. ಹತ್ತಾರು ಜಾಗದಲ್ಲಿ ಗೋಮಾಳವನ್ನು ಒತ್ತುವರಿ ಮಾಡಿಕೊಂಡು ಸರ್ಕಾರಕ್ಕೆ ವಂಚಿಸಿರುತ್ತಾನೆ. ಈತನ ಮೋಸಕ್ಕೆ ನೂರಾರು ಕುಟುಂಬಗಳು ಬಲಿಯಾಗಿ ಬಿಕ್ಕುತ್ತಿವೆ.

ಈತನ ಎಲ್ಲಾ ದಂಧೆಗಳಿಗೂ ರಾಜಕಾರಣಿಗಳು ಕಂದಾಯ ಇಲಾಖೆ ಅಧಿಕಾರಿಗಳು ಒತ್ತಾಸೆಯಾಗಿದ್ದಾರೆ.

ಇವುಗಳ ಭಾಗವಾಗಿಯೇ ಶಿವಪುರಿ ಗಾಣಿಕಲ್ಲು ಗ್ರಾಮದಲ್ಲಿ (ಶ್ರೀನಿವಾಸಪುರ ಕಾಲೋನಿ) ಸರ್ಕಾರಿ ಆಶ್ರಯ ಯೋಜನೆಯಡಿ 1992 ರಲ್ಲಿ 900 ಜನರಿಗೆ ಹಂಚಿದ್ದ ಸುಮಾರು 45 ಎಕರೆ 30 ಕುಂಟೆ ಜಮೀನನ್ನು ಸಂಪೂರ್ಣವಾಗಿ ಕಬಳಿಸುವ ಹೊಂಚು ಹಾಕುತ್ತಿರುವುದು.

ರೌಡಿಗಳಿಂದ ಕಿರುಕುಳ

ಸರ್ಕಾರದಿಂದ ಹಕ್ಕು ಪತ್ರ ಪಡೆದು ಅಧಿಕೃತ ಮನೆಗಳಲ್ಲಿ ವಾಸಮಾಡುತ್ತಿರುವ " ಆಶ್ರಯ ಯೋಜನೆಯ" ಫಲಾನುಭವಿಗಳನ್ನು ಒಕ್ಕಲೆಬ್ಬಿಸಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ಸಲುವಾಗಿ ಬಾಡಿಗೆ ರೌಡಿಗಳನ್ನು ಬಿಟ್ಟು ಹೆದರಿಸುವುದು- ಬೆದರಿಸುವುದು, ಹೆಂಗಸರು ಮಕ್ಕಳ ಮೇಲೆ ಹಲ್ಲೆ ನಡೆಸುವುದು ಸ್ವಾಮಿಗೆ ಮಾಮೂಲಿ ವಿಷಯವಾಗಿಬಿಟ್ಟಿದೆ.

98 ರ ನವೆಂಬರ್ 21 ರಂದು ಗೂಂಡಾಪಡೆ ದೊಡ್ಡ ದಾಳಿಯನ್ನು ನಡೆಸಲು ಪ್ರಯತ್ನಿಸಿತು. ಪ್ರಗತಿಪರ ಸಂಘಟನೆಗಳ ನೂರಾರು ಕಾರ್ಯಕರ್ತರು ಹಾಗೂ ಸ್ಥಳೀಯರ ಪ್ರತಿಭಟನೆಯಿಂದಾಗಿ ಸಂಚು ವಿಫಲಗೊಂಡಿತು. ಈ ದಾಳಿಯ ಹಿಂದೆ ಸಂಸದ ಎಂ. ಶ್ರೀನಿವಾಸ್ ರವರ ಬೆಂಬಲವೂ ಇದೆ ಎನ್ನುವದು ಅಲ್ಲಿಯ ಜನರ ಅನುಭವ.

ಇಂತಹ ಹಲವಾರು ಪ್ರಯತ್ನಗಳು ನಡೆಯುತ್ತಲೆ ಬಂದಿವೆ. ಗೂಂಡಾಗಳಿಗೆ ಹೆದರದೆ ಧೈರ್ಯದಿಂದ ಬಾಳುತ್ತಿರುವ ಈ ಜನ ವಿವಿಧ ಸಂಘಟನೆಗಳ ನೆರವಿನೊಂದಿಗೆ ಅಕ್ರಮ ಭೂಮಿ ಕಬಳಿಸುವ ಕಳ್ಳ ಸ್ವಾಮಿ ಹಾಗೂ ಇತರೆ ಅಧಿಕಾರಿಗಳಿಗೆ ಬುದ್ದಿ ಕಲಿಸಲು ಮುಂದಾಗಿದ್ದಾರೆ. 96 ಮತ್ತು 97 ರಲ್ಲಿ ಎರಡು ಬಾರಿ ಸರ್ಕಾರ ಜಾಗ ಖಾಲಿ ಮಾಡುವಂತೆ ಸ್ವಾಮಿಗೆ ಆದೇಶ ಹೊರಡಿಸಿದ್ದರೂ ಅನಧಿಕೃತ ಒತ್ತುವರಿ ಪ್ರದೇಶವನ್ನು ಖುಲ್ಲಾ ಮಾಡುವಂತೆ ಹಾಗೂ ಅನಧಿಕೃತ ಕಟ್ಟಡ ಗಳನ್ನು ತೆರವು ಮಾಡುವಂತೆ ನೋಟೀಸ್ ಜಾರಿ ಮಾಡಿದ್ದರೂ ಇದಕ್ಕೆ ಸೊಪ್ಪು ಹಾಕದ ಶಿವಪುರಿ ರೌಡಿ ಪಡೆ ಹಾಗೂ ರಾಜಕಾರಣಿ ಗಳ ಬೆಂಬಲ ದಿಂದಾಗಿ ಸರ್ಕಾರಕ್ಕೆ ಸವಾಲು ಹಾಕುವ ರೀತಿಯಲ್ಲಿ ಬೀಡುಬಿಟ್ಟಿದ್ದಾರೆ.

ಮಹಿಳಾ ಸಮ್ಮೇಳನ ದಂದು ರೌಡಿಗಳ ದಾಳಿ

ದೇವಾಲಯ ಹಾಗೂ ಮಠವನ್ನು ನಿರ್ಮಿಸಿ ಜಗತ್ ಕಲ್ಯಾಣವನ್ನು ಸಾಧಿಸುತ್ತೇವೆಂದು ಮಾಮೂಲು ಕಥೆಯನ್ನು ಕಟ್ಟಿದ ಸ್ವಾಮಿ ಸುಮಾರು 50 ಎಕರೆ ಜಮೀನನ್ನು ಕಬಳಿಸಿ ಮಂತ್ರಿ- ಮಹೋದಯರಿಗೆ ದೊಡ್ಡ ದೊಡ್ಡ ಹಣವಂತರು ಅಧಿಕಾರಿಗಳಿಗೆ ಕ್ಲಬ್, ಗೆಸ್ಟ್ ಹೌಸ್, ಲಾಡ್ಜ್ ಮುಂತಾದ ವ್ಯವಸ್ಥೆಗಳನ್ನು ಕಲ್ಪಿಸಿ ಕೋಟ್ಯಾಧಿಪತಿಯಾಗಲು ಹೊರಟಿದ್ದಾನೆ. ಈಗಾಗಲೇ ಕಟ್ಟಿರುವ ದೊಡ್ಡ ಬಂಗಲೆಯೊಂದು ತಂಗುದಾಣ ದ ನಾಮಫಲಕ ಹೊತ್ತು ದೊಡ್ಡ-ದೊಡ್ಡ ವ್ಯವಹಾರಗಳ ತಾಣವಾಗಿದೆ.

ಆಶ್ರಯ ಯೊಜನೆಯ ಭೂಮಿಯನ್ನು " ಓಂಕಾರ ರಿಸಾರ್ಟ್" ಆಗಿ ಪರಿವರ್ತಿಸುವ ಈತನ ಮಹಾ ಸಂಚಿನ ವಿರುದ್ಧ ಸ್ಥಳೀಯ ಮುಖಂಡರರಾದ ಗಾಳಪ್ಪ, ಮರಿಯಪ್ಪ, ಭೀರಪ್ಪ, ನಾರಾಯಣಪ್ಪ, ರಾಜಣ್ಣ, ದೇವರಾಜ್, ಬೆಟ್ಟಪ್ಪ, ನಾರಾಯಣಪ್ಪ ಮುಂತಾದವರ ವೈಯಕ್ತಿಕ ಕಾಳಜಿಯಡಿಯಲ್ಲಿ ಸ್ಥಳಿಯರು ಒಗ್ಗಟ್ಟಾಗಿ ಸಮಿತಿಯೊಂದನ್ನು ರಚಿಸಿ ಕೊಂಡು ಹಲವಾರು ಹಂತದ ಪ್ರತಿಭಟನೆಗಳನ್ನು ನಡೆಸುವುದರ ಜೊತೆಗೆ ನ್ಯಾಯಾಲಯದಲ್ಲೂ ದಾವೆ ಹಾಕಿದ್ದಾರೆ. ಈ ಸಂಬಂಧ ಕೋರ್ಟಿನಲ್ಲೂ ಪ್ರಕರಣ ದಾಖಲಾಗಿದ್ದು ವಿಚಾರಣೆಯೂ ನಡೆಯುತ್ತಿದೆ.

ವೈಯಕ್ತಿಕ ಹಾಗೂ ಸ್ಥಳೀಯ ನೆಲೆಗಳಲ್ಲಿನ ಈ ಹೋರಾಟಕ್ಕೆ ವಿಶಾಲ ಸಂಘಟನೆಯೊಂದಿಗೆ ಕೊಂಡಿಯನ್ನು ಬೆಸೆಯಲು ಅಲ್ಲಿನ ಜನತೆ ಮಹಿಳೆ-ಪುರಷನೆಂಬ ಭೇದವಿಲ್ಲದೆ ಆರಿಸಿಕೊಂಡಿದ್ದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯನ್ನು. ಜೆಎಂಎಸ್‌ನ ಹಿನ್ನೆಲೆ ಹಾಗೂ ವ್ಯಾಪ್ತಿ, ಹೋರಾಟಗಳ ಬಗ್ಗೆ ಹತ್ತಾರು ದಿನಗಳಿಂದ ತಿಳಿದಿದ್ದ ಈ ಜನ ಈ ಸಂಘಟನೆಯನ್ನು ಅದ್ದೂರಿಯಾಗಿ ಬರಮಾಡಿಕೊಳ್ಳಲು ನಿರ್ಧರಿಸಿಕೊಂಡರು. ಜೂನ್ 27 ರ ಭಾನುವಾರದಂದು ಶ್ರೀನಿವಾಸಪುರ ಕಾಲೋನಿಯಲ್ಲಿ ಸಮ್ಮೇಳನವನ್ನು ಊರಿನ ಹಬ್ಬದಂತೆ ಆಚರಿಸಿ ಮಹಿಳಾ ಸಂಘಟನೆಯನ್ನು ಬರಮಾಡಿಕೊಂಡರು.

ಊರಿನ ಪ್ರಮುಖ ಬೀದಿಗೆ ಬಂಟಿಂಗ್ಸ್ ಗಳನ್ನು ಕಟ್ಟಿದ್ದರು. ಊರಿನ ಮಧ್ಯ ಪೆಂಡಾಲ್ ಹಾಕಿ ಮೈಕನ್ನು ಕಟ್ಟಿ ರಂಗೋಲಿ ಸ್ಪರ್ಧೆಯನ್ನೇರ್ಪಡಿಸುವ ಮೂಲಕ ಪೆಂಡಾಲ್ ಸುತ್ತಲೂ ಆಕರ್ಷಕವಾದ ಚಿತ್ತಾರಗಳಿಂದ ಕೂಡಿದ ರಂಗೋಲಿಗಳನ್ನು ಬಿಡಿಸಿ ಸಮ್ಮೇಳನಕ್ಕೆ ಸಿಂಗರಿಸಿಯೇ ಬಿಟ್ಟರು. ಊರಿನ ಜನತೆಗೆಲ್ಲಾ ಊಟದ ವ್ಯವಸ್ಥೆಯನ್ನು ಮಾಡಿ ಊರಿಗೆ ಹಬ್ಬದ ಸಡಗರ ತಂದೇ ಬಿಟ್ಟರು.

ಜೆಎಂಎಸ್ ನ ಜಿಲ್ಲಾ ಹಾಗೂ ಸ್ಥಳೀಯ ಮುಖಂಡರು ಊರಿನ ಮುಖಂಡರು ಹಾಗೂ ಹಿರಿಯರು ಒಟ್ಟಾಗಿ ಸೇರಿ ಸಮ್ಮೇಳನವನ್ನು ಅರ್ಥಪೂರ್ಣವಾಗಿ ನಡೆಸಿದರು. ಸ್ವಾಮಿಜಿಯ ಅಕ್ರಮದ ವಿರುದ್ಧ ಹಾಗೂ ಸ್ವಾಮಿಯ ಅಕ್ರಮ ಚಟುವಟಿಕೆಗಳಿಗೆ ಹಸೆಮಣೆ ಹಾಕುತ್ತಿರುವ ಅಧಿಕಾರಿಗಳು, ರಾಜಕಾರಿಣಿಗಳ ವಿರುದ್ಧ ಹೋರಾಡುವ ಪ್ರತಿಧ್ವನಿ ಮೊಳಗಿಸಿದರು. ಮಹಿಳೆಯರ ಹಾಗೂ ನಾಗರೀಕ ಒಗ್ಗಟ್ಟನ್ನು ಬೆಸೆದು ಎಲ್ಲಾ ರೀತಿಯ

ಪುಟ 10 ನೋಡಿ

ಪುಟ 7ರಿಂದ

ಕಾರ್ಮಿಕ ರಂಗದಲ್ಲಿ......

ರಂಗದಲ್ಲಿ ಹಿಂದಿನ ಕಾಂಗ್ರೆಸ್ ಸರಕಾರ ನಡೆಸಿದ ತೀವ್ರ ದಮನದ ಹಿನ್ನೆಲೆಯಲ್ಲಿ ಸುಮಾರು 360 ಕಾರ್ಮಿಕ ಸಂಘಗಳನ್ನು ಕಾಂಗ್ರೆಸ್ ವಶಪಡಿಸಿಕೊಂಡಿತ್ತು. 40000 ಕಾರ್ಮಿಕರನ್ನು ಅವರ ವಾಸಸ್ಥಾನಗಳಿಂದ ಓಡಿಸಿ ಅವರು ಕೆಲಸಕ್ಕೆ ಹಾಜರಾಗದಂತೆ ಮಾಡಲಾಗಿತ್ತು. ಅಧಿಕಾರಕ್ಕೆ ಬಂದ ಕೂಡಲೇ ಈ ಎಲ್ಲಾ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕಾಗಿತ್ತು. ಅದನ್ನು ಒದಗಿಸಲಾಯಿತು. ಕಾರ್ಮಿಕ ಆಂದೋಲನದ ಪ್ರಜಾಪ್ರಭುತ್ವೀಕರಣದತ್ತ ಒಂದು ಪ್ರಮುಖ ಹೆಜ್ಜೆಯಾಗಿ ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವಂತೆ ಕಾನೂನನ್ನು ತಿದ್ದುಪಡಿ ಮಾಡಲಾಯಿತು. ಬೇರೆ ರಾಜ್ಯಗಳಲ್ಲಿ ಇದಿನ್ನೂ ಈಡೇರದ ಬೇಡಿಕೆ.

ಬಳಕೆದಾರರ ಬೆಲೆ ಸೂಚ್ಯಂಕದಲ್ಲಿ ಮೋಸವನ್ನು ಸರಿಪಡಿಸಬೇಕೆಂದು ಭಾರತದ ಕಾರ್ಮಿಕ ಆಂದೋಲನದ ಹಿಂದಿನ ಬೇಡಿಕೆ. ಎಡರಂಗ ಸರಕಾರ ಮಾತ್ರವೇ ಕಾರ್ಮಿಕರ ಈ ಬೇಡಿಕೆಗೆ ಸ್ಪಂದಿಸಿತು. 1982 ರಲ್ಲಿಹೊಸ ಸರಣಿ ಆರಂಭಿಸಿದಾಗ 1960 ಹಳೆಯ ಸರಣಿಯಿಂದ ಹೊಸ ಸರಣಿಗೆ ಬದಲಿಸುವಾಗ ಬಳಸುವ ಗುಣಕವನ್ನು 4.19 ಎಂದು ನಿಗದಿ ಪಡಿಸಲಾಯಿತು. ಎಡರಂಗ ಸರಕಾರದ ಒತ್ತಡದಿಂದ ಇದನ್ನು 4.74 ಮಾಡಲಾಯಿತು. ಇದು ಮೋಸವನ್ನು ಸಾಕಷ್ಟು ಕಡಿಮೆ ಮಾಡಿತು. ನಿಜ, ಅದನ್ನು ಇನ್ನೂ ಪೂರ್ಣವಾಗಿ ಹೋಗಲಾಡಿಸಲು ಆಗಿಲ್ಲ.

ಕಾರ್ಮಿಕ ಕಾನೂನುಗಳ ಪಾಲನೆಯಲ್ಲಿ ಈ ರಾಜ್ಯಕ್ಕೆ ಮೊದಲ ಸ್ಥಾನ. ಇ.ಎಸ್.ಐ ಭವಿಷ್ಯ ನಿಧಿ ಕಾನೂನುಗಳ ಉಲ್ಲಂಘನೆ ಮಾಡುವ ಮಾಲಕರಿಗೆ ಶಿಕ್ಷೆಯಾಗುವುದಿಲ್ಲ ಎಂಬುದು ಕಾರ್ಮಿಕರ ಸಾಮಾನ್ಯ ಅನುಭವ. ಆದರೆ ಪಶ್ಚಿಮ ಬಂಗಾಳದಲ್ಲಿ ಈ ಪರಿಸ್ಥಿತಿಯಿಲ್ಲ.

ಅದೇ ರೀತಿ ಕಾರ್ಮಿಕ ಚಳುವಳಿಯ ವಿರುದ್ಧ ಪೋಲೀಸರ ಬಳಕೆಯೂ ಈಗ ಪಶ್ಚಿಮ ಬಂಗಾಳದಲ್ಲಿ ಇತಿಹಾಸದ ಪುಟಗಳಿಗೆ ಸೇರಿದ ಮಾತು. ಈ ಹಿಂದೆ ಸಂಯುಕ್ತ ರಂಗ ಸರಕಾರದಲ್ಲಿ ಗೃಹಮಂತ್ರಿಯಾಗಿದ್ದಾಗಲೇ ಜ್ಯೋತಿಬಸು ಪೋಲೀಸ್ ಪಡೆಯಿರುವುದು ಕಾನೂನು-ವ್ಯವಸ್ಥೆಯ ಪಾಲನೆಗೆ, ಮಾಲಕರ ರಕ್ಷಣೆಗಲ್ಲ ಎಂದು ಸ್ಪಷ್ಟ ಪಡಿಸಿದರು. ಎಡರಂಗ ಸರಕಾರ ಆ ನೀತಿಯನ್ನು ಇನ್ನಷ್ಟು ಮುಂದುವರಿಸಿತು. 'ಪೋಲೀಸ್ ಸೇವೆ' ಎಂಬ ಪರಿಕಲ್ಪನೆಯಲ್ಲೇ ಎಡರಂಗ ಮಹತ್ವಪೂರ್ಣ ಬದಲಾವಣೆಗಳನ್ನು ತಂದಿತು. 1996 ರಲ್ಲಿ ಎಂಟನೇ ಪಶ್ಚಿಮ ಬಂಗಾಳ ಪೋಲೀಸ್ ಆಯೋಗವನ್ನು ನೇಮಿಸಲಾಗಿದೆ. ಅಲ್ಲದೆ ಒಬ್ಬ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಾಜ್ಯ ಮಾನವಹಕ್ಕು ಆಯೋಗವನ್ನು ರಚಿಸಲಾಗಿದೆ. ರಾಷ್ಟ್ರಮಟ್ಟದ ಆಯೋಗದ ನಂತರ ಇಂತಹ ಆಯೋಗ ರಚಿಸಿರುವ ಮೊದಲ ರಾಜ್ಯವೆಂದರೆ ಪಶ್ಚಿಮ ಬಂಗಾಳವೇ. ಪೋಲೀಸರು ಹದ್ದುಮೀರಿ ವರ್ತಿಸದಂತೆ ನೋಡಿಕೊಳ್ಳಲು ಈ ವ್ಯವಸ್ಥೆ. ಇತ್ತೀಚೆಗೆ ಈ ಆಯೋಗ ತನ್ನ ಮೂರನೇ ವಾರ್ಷಿಕ ವರದಿ ಮಂಡಿಸಿದೆ. ತನ್ನ ಶಿಫಾರಸುಗಳಲ್ಲಿ ಸುಮಾರಾಗಿ ಎಲ್ಲವನ್ನು ರಾಜ್ಯ ಸರಕಾರ ಜಾರಿಗೆ ತಂದಿದೆ ಎಂದು ಈ ವರದಿ ತೃಪ್ತಿ ಪಡಿಸಿದೆ. ಕಳೆದ ವರ್ಷ 3000 ಕ್ಕೂ ಹೆಚ್ಚು ಕೇಸುಗಳು ತನ್ನ ಬಳಿ ಬಂದಿದ್ದವು ಎಂದು ಆಯೋಗದ ವರದಿ ತಿಳಿಸಿದೆ.



ಮಾಲಿಕರ ಪರ ಸರಕಾರ ಅಲ್ಲ ಕಾರ್ಮಿಕರ ಪರ ಸರಕಾರ

ಎಡರಂಗ ಸರಕಾರಕ್ಕೆ 22 ವರ್ಷ ತುಂಬಿತು ಅನ್ನುವಾಗ ಅನೇಕ ಘಟನೆಗಳು ನೆನಪಾಗುತ್ತವೆ. ಅವುಗಳಲ್ಲೊಂದು ಸಣ್ಣ ಘಟನೆ ನೆನಪಿಸುವುದು ಅಗತ್ಯ.

1975 ರ ಸೆಪ್ಟಂಬರ್ ತಿಂಗಳಲ್ಲಿ ಕಲ್ಕತ್ತದ ವಿಜಯಾ ಬ್ಯಾಂಕ್ ಶಾಖೆಗೆ ಗುಮಾಸ್ತ ನನ್ನಾಗಿ ಅಂದಿನ ಖಾಸಗಿ ಆಡಳಿತ ವರ್ಗ ಈ ಲೇಖಕನನ್ನು ನೇಮಕ ಮಾಡಿತ್ತು. ಮೊದಲ 3 ತಿಂಗಳು 200 ರೂ. ವೇತನ, ಜವಾನ ಕೆಲಸ ಮಾಡುವವರಿಗೆ ದಿನಕ್ಕೆ 5 ರೂ ಸಂಬಳ ರಜಾ ದಿನಗಳಲ್ಲಿ ವೇತನ ಇಲ್ಲ ಕೆಲಸದ ಭದ್ರತೆಯೂ ಇಲ್ಲ . ನಾಲ್ಕನೇ ತಿಂಗಳಿನ ನಂತರ ರೂ. 553 ಜೊತೆಯಲ್ಲಿಯೇ ಅತೀವ ಪಕ್ಷಪಾತತನ. ಇದರ ವಿರುದ್ಧ ಹೋರಾಡ ಬೇಕೆಂದು ಮನಸ್ಸಿದ್ದರೂ ಬಿ ಎಂ ಎಸ್. ನೇತೃತ್ವದ ಸಂಘಟನೆಯು ಮಾಲಕರ ಪರವಾಗಿ ಕೆಲಸ ಮಾಡುತ್ತಿತ್ತು. ಮಾತ್ರವಲ್ಲ, ಯಾರಾದರೂ ಆಡಳಿತವರ್ಗದ ವಿನೋಧ ಮಾಡುತ್ತಿದ್ದಾರೆಂದು ತಿಳಿದಾಕ್ಷಣ, ಜನವಸತಿ ಇಲ್ಲದ ಊರುಗಳಿಗೆ ವರ್ಗಾವಣೆ, ಗೂಂಡಾ ಧಾಳಿ ಸರ್ವೇ ಸಾಮಾನ್ಯವಾಗಿತ್ತು.

1977 ಜೂನ್ 21 ರಂದು ಸಿಐಟಿಯು ಮುಖಂಡರಾದ ಕಾಂ. ಜೋತಿಬಸು ನೇತೃತ್ವದಲ್ಲಿ ಸಿಪಿಐ(ಎಂ) ಮುಂಚೂಣಿಯ ಎಡರಂಗ ಸರಕಾರ ಅಸ್ತಿತ್ವಕ್ಕೆ ಬಂದಾಗ ಕಾರ್ಮಿಕರಲ್ಲಿ, ಜನಸಾಮಾನ್ಯರಲ್ಲಿ ಹೊಸ ಚೈತನ್ಯ ಮೂಡಿ ಬಂದಿತ್ತು. ಇದು ನಮ್ಮ ಸರಕಾರ, ಇದು ಜನರ ಸರಕಾರ ವೆಂಬ ಹರ್ಷೋದ್ಗಾರ ಎಲ್ಲೆಡೆ ಮೊಳಗುತ್ತಿತ್ತು. ಅನ್ಯಾಯದ ವಿರುದ್ಧ ಹೋರಾಡಬೇಕೆಂದು ಚಿಂತಿಸುತ್ತಿದ್ದ ಕಲ್ಕತ್ತದ ಬ್ಯಾಂಕ್ ನೌಕರರಲ್ಲೂ ವಿದ್ಯುತ್ ಸಂಚಾರವಾಯಿತು. ಹೇಗಾದರೂ ಮಾಡಿ ಸಂಘ ಕಟ್ಟಬೇಕೆಂಬ ಛಲ ಬಲವಾಯಿತು.

32 ನೌಕರರ ಸಣ್ಣ ಗುಂಪೊಂದು ಯಾರೂ ಅರಿಯದ ಜಾಗದಲ್ಲಿ ಸಭೆ ಸೇರಿ ಸಂಘಟನೆಯನ್ನು ಕಟ್ಟಿದರು. ಕಾರ್ಮಿಕರ ಪರ ಸರಕಾರ ಅಧಿಕಾರಕ್ಕೆ ಬಂದುದರಿಂದ ನೋಂದಾವಣೆ ಕಷ್ಟವಾಗಲಿಲ್ಲ. ಸಂಘ ಕಟ್ಟಿದ ಒಂದು ವರ್ಷದಲ್ಲಿಯೇ ತೀವ್ರ ಹೋರಾಟಕ್ಕೆ ಕೈ ಹಾಕಿದೆವು. 'ಶಾಂತಿಯುತ ಚಳುವಳಿಯಲ್ಲಿ ಪೋಲೀಸರ ಮಧ್ಯ ಪ್ರವೇಶವಿಲ್ಲ' ಎಂದು ಎಡರಂಗ ಸರಕಾರ ಘೋಷಿಸಿದ್ದುದರಿಂದ ನಮ್ಮ ಹೋರಾಟಕ್ಕೆ ಇನ್ನಷ್ಟು ಬಲಬಂದಿತ್ತು.

ಹೇಗಾದರೂ ಮಾಡಿ ನಮ್ಮ ಸಂಘಟನೆಯನ್ನು ಮುರಿಯಬೇಕೆಂದು ಪಣ ತೊಟ್ಟಿದ್ದ ಆಡಳಿತ ಮಂಡಳಿಯು ಗೂಂಡಾಗಳನ್ನು ನೌಕರರನ್ನಾಗಿ ನೇಮಕ ಮಾಡಿಕೊಂಡು ಇನ್ನೊಂದು ಸಂಘವನ್ನು ಮಾಡುವಂತೆ ಪ್ರೇರೇಪಿಸಿ, ನಮ್ಮ ಮೇಲೆ ದಬ್ಬಾಳಿಕೆಗೆ ಪ್ರಯತ್ನಿಸಿತು. ಅದರಲ್ಲೂ ಸಫಲವಾಗದಿದ್ದಾಗ ಇನ್ನೊಂದು ಉಪಾಯ ಮಾಡಿತು.

ಕಾಂ. ಜೋತಿ ಬಸುವರರ ನಿಕಟ ಸಂಬಂಧಿಯೊಬ್ಬರು ಕೈಗಾರಿಕೆ ನಡೆಸುತ್ತಿದ್ದರು. ಆಡಳಿತ ನಡೆಸುತ್ತಿದ್ದ ಅಧಿಕಾರಿಗಳು ಮುತುವರ್ಜಿ ವಹಿಸಿ ಅವರನ್ನು ಹುಡುಕಿ 10 ಲಕ್ಷ ರೂ ಸಾಲವನ್ನು ಯಾವುದೇ ಕಾಗದ ಪತ್ರಗಳಿಲ್ಲದೆ ಮಂಜೂರು ಮಾಡಿದರು ಹಾಗೂ ನಮ್ಮ ಸಂಘಟನೆಯನ್ನು ಮುರಿಯಲು ಸರಕಾರದ ಮೇಲೆ ಒತ್ತಡ ತಂದರು. ಆದರೆ ಎಡರಂಗ ಸರಕಾರದ ಉತ್ತರ ಸ್ಪಷ್ಟವಾಗಿತ್ತು. ವಿಜಯ ಬ್ಯಾಂಕಿನ ಆಡಳಿತಕ್ಕೆ ನೇರ ನಿರ್ದೇಶನ ನೀಡಿತು. ನೌಕರ ಸಂಘದ ಮುಖಂಡರ ಜತೆ ಮಾತುಕತೆ ನಡೆಸುವ ಮೂಲಕ ಸಮಸ್ಯೆ ಬಗೆ ಹರಿಸಿ ಎಂದು ಹೇಳಿತು.

ನೌಕರರ ಪರ ಸರಕಾರದ ಅಸ್ತಿತ್ವದಿಂದಾಗಿ, ಪೋಲೀಸರ ಮಧ್ಯ ಪ್ರವೇಶ ಇಲ್ಲದುದರಿಂದ ಆಡಳಿತ ವರ್ಗದ ಕೈ ಕಟ್ಟಿದಂತಾಗಿ ಹಲವಾರು ಸಮಸ್ಯೆಗಳಿಗೆ ಪರಿಹಾರ ದೊರೆಯಿತು. ಇದರಿಂದ ವಿಜಯಾ ಬ್ಯಾಂಕ್ ನಲ್ಲಿ ನಾವು ನಡೆಸುತ್ತಿದ್ದ ಸಂಘಟನೆಯನ್ನು ಬಿಹಾರ, ಒರಿಸ್ಸಾ, ತ್ರಿಪುರ ಇನ್ನಿತರ ಈಶಾನ್ಯ ರಾಜ್ಯಗಳಿಗೆ ನಂತರ ಕರ್ನಾಟಕಕ್ಕೆ ವಿಸ್ತರಿಸಲು ಸಾಧ್ಯವಾಯಿತು.

ಎಡರಂಗ ಸರಕಾರಕ್ಕೂ ಮತ್ತು ಜೆ.ಹೆಚ್. ಪಟೇಲರಂತವರ ಬಂಡವಾಳಶಾಹಿ ಸರಕಾರಕ್ಕೂ ಇರುವ ವ್ಯತ್ಯಾಸ ಇದೇ. ಕರ್ನಾಟಕದ ಕಾರ್ಮಿಕರು ಮತ್ತು ಕಾರ್ಯಕರ್ತರು ಈ ಸತ್ಯವನ್ನು ಎಷ್ಟು ಬೇಗ ಮೈ ಗೂಡಿಸಿಕೊಳ್ಳುತ್ತಾರೋ ಅಷ್ಟು ವೇಗವಾಗಿ ರಾಜಕೀಯದಲ್ಲಿ ಜನಪರ ಬದಲಾವಣೆ ಕಾಣುವುದು ಸಾಧ್ಯ.

- ಬಾಲಕೃಷ್ಣ ಶೆಟ್ಟಿ



ಎಲ್ಲರಿಗೂ ಶಿಕ್ಷಣ.........

ಇದು ಎಡರಂಗ ಸರಕಾರದ ಶಿಕ್ಷಣ ನೀತಿಯ ಸಾರಾಂಶ. ಶಿಕ್ಷಣವನ್ನು ಸಾರ್ವತ್ರೀಕರಿಸುವುದು, ಇದಕ್ಕಾಗಿ ಬಜೆಟ್ ಮತ್ತು ಯೋಜನೇತರ ಹಣ ನೀಡಿಕೆಯಲ್ಲಿ ಹೆಚ್ಚಳ, ಸಾಕ್ಷರತೆಗೆ ಹೆಚ್ಚಿನ ಒತ್ತು - ಇದು ಎಡರಂಗ ಸರಕಾರ ಅನುಸರಿಸಿದ ನೀತಿ. 1977 ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ 12ನೇ ತರಗತಿಯವರೆಗೆ ಶಿಕ್ಷಣವನ್ನು ಉಚಿತಗೊಳಿಸಲಾಯಿತು. 1986 ರಲ್ಲಿ ಹೊಸ ಶಿಕ್ಷಣ ನೀತಿ ಬಂದು ಸರಕಾರ ಶಿಕ್ಷಣ ರಂಗದಲ್ಲಿ ತನ್ನ ಜವಾಬ್ದಾರಿಯನ್ನು ಕಮ್ಮಿ ಮಾಡುತ್ತಾ ಹೋಗಬೇಕು ಎಂದು ಪ್ರತಿಪಾದಿಸಿದಾಗ ಅದನ್ನು ಬಲವಾಗಿ ವಿರೋಧಿಸಿದ ರಾಜ್ಯವೆಂದರೆ ಪಶ್ಚಿಮ ಬಂಗಾಳ. ಕೆಲವರಿಗೆ ಉತ್ತಮ ಶಿಕ್ಷಣ ಎಂಬ 'ನವೋದಯ' ಶಾಲೆಗಳ ಮಾದರಿಯನ್ನು ಅದು ತಿರಸ್ಕರಿಸಿತು. ಗ್ರಾಮೀಣ ಅಭಿವೃದ್ಧಿಯ ವಲಯದಲ್ಲಿ ಈ ರಾಜ್ಯದ ಅಭೂತಪೂರ್ವ ಸಾಧನೆ ಶಿಕ್ಷಣ ರಂಗದಲ್ಲೂ ಪ್ರತಿಬಿಂಬಿಸಿದೆ. ಶಾಲೆ ಸೇರುವ ಮಕ್ಕಳ ಪ್ರಮಾಣ ಗಮನಾರ್ಹವಾಗಿ ಹೆಚ್ಚಿದೆ. ಮಧ್ಯದಲ್ಲೇ ಶಾಲೆ ಬಿಡುವ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಿದೆ. ಶಿಕ್ಷಣಕುರಿತಂತೆ ಡಾ. ಅಶೋಕ ಮಿತ್ರ ರವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಿಸಲಾಗಿದ್ದು ಅದು ಈಗಾಗಲೇ ತನ್ನ ಶಿಫಾರಸುಗಳನ್ನು ಸಲ್ಲಿಸಿದೆ.

ಹಿಂದುಳಿದವರು, ದಲಿತರ ವಿಮೋಚನೆಯ ದಾರಿ

ಸ್ವಾತಂತ್ರ್ಯದ ಐದು ದಶಕಗಳ ನಂತರವೂ ದೇಶವನ್ನು ಕಾಡುತ್ತಿರುವ ಈ ಪ್ರಶ್ನೆಗೆ ಪಶ್ಚಿಮ ಬಂಗಾಳದ ಎಡರಂಗ ಸರಕಾರ ಕಳೆದ 22 ವರ್ಷಗಳಲ್ಲಿ ಉತ್ತರ ಪಡೆಯಲು ಪ್ರಾಮಾಣಿಕ ಪ್ರಯತ್ನ ನಡೆಸಿದೆಯೆನ್ನಬಹುದು. ಭೂಸುಧಾರಣೆ, ವಿಕೇಂದ್ರೀಕರಣ ಆಧಾರಿತ ಗ್ರಾಮೀಣ ಅಭಿವೃದ್ಧಿಯೇ ಆ ಉತ್ತರ. ಏಕೆಂದರೆ ಈ ದಾರಿ ಸಮಾಜದ ಕೆಳಸ್ತರಗಳಲ್ಲಿದ್ದ ಜನಸಮೂಹಗಳಿಗೆ ಒಂದು ದನಿ ನೀಡುವಲ್ಲಿ ಯಶಸ್ವಿಯಾಗಿದೆ. ಉದಾಹರಣೆಗೆ, ಮಿಗುತೆ ಭೂಮಿ ಹಂಚಿಕೆಯಲ್ಲಿ ಫಲಾನುಭವಿಗಳಲ್ಲಿ 57% ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳಿಗೆ ಸೇರಿದವರು. ರೆವಿನ್ಯೂ ದಾಖಲೆಗಳಲ್ಲಿ ಹೆಸರು ನೊಂದಣಿಯಾದ ಬರ್ಗಾದಾರರಲ್ಲಿ 41.5% ಈ ದಲಿತ ವಿಭಾಗಗಳಿಗೆ ಸೇರಿದವರು. ಇವರಿಗೆ ಒಟ್ಟು ಬರ್ಗಾ ಭೂಮಿಯ 46.8% ದೊರೆತಿದೆ. ಭೂಸುಧಾರಣೆಯ ನಂತರ ಸುಲಭ ದರಗಳಲ್ಲಿ ಕೃಷಿ ಲಾಗುವಾಡುಗಳ ಪೂರೈಕೆಯಿಂದ ಈ ವಿಭಾಗಗಳ ಕೊಳ್ಳುವಶಕ್ತಿ, ಅದರೊಂದಿಗೆ ಮಕ್ಕಳ ಶಿಕ್ಷಣ ಹೆಚ್ಚಿದೆ.

ಎಡರಂಗ ಸರಕಾರ ಕೈಗೊಂಡ ಇನ್ನೊಂದು ಪ್ರಮುಖ ಕ್ರಮವೆಂದರೆ ಬುಡಕಟ್ಟು ಜನಗಳ ಅರಣ್ಯ ಹಕ್ಕುಗಳನ್ನು ಮತ್ತೆ ಕೊಡಿಸಿ ಅವರಿಗೆ ಕಂಟ್ರಾಕ್ಟರುಗಳಿಂದ ರಕ್ಷಣೆ ಕೊಡಿಸಿದ್ದು.

ಸಣ್ಣ ಪ್ರಮಾಣದ ಉದ್ದಿಮೆಗಳು ಮತ್ತು ಕುಟೀರ ಉದ್ದಿಮೆಗಳಿಗೆ ಹೆಚ್ಚಿನ ಪ್ರೋತ್ಸಾಹದ ಫಲಾನುಭವಿಗಳಲ್ಲೂ ದಲಿತ ಹಾಗೂ ಹಿಂದುಳಿದ ಜನವಿಭಾಗಗಳ ಪ್ರಮಾಣ ಗಣನೀಯವಾಗಿದೆ. ಬಹುಪಾಲು ಜನರ ಹಿತಾಸಕ್ತಿಗಳನ್ನೂ ಗಮನದಲ್ಲಿಟ್ಟುಕೊಂಡು ಆಡಳಿತ ನಡೆಸುವ ಒಂದು ಸರಕಾರದ ಪ್ರಾಮಾಣಿಕ ಕ್ರಮಗಳಿಂದ ಏನೇನುಸಾಧಿಸಲು ಸಾಧ್ಯ ಎಂಬುದಕ್ಕೆ ಪಶ್ಚಿಮ ಬಂಗಾಳ ಒಂದು ಉದಾಹರಣೆ.

.... ರೊಚ್ಚಿಗೆದ್ದ ಮಹಿಳೆಯರು

ಪುಟ 9 ರಿಂದ

ಅಸಮಾನತೆ, ಅನ್ಯಾಯಗಳ ವಿರುದ್ಧ ಹೋರಾಟ ನಡೆಸುವ ಛಲಗಾರಿಕೆಯನ್ನು ಪ್ರದರ್ಶಿಸಿದ ಸಮ್ಮೇಳನದ ಸುದ್ದಿ ಬೆಟ್ಟದ ಮೇಲೆ ಬಂಗಲೆಯಲ್ಲಿದ್ದ ಸ್ವಾಮಿಯ ಕಿವಿಗೆ ಮುಟ್ಟಿತು. ಕೆರಳಿದ ಸ್ವಾಮಿ ಕೂಡಲೆ ಕಾರ್ಯಪ್ರವೃತ್ತನಾದ.

ಮಚ್ಚು- ಚಾಕುಗಳೊಂದಿಗೆ ಬಂದ ರೌಡಿಗಳು ಅಟ್ಟಾಡಿಸಿದ ಮಹಿಳೆಯರು.

ಸಮ್ಮೇಳನ ಮುಗಿಸಿ ಹಗುರ ಮನಸ್ಸಿನೊಂದಿಗೆ ಹಿಂತಿರುಗಿ ತಂತಮ್ಮ ಕೆಲಸ-ಕಾರ್ಯಗಳಲ್ಲಿ ತೊಡಗುತ್ತಿದಂತೆಯ ಒಂದು ಲಾರಿ ಹಾಗೂ ಒಂದು ಮೆಟಡಾರ್ ನಲ್ಲಿ ಬಂದಿಳಿದ ರೌಡಿಗಳು ಮಾರಕಾಸ್ತ್ರಗಳನ್ನು ಝಳಪಿಸುತ್ತಾ "ಮಹಿಳಾ ಸಂಘ ಮಾಡುತ್ತೀರೇನ್ರೇ, ತಾಕತ್ತಿದ್ದರೆ ಹೊರಗೆ ಬಂದು ಈಗ ಹೋರಾಡಿ, ಸಂಘ ನೋಡುತ್ತೇವೆ" ಎನ್ನುತ್ತಾ ಮನೆ-ಮನೆಗೆ ನುಗ್ಗಲು ಪ್ರಾರಂಭಿಸಿದರು. ಹೆಂಗಸರು ಸಂಘಕಟ್ಟಲು ನೀವು ಸರ್ಪೋಟರ್, ಷಂಡ ನನ್ಮಕ್ಳು ಎಂದು ಗಂಡಸರನ್ನು ಹಿಯಾಳಿಸುತ್ತಾ ಕೈಗೆ ಸಿಕ್ಕವರನ್ನೆಲ್ಲಾ ಎಳೆದಾಡಿದರು.

ಅವಮಾನಕಾರಿ ಮಾತುಗಳಿಂದ ಕುಪಿತರಾದ ಗಂಡಸರು ಹಾಗೂ ಮಧ್ಯಾಹ್ನವಷ್ಟೇ ಝಾನ್ಸಿರಾಣಿ ಲಕ್ಷ್ಮೀಬಾಯಿ, ಕಿತ್ತೂರುರಾಣಿ ಚೆನ್ನಮ್ಮ ಕ್ಯಾಪ್ಟನ್ ಲಕ್ಷ್ಮಿ ಮುಂತಾದ ವೀರ ಮಹಿಳೆಯರ ಗುಣಗಾನ ಮಾಡಿ ಸ್ಮರಿಸಿದ್ದ ಹೆಂಗಸರು ಪ್ರತಿಜ್ಞೆಗೈದವರಂತೆ ಮನೆಗಳಿಂದ ಎಲ್ಲರೂ ಹೊರಬಂದರು. ಒಟ್ಟಾಗಿ ನುಗ್ಗಿದ ಈ ಧೀರ ಮಹಿಳೆಯರು ರೌಡಿಗಳು ನಿರೀಕ್ಷಿಸಿರದ ರೀತಿಯಲ್ಲಿ ಅವರ ಮೇಲೆರಗಿ ಸರಿಯಾದ ಪಾಠ ಕಲಿಸಿದರು. ಅಲ್ಲಿನ ಗಂಡಸರನ್ನು ಷಂಡರೆಂದು ಕರೆದಿದ್ದ ಈ ಪರಾಕ್ರಮಿಗಳನ್ನು ಊರಲ್ಲೆಲ್ಲಾ ಓಡಾಡಿಸಿ ಹೊಡೆದ ಹೆಂಗಸರ ಶೌರ್ಯವನ್ನು ಕಂಡು ಹೆದರಿ ಕಾಲಿಗೆ ಬುದ್ಧಿ ಹೇಳಿದರು. ಬಾಡಿಗೆ ಲಾರಿ ಹಾಗೂ ಮೆಟಡಾರ್ ಗಳಿಗೆ ಹತ್ತಿ ಪರಾರಿಯಾದರು. ಕೊನೆಗೆ ಸಿಕ್ಕ ಮೂರು ಜನ ರೌಡಿಗಳನ್ನು ಪೋಲಿಸರ ವಶಕ್ಕೆ ಒಪ್ಪಿಸಲಾಯಿತು.

ಆಶ್ಚರ್ಯಕರ ರೀತಿಯಲ್ಲಿ ಒಗ್ಗಟ್ಟಾಗಿದ್ದ ಕಾಲೋನಿಯ ಜನ ವಿಚಲಿತರಾಗದೆ ಮಚ್ಚು, ಚಾಕುಗಳನ್ನು ಹಿಮ್ಮೆಟ್ಟಿಸಿದರು.

ಮಾರನೆಯ ದಿನ ಕೆಂಗೇರಿ ಪೋಲೀಸರಿಗೆ ದೂರನ್ನು ನೀಡಿ ಪೋಲೀಸರು ಬೆರಗಾಗುವಂತೆ ಮಾಡಿ ರೌಡಿಗಳಿಗೆ ಸರಿಯಾದ ಪಾಠ ಕಲಿಸಲು ಆಗ್ರಹಿಸಿ ವಾಪಸ್ಸಾದರು. ಪೋಲೀಸರು ಹಾಗೂ ಕಾನೂನು ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ಕಾದುನೋಡಬೇಕು ?.

ಮಹಿಳಾ ಸಂಘಟನೆಯ ಪರವಾಗಿ ಅಂದು ಗ್ರಾಮಕ್ಕೆ ಭೇಟಿ ನೀಡಿದಾಗ ಅಲ್ಲಿನ ಜನತೆ ಉತ್ಸಾಹ ಮತ್ತು ಸ್ಫೂರ್ತಿಯಿಂದ ಬೀಗುತ್ತಿದ್ದರು. ಒಗ್ಗಟ್ಟು ಹಾಗೂ ಹೋರಾಟ ನೀಡಿದ ಫಲವನ್ನು ನೆನೆದು ಅವರ ಕಣ್ಣುಗಳು ಮಿಂಚುತ್ತಿದ್ದವು. ಏನೇ ದಾಳಿ ಬರಲಿ ಇನ್ನು ನಾವು ಎದೆ ಗುಂದುವುದಿಲ್ಲ, ನೀವು ನಮ್ಮ ಜೊತೆಯಿರಿ, ನಮಗಷ್ಟೇ ಸಾಕು ಎಂದರು.

ನಮ್ಮ ದೇಶದ ಇಂದಿನ ವ್ಯವಸ್ಥೆಯಲ್ಲಿ ಇದು ಅಪರೂಪದ ಘಟನೆ ಅಥವಾ ವಿಷಯವೆಂದೇನಲ್ಲ. ಸಾವಿರಾರು ಅಥವಾ ಲಕ್ಷಾಂತರ ಉದಾಹರಣೆಗಳಲ್ಲಿ ಇದೂ ಒಂದು. ಆದರೆ ಉದಾಹರಣೆಗಳ ಸಾಲಿಗೆ ಮತ್ತಷ್ಟು ಉದಾಹರಣೆಗಳನ್ನು ಪೋಣಿಸುತ್ತಾ ಹೋಗಬೇಕೆ ಅಥವಾ ಇವುಗಳ ವಿರುದ್ಧ ಜಾಗೃತಿ ಬೇಡವೆ ಎನ್ನುವುದೇ ಪ್ರಶ್ನೆ.

ಸಾಮಾಜಿಕ ಕಳಕಳಿಯಿರುವ ಪ್ರತಿಯೊಬ್ಬ ಪ್ರಜ್ಞಾವಂತ ನಾಗರೀಕ ಹಾಗೂ ಪ್ರಗತಿಪರ ಸಂಘಟನೆಗಳು ಒಂದಾಗಿ ಇಂತಹ ಕೊಳೆತ ಬೇರುಗಳನ್ನು ನಿರ್ನಾಮ ಮಾಡಿ ಹೊಸ ಬೀಜವನ್ನು ಹೊಸ ಸೃಷ್ಟಿಯನ್ನು ನಿರ್ಮಿಸಲು ಮುಂದಾಗಬೇಕಷ್ಟೇ. ಬಡವರ ಹೊಟ್ಟೆಯ ಮೇಲಿನ ದಾಳಿ, ಸೂರಿನ ಮೇಲಿನ ದಾಳಿ ಹೆಂಗಸರು ಮಕ್ಕಳ ಮೇಲಿನ ದಾಳಿ ಪೋಲೀಸ್ ಕಾನೂನಿನಿಂದ ನಿಲ್ಲುತ್ತದೆಂದು ನಿರೀಕ್ಷೆ ಮಾಡಿದರೆ ಅದಕ್ಕಿಂತ ಮೂಢನಂಬಿಕೆ ಮತ್ತೊಂದಿಲ್ಲ.

ದುಡಿಯುವ ಜನರ ಹಕ್ಕು ರಕ್ಷಣೆ ದುಡಿಯುವವರ ಕೈಯ್ಯಲ್ಲೇ ಅವರು ನಡೆಸುವ ದೃಢ ಹೋರಾಟಗಳಲ್ಲೆ ! ಇದು ಶ್ರೀನಿವಾಸಪುರದ ಜನತೆ ಕಂಡುಕೊಂಡ ಉತ್ತರ ಮಾತ್ರವಲ್ಲ ನಮ್ಮ-ನಿಮ್ಮೆಲ್ಲರ ಉತ್ತರವೂ ಹೌದಲ್ಲವೆ?

ಚೀನಾ-ಕೊರಿಯಾಗಳ ಮೇಲೆ ಯುದ್ಧಕ್ಕೆ ಅಮೆರಿಕದ ಸಿದ್ಧತೆ?

ಜಪಾನಿ ಯುದ್ಧ ಮಸೂದೆಗಳಿಗೆ ಅಸ್ತು

ಕಳೆದ ಬಾರಿ ಮಹಾಯುದ್ಧ ಆರಂಭಿಸಿದ್ದು ಜಪಾನು ಮತ್ತು ಜರ್ಮನಿಯ ಯುದ್ಧಕೋರ ಆಳುವವರ್ಗಗಳು. ಎರಡನೇ ಮಹಾಯುದ್ಧದಲ್ಲಿ ಕಂಡರಿಯದ ಕೇಳರಿಯದ ಸಂಕಷ್ಟ ಅನುಭವಿಸಿದ ಈ ಎರಡು ದೇಶಗಳ ಶಾಂತಿಪ್ರಿಯ ಜನತೆ ಯುದ್ಧವನ್ನು ಈ ಯುದ್ಧಕೋರರು ಪುನಃ ಆರಂಭಿಸದಂತೆ ಹಲವಾರು ನಿರ್ಬಂಧನೆಗಳನ್ನು ಹಾಕಿದ್ದರು. ಇತ್ತೀಚೆಗೆ ಕೆಲವೇ ತಿಂಗಳ ಅಂತರದಲ್ಲಿ ಆ ನಿರ್ಬಂಧಗಳು ಮುರಿದು ಬಿದ್ದಿವೆ. ಜರ್ಮನಿ 55 ವರ್ಷಗಳ ನಂತರ ಯುರೋಪಿನಲ್ಲಿ ಬೆಲ್‌ಗ್ರೇಡ್‌ನ ಮೇಲೆ ಬರ್ಬರ ವಿಮಾನದಾಳಿಯ ಮೂಲಕ ಪುನಃ ಯುದ್ಧ ಕಣಕ್ಕೆ ಇಳಿದಿದೆ. ಜಪಾನಿನಲ್ಲಿ ಅಮೆರಿಕದ ಜತೆ ಮಿಲಿಟರಿ ಸಹಕಾರದ ಹೆಸರಲ್ಲಿ ಚೀನಾ-ಕೋರಿಯಾಗಳ ಮೇಲೆ ಯುದ್ಧದಲ್ಲಿ ಭಾಗವಹಿಸುವ ಒಪ್ಪಂದಕ್ಕೆ ಅನುವು ಮಾಡಿಕೊಡುವ ಮಸೂದೆಯನ್ನು ಪಾರ್ಲಿಮೆಂಟು ಮಂಜೂರು ಮಾಡಿದೆ. ಇವೆರಡೂ ಸೇರಿ ವಿಶ್ವ ಶಾಂತಿಗೆ ಈ 54 ವರ್ಷಗಳಲ್ಲಿ ಒಡ್ಡಲಾಗಿರುವ ಅತ್ಯಂತ ದೊಡ್ಡ ಅಪಾಯ. ಜಪಾನಿನ 'ಯುದ್ಧ ಮಸೂದೆ'ಗಳ ಬಗ್ಗೆ ವಿವರಕ್ಕೆ ಮುಂದೆ ಓದಿ.

ಯುಗೋಸ್ಲಾವಿಯದ ಮೇಲೆ ನಾಟೋದ ಬಾಂಬ್ ದಾಳಿಯ ಭರಾಟೆಯಲ್ಲಿ, ಒಂದು ಗಂಭೀರ ಬೆಳವಣಿಗೆ ದೂರ ಪೂರ್ವದ ಜಪಾನಿನಲ್ಲಿ ನಡೆದು ಹೋಯಿತು. ಇದು ಅಂತರ್ರಾಷ್ಟ್ರೀಯ ಗಮನ ಸೆಳೆಯದೆ ಹೋಯಿತು. ಆದರೆ ಇದು 21ನೇ ಶತಮಾನದಲ್ಲಿ ಯುದ್ಧ, ಶಾಂತಿಯ ಬಗ್ಗೆ ಮಹತ್ವದ ಬೆಳವಣಿಗೆ. ಏಪ್ರಿಲ್ 27 ರಂದು ಜಪಾನಿನ ಪಾರ್ಲಿಮೆಂಟು(ಡಯಟ್) 50 ವರ್ಷಗಳ ನಂತರ ಆ ದೇಶದ ಸೈನ್ಯ ವಿದೇಶಗಳಲ್ಲಿ ಯುದ್ಧದಲ್ಲಿ ಪಾಲುಗೊಳ್ಳುವದಕ್ಕೆ ಅನುವು ಮಾಡಿಕೊಡುವ ಮೂರು ಮಸೂದೆಗಳನ್ನು ತೀವ್ರ ವಿರೋಧದ ನಡುವೆಯೂ ಮಂಜೂರು ಮಾಡಿತು.

ಯಾಕೆ ಇದು ಗಂಭೀರ ಬೆಳವಣಿಗೆ?

ಇದು ಯಾಕೆ ಅಷ್ಟು ಗಂಭೀರ ಬೆಳವಣಿಗೆ?

ಇಡೀ ವಿಶ್ವವನ್ನು ಎರಡನೇ ಮಹಾಯುದ್ಧಕ್ಕೆ ಮತ್ತು ಮಾನವ ಸಂಸ್ಕೃತಿಯ ವಿನಾಶದ ಅಂಚಿಗೆ ತಳ್ಳಿದ್ದರಲ್ಲಿ ಮಹತ್ವದ ಪಾತ್ರ ವಹಿಸಿದ್ದ ಎರಡು ದೇಶಗಳು - ಜರ್ಮನಿ ಮತ್ತು ಜಪಾನ್. ಈ ಎರಡೂ ದೇಶಗಳಲ್ಲೂ ಇಂತಹ ದುರಂತ ಮರುಕಳಿಸದಂತೆ ವಿದೇಶಗಳಲ್ಲಿ ಸೈನ್ಯ ಬಳಸುವುದರ ಬಗ್ಗೆ ಕಟ್ಟುನಿಟ್ಟಿನ ಕಾನೂನುಗಳಿವೆ. ಎರಡನೇ ಮಹಾಯುದ್ಧ ಮತ್ತು ಆ ಮೊದಲು ಈ ಎರಡು ದೇಶದ ಆಳುವ ವರ್ಗಗಳಲ್ಲಿ ಮಿಲಿಟರಿ ವಾದ ಎಷ್ಟು ಗಟ್ಟಿಯಾಗಿತ್ತೋ, ಆ ನಂತರ ಈ ದೇಶಗಳಲ್ಲಿ ದುಡಿಯುವ ಜನರಲ್ಲಿ ಶಾಂತಿ ಬಗ್ಗೆ ಕಳಕಳಿ, ಪ್ರಜ್ಞೆ, ಅಷ್ಟೇ ಗಟ್ಟಿಯಾಗಿತ್ತು. ಈ ಎರಡು ದೇಶಗಳ ಸಾಮಾನ್ಯ ಜನತೆಯಷ್ಟು ಯುದ್ಧ ದುಷ್ಪರಿಣಾಮಗಳನ್ನು ಇನ್ನಾರು ಬಲ್ಲರು? ಜಪಾನಿನಲ್ಲಿ ಯುದ್ಧ ಮಸೂದೆಗಳ ಮಂಜೂರಾತಿಯೊಂದಿಗೆ, ಈ ಎರಡೂ ದೇಶಗಳಲ್ಲೂ ಆಳುವ ವರ್ಗಗಳ ಯುದ್ಧಕೋರತನಕ್ಕೆ ಇದ್ದ ಕಟ್ಟುಪಾಡುಗಳು ಹೆಚ್ಚು ಕಡಿಮೆ ಇಲ್ಲವಾಗಿದೆ. ಇತ್ತೀಚೆಗಷ್ಟೆ ಜರ್ಮನಿಯ ಸೈನ್ಯ 50 ವರ್ಷಗಳ ನಂತರ ಮೊದಲಬಾರಿಗೆ ವಿದೇಶವೊಂದರಲ್ಲಿ ದೊಡ್ಡ ಮಿಲಿಟರಿ ಕಾರ್ಯಾಚರಣೆಯಲ್ಲಿ ಭಾಗವಹಿಸಿತು. ಯುಗೋಸ್ಲಾವಿಯದ ರಾಜಧಾನಿ ಬೆಲ್‌ಗ್ರೇಡ್ ಮೇಲೆ 1944 ರ ಬರ್ಬರ ವಿಮಾನ ದಾಳಿ ಮರುಕಳಿಸಿತ್ತು. ಇದು ಈಗಾಗಲೇ ಯುರೋಪಿನ, ಏಕೆ ಇಡೀ ಜಗತ್ತಿನ ಶಾಂತಿಪ್ರಿಯರ ನಿದ್ದೆ ಕೆಡಿಸಿತ್ತು. ಇದರ ಬೆನ್ನಿಗೆ ಜಪಾನಿನ ಆಳುವ ವರ್ಗಗಳ ಮೇಲೆ ಇದ್ದ ಶಾಂತಿಪರ ನಿಯಂತ್ರಣಗಳು ಕಳಚಿ ಬಿದ್ದದ್ದು ಗಂಭೀರ ಬೆಳವಣಿಗೆ ಅಲ್ಲವೇ? ಚೀನಾ ಮತ್ತು ದಕ್ಷಿಣ ಪೂರ್ವದ ಏಶ್ಯಾಗಳ ದೇಶಗಳಲ್ಲಿ ಎರಡನೇ ಮಹಾಯುದ್ಧದ ಕಾಲದಲ್ಲಿ ತೋರಿದ ಜಪಾನಿನ ಮಿಲಿಟರಿ ಬರ್ಬರತೆಗೆ ಈಗಲೂ ಜನ ನಡುಗುತ್ತಾರೆ. ಈದೇಶಗಳ ಜನತೆ ಜಪಾನನ್ನು ಅದರ ಮಿಲಿಟರಿ ಬರ್ಬರತೆಗೆ ಈಗಲೂ ದ್ವೇಷಿಸುತ್ತಾರೆ. ಅಲ್ಲದೆ ಜಪಾನ್‌ನ ಶಾಂತಿಪ್ರಿಯ ಜನತೆ ಹಿರೋಶಿಮಾ-ನಾಗಸಾಕಿಗಳ ರಣಯುದ್ಧದ ವಿನಾಶದ ನಂತರ ಸಂವಿಧಾನದಲ್ಲಿ ಕಟ್ಟುನಿಟ್ಟಿನ ಯುದ್ಧ-ವಿರೋಧಿ ಅಂಶಗಳನ್ನು ಸೇರಿದ್ದರು. ಈಗ ಮಂಜೂರಾಗಿರುವ ಮಸೂದೆಗಳು ಅವನ್ನೆಲ್ಲಾ ಬುಡಮೇಲು ಮಾಡಿದೆ. ಇದರರ್ಥ ಈಗ ಜಪಾನಿನ ನಾಗರೀಕರು ಮೊದಲಿನಂತೆ ಅಲ್ಲ ಶಾಂತಿಪ್ರಿಯರಾಗಿಲ್ಲವೇ? ಅಲ್ಲ, ಅಲ್ಲಿನ ಆಳುವ ವರ್ಗಕ್ಕೆ ಶಾಂತಿಪ್ರಿಯ ಜನರ ಆಶಯಗಳನ್ನು ಉಲ್ಲಂಘಿಸುವ ಧೈರ್ಯ ಬಂದಿದೆ. ಒಂದು ಸಮೀಕ್ಷೆಯ ಪ್ರಕಾರ ಶೇಕಡಾ 53 ಜನ ಈ ಮೂರು ಮಸೂದೆಗಳು ಅಪಾಯಕಾರಿ ಮಾತ್ರವಲ್ಲ ಸಂವಿಧಾನ-ವಿರೋಧಿ ಎಂದು ಅಭಿಪ್ರಾಯ ಪಡುತ್ತಾರೆ. ಶೇಕಡಾ 24 ಜನ ಮಾತ್ರ ಈ ಮಸೂದೆಯನ್ನು ಬೆಂಬಲಿಸುತ್ತಾರೆ. ಉಳಿದವರು ಅದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲಿಲ್ಲ. ಅಂದರೆ ಮಸೂದೆಗೆ ಬೆಂಬಲ ಕೊಡುವವರು ಕಾಲು ಭಾಗ ಮಾತ್ರ.

ಈ ಮಸೂದೆಗಳ ಉದ್ದೇಶ ಏನು?

ಎರಡನೇ ಮಹಾಯುದ್ಧದ ನಂತರ ಅಂಗಿಕರಿಸಿದ ಸಂವಿಧಾನದ ಪ್ರಕಾರ ಜಪಾನ್ ಬೇರೆ ದೇಶಗಳಲ್ಲಿ ಯುದ್ಧದಲ್ಲಿ ಭಾಗವಹಿಸುವಂತಿಲ್ಲ. ಜಪಾನಿನ ಸೈನ್ಯ ಸ್ವ-ರಕ್ಷಣೆಗೆ ಮಾತ್ರ ಸೀಮಿತ. ಈ ಮಸೂದೆಗಳ ಪ್ರಕಾರ ಜಪಾನ್‌ನ ಸರ್ಕಾರ ಜಪಾನಿನ 'ಸುತ್ತಮುತ್ತಲ ಪ್ರದೇಶ'ಗಳಲ್ಲಿ ಅಗತ್ಯ ಬಿದ್ದರೆ ಅಮೆರಿಕದ ಸೈನ್ಯಕ್ಕೆ ಮಿಲಿಟರಿ ಬೆಂಬಲ ನೀಡಲು ಅನುಮತಿ ಇರುತ್ತದೆ. ಇದಕ್ಕೆ ಜಪಾನ್ ಸರ್ಕಾರ ಇಟ್ಟಿರುವ ಹೆಸರು 'ಅಮೆರಿಕ-ಜಪಾನ್ ಮಿಲಿಟರಿ ಸಹಕಾರಕ್ಕೆ ಮಾರ್ಗಸೂತ್ರಗಳು' ಅಂತ - ಸತ್ಯ ಮುಚ್ಚಿಡಲು. ಆದರೆ ಜನ ಇವನ್ನು ಕರೆಯುವುದು ಯುದ್ಧ ಮಸೂದೆಗಳು ಅಂತ. ಮಿಲಿಟರಿ ಬೆಂಬಲ ನೀಡುವ ನಿರ್ಧಾರ ಕೈಗೊಳ್ಳಲು, ಜಪಾನಿನ ರಕ್ಷಣೆಗೆ ಅಪಾಯ ಪರಿಸ್ಥಿತಿ ಸಹ ಇರಬೇಕಾಗಿಲ್ಲ. ಅಲ್ಲದೆ 'ಸುತ್ತಮುತ್ತಲ ಪ್ರದೇಶ'ಗಳು ಯಾವುವು ಎಂದು ನಿರ್ದಿಷ್ಟವಾಗಿ ಹೇಳದೆ ಅಸ್ಪಷ್ಟವಾಗಿ ಬಿಡಲಾಗಿದೆ. ಮಿಲಿಟರಿ ವಿಶೇಷಜ್ಞರ ಪ್ರಕಾರ ಇದು ಚೀನಾ ಮತ್ತು ಉತ್ತರ ಕೋರಿಯಾದ ವಿರುದ್ಧ ಅಮೆರಿಕದ ಯುದ್ಧ ಕಾರ್ಯಾಚರಣೆಗೆ ಸಂಬಂಧಿಸಿದ್ದು ಎನ್ನಲಾಗಿದೆ. ಅಂದರೆ ಸದ್ಯದಲ್ಲೇ ಉತ್ತರ ಕೊರಿಯಾ ಮತ್ತು ದಕ್ಷಿಣ ಕೊರಿಯಾದ ನಡುವೆ ಚೀನಾ ಮತ್ತು ತೈವಾನ್‌ಗಳ ನಡುವೆ ಇರುವ ವಿವಾದಗಳನ್ನು ಮಿಲಿಟರಿ ಘರ್ಷಣೆಯಾಗಿ ಪ್ರಚೋದಿಸಲು ಅಮೆರಿಕ ಉದ್ದೇಶಿಸಿದೆ. ಅಂತಹ ಸಂದರ್ಭಕ್ಕೆ ಅಮೆರಿಕ ಮಿಲಿಟರಿ ಸಿದ್ಧತೆ ನಡೆಸಿದೆ.

ಪಾರ್ಲಿಮೆಂಟು ಚರ್ಚೆ

ಪಾರ್ಲಿಮೆಂಟಿನಲ್ಲಿ ಈ ಯುದ್ಧ ಮಸೂದೆಗಳ ಬಗ್ಗೆ. ನಡೆದ ಚರ್ಚೆಯಲ್ಲಿ ಜಪಾನಿ ಕಮ್ಯುನಿಸ್ಟ್ ಪಕ್ಷ ಮತ್ತು ಸೋಶಲಿಸ್ಟ್ ಪಕ್ಷ ಮಾತ್ರ ವಿರೋಧಿಸಿದವು. ಇತರ ಎಲ್ಲಾ ಪಕ್ಷಗಳು ಮಸೂದೆಯನ್ನು ಬೆಂಬಲಿಸಿದವು. ಕಮ್ಯುನಿಸ್ಟ್ ಮತ್ತು ಸೋಶಲಿಸ್ಟ್ ಪಕ್ಷಗಳು ಈ ಮಸೂದೆಯ ಮಂಜೂರಾತಿಗೆ ತೀವ್ರ ಪ್ರತಿರೋಧ ಒಡ್ಡಿದ್ದವು. ಯುದ್ಧ ಮಸೂದೆಗಳಲ್ಲಿ ಗಮನಾರ್ಹ ತಿದ್ದುಪಡಿ ಮಾಡಲು ಪ್ರಯತ್ನಿಸಿದವು.

ವಿರೋಧ ಪಕ್ಷಗಳ ಜನ-ವಿರೋಧವನ್ನು ಮೆತ್ತಗೆ ಮಾಡಲು ಸರ್ಕಾರ ಎಲ್ಲಾ ರೀತಿಯ ಮೋಸದ ತಂತ್ರಗಳು, ಸುಳ್ಳುಗಳನ್ನು ಬಳಸಿತು. ಈ ಮಸೂದೆ ಅಮೆರಿಕದ ಮಿಲಿಟರಿ ಕಾರ್ಯಾಚರಣೆಗೆ ಬೆಂಬಲಕ್ಕೆ ಮಾತ್ರ. ಜಪಾನಿನ ಸೈನ್ಯ ಸ್ವತಃ ಮಿಲಿಟರಿ ದಾಳಿಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿ ಜಾರಿಕೊಳ್ಳಲು ಯತ್ನಿಸಿತು. ಜಪಾನ್‌ನ ರಕ್ಷಣೆಗೆ ಧಕ್ಕೆ ಇಲ್ಲವಾದರೆ ಅಮೆರಿಕದ ಕಾರ್ಯಾಚರಣೆಗೆ ಯಾಕೆ ಬೆಂಬಲ ಕೊಡಬೇಕು? ಅಮೆರಿಕದ ಮಿಲಿಟರಿ ದಾಳಿಯಲ್ಲಿ ಜಪಾನ್ ಭಾಗವಹಿಸುತ್ತದೋ ಅಥವಾ ಮಿಲಿಟರಿ ಬೆಂಬಲ ಮಾತ್ರ ಕೊಡುತ್ತದೋ, ದಾಳಿಗೆ ಒಳಗಾದ ದೇಶ ಜಪಾನಿನ ಮೇಲೆ ಪ್ರತಿದಾಳಿ ಮಾಡುವುದಂತೂ ಖಚಿತ. ಇದರ ಅಗತ್ಯವೇನು? ಎಂದು ಕಮ್ಯುನಿಸ್ಟ್ ಸದಸ್ಯರ ತೀಕ್ಷ್ಣ ಪ್ರಶ್ನೆಗೆ ಸರಕಾರ ಮತ್ತು ಮಸೂದೆಯ ಬೆಂಬಲಿಗರಲ್ಲಿ ಉತ್ತರವಿರಲಿಲ್ಲ.

ಚೀನಾದ ಜತೆ

ಅನಗತ್ಯ ತಿಕ್ಕಾಟಕ್ಕೆ ದಾರಿ

'ಜಪಾನಿನ ಸುತ್ತಮುತ್ತಲ ಪ್ರದೇಶ'ಗಳಿಂದ ತೈವಾನನ್ನು ಕೈಬಿಡುವ ಸಲಹೆಯನ್ನು ಕಮ್ಯುನಿಸ್ಟ್ ಸದಸ್ಯರು ಒತ್ತಾಯಿಸಿದರು. ಆ ಮೂಲಕ ಚೀನಾ-ಜಪಾನ್ ಸಂಬಂಧ ಹದಗೆಡುವುದನ್ನು ತಪ್ಪಿಸಬಹುದೆಂದು ಸಲಹೆ ಮಾಡಿದರು. 'ಪ್ರದೇಶಗಳನ್ನು' ನಿರ್ದಿಷ್ಟಗೊಳಿಸದಿದ್ದರೆ ನೆರೆಹೊರೆಯ ಎಲ್ಲಾ ದೇಶಗಳಲ್ಲಿ ಮಸೂದೆ ತನ್ನ ವಿರುದ್ಧವೇ ಎಂದು ಭಾವಿಸಿ ಇಡೀ ಪ್ರದೇಶದಲ್ಲಿ ಶಸ್ತ್ರಾಸ್ತ್ರ-ಪೈಪೋಟಿ, ಪರಸ್ಪರ ಅಪನಂಬಿಕೆ, ತಿಕ್ಕಾಟಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಕಮ್ಯುನಿಸ್ಟ್ ಸದಸ್ಯರು ಎಚ್ಚರಿಕೆ ನೀಡಿದರು. ಅದರಲ್ಲೂ ಅತ್ಯಂತ ದೊಡ್ಡ, ಪ್ರಮುಖ, ಬಲಿಷ್ಟ ನೆರೆಯ ದೇಶವಾದ ಚೀನಾ ಈ ಮಸೂದೆಯನ್ನು 'ಮಿತ್ರತ್ವ ಕುಲಗೆಡಿಸುವ' ಕ್ರಮವಾಗಿ ಭಾವಿಸುವುದು ಎಂಬ ಎಚ್ಚರಿಕೆಗೆ ಸರ್ಕಾರ ಕಿವಿಗೊಡಲಿಲ್ಲ.

ಅಮೆರಿಕ ಇತ್ತೀಚೆಗೆ ಯಾವಾಗಲೂ ಅಂತರ್ರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸಿ ತನ್ನ ರಾಜಕೀಯ ಉದ್ದೇಶಗಳಿಗನುಸಾರವಾಗಿ ಮಿಲಿಟರಿ ಕಾರ್ಯಾಚರಣೆಯಲ್ಲಿ ತೊಡಗುತ್ತವೆ. ಯುಗೋಸ್ಲಾವಿಯಾ ಇತ್ತೀಚಿನ ಉದಾಹರಣೆ. ಇಂತಹ ದೇಶದ ಜತೆ ಜಪಾನಿನಂತಹ ದೇಶ ಮಿಲಿಟರಿ ಒಪ್ಪಂದಕ್ಕೆ ಹೋಗುವುದು ವಿಶ್ವಶಾಂತಿಗೆ ಧಕ್ಕೆ. ಜಪಾನಿನ ಘೋಷಿತ ನೀತಿಗೆ, ಸಂವಿಧಾನಕ್ಕೆ ವಿರೋಧ. ಈ ಎಚ್ಚರಿಕೆಗೆ ಅಪಾರ ಜನ ಬೆಂಬಲವಿದ್ದರೂ ಸರ್ಕಾರ ಕಿವಿಗೊಡಲಿಲ್ಲ.

ಮಸೂದೆಯ ಪ್ರಕಾರ ಜಪಾನಿನ ಸೈನ್ಯವಲ್ಲದೆ, 'ಯುದ್ಧ ಕಾರ್ಯಾಚರಣೆಗೆ' ಸ್ಥಳೀಯ ಪ್ರಾಂತೀಯ ಸರ್ಕಾರಗಳು, ನಾಗರೀಕರನ್ನು ಆಣಿನೆರೆಸಲು ಅವಕಾಶವಿದೆ. ಇದು ಜನರ ಅನುಮತಿ ಇಲ್ಲದೆ ಅವರನ್ನು ಯುದ್ಧಕ್ಕೆಳೆದಂತೆ. ಈ ಅವಕಾಶವನ್ನು ಮಸೂದೆಯಲ್ಲಿ ಮೊಟಕುಗೊಳಿಸಬೇಕು-ಎಂದು ಕಮುನಿಸ್ಟ್ ಸದಸ್ಯರು ಒತ್ತಾಯಿಸಿದರು. ಸ್ಥಳೀಯ ಸರ್ಕಾರಗಳು, ನಾಗರೀಕರನ್ನು ಯುದ್ಧಕಾರ್ಯಗಳಲ್ಲಿ ಭಾಗವಹಿಸಲು ಒತ್ತಾಯಿಸುವುದಿಲ್ಲ, ಅವರು ಬೇಕಾದರೆ ಭಾಗವಹಿಸಬಹುದು ಎಂದು ಸರ್ಕಾರ ನುಣುಚಿಕೊಳ್ಳಲು ಪ್ರಯತ್ನಿಸಿತು. ಮಸೂದೆಗಳಿಗೆ ಕೆಲವು ತಿದ್ದುಪಡಿಗಳನ್ನು ಸರ್ಕಾರ ಒಪ್ಪಿಕೊಂಡರೂ, ಅವುಗಳ ಮೂಲಭೂತ, ಶಾಂತಿ-ವಿರೋಧಿ ಯುದ್ಧಕೋರ ನೀತಿಯ ಸ್ವರೂಪ ಬದಲಾಗಲಿಲ್ಲ.

ಮಸೂದೆಗಳಿಗೆ ವ್ಯಾಪಕ ಜನವಿರೋಧ

ಮಸೂದೆಗಳನ್ನು ಸರ್ಕಾರ ಪಾರ್ಲಿಮೆಂಟಿನಲ್ಲಿ ಮಂಡಿಸಿದ ಕೂಡಲೇ ಅವುಗಳಿಗೆ ವ್ಯಾಪಕ ಜನವಿರೋಧ ವ್ಯಕ್ತವಾಗಿವೆ. ಮಸೂದೆಗಳಿಗೆ ಪಾರ್ಲಿಮೆಂಟು ಅಸ್ತುಕೊಟ್ಟರೂ ಜನವಿರೋಧ ಮುಂದುವರಿದಿದೆ. ಮಹಿಳೆಯರು ಈ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದಾರೆ. ಮಹಿಳಾ ಸಂಘಟನೆಗಳು, ಯುವ ಸಂಘಟನೆಗಳು, ಹಲವಾರು ಕೇಂದ್ರೀಯ ಟ್ರೇಡ್ ಯೂನಿಯನ್‌ಗಳು, ಚರ್ಚ್ ಸಂಘಟನೆಗಳು, ಇತರ ಧಾರ್ಮಿಕ ಸಂಘಟನೆಗಳು ಈ ಚಳುವಳಿಯಲ್ಲಿ ಭಾಗವಹಿಸಿವೆ. ಮಸೂದೆಗಳನ್ನು ಬೀದಿಗಳಲ್ಲಿ, ಪಾರ್ಲಿಮೆಂಟಿನಲ್ಲಿ ವಿರೋಧಿಸಲು ರಾಷ್ಟ್ರೀಯ ಮಂಡಳಿಯೊಂದನ್ನು ಅವು ರಚಿಸಿಕೊಂಡಿದ್ದವು. ಈ ಮಂಡಳಿಗೆ ಕಮ್ಯುನಿಸ್ಟ್ ಪಕ್ಷ ಮತ್ತು ಸೋಶಲಿಸ್ಟ್ ಪಕ್ಷ ತನ್ನ ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದವು. ಈ ಎಲ್ಲಾ ಚಳುವಳಿಗಳಲ್ಲಿ ಭಾಗವಹಿಸಿದವರ ಮನಸ್ಸಿನಲ್ಲಿ ಕಮ್ಯುನಿಸ್ಟ್ ಪಕ್ಷ ಶಾಂತಿಪರ ಯುದ್ಧವಿರೋಧಿ ರಾಜಿ ಇಲ್ಲದ ನೀತಿಗಳಿಗೆ ಇನ್ನೊಂದು ಹೆಸರಾಗಿ ದಾಖಲಾಗಿದೆ.

ಏಪ್ರಿಲ್ 27 ಮಸೂದೆಗಳು ಪಾರ್ಲಿಮೆಂಟಿನಲ್ಲಿ ಮಂಜೂರಾಗಿದ್ದರೂ, ಏಪ್ರಿಲ್ 12 ರಿಂದಲೇ ಪ್ರತಿದಿನ ಪಾರ್ಲಿಮೆಂಟಿನ ಮುಂದೆ ಧರಣಿ, ರ್‍ಯಾಲಿಗಳು ನಡೆಯುತ್ತಿಲಿದ್ದವು. ಏಪ್ರಿಲ್ 27 ರಂದು ಸಾವಿರಾರು ಜನ ನೆರೆದಿದ್ದರು. ಹಲವು ನೂರು ಜನರು ಧರಣಿ ಕೂತಿದ್ದರು.

ಈ ಜನ ಸಂಘಟನೆಗಳ ಚಳುವಳಿ, ವಿರೋಧ, ಪ್ರತಿಭಟನಾ ರ್‍ಯಾಲಿಗಳು, ಈ ಮಸೂದೆಗಳನ್ನು ಹಿಂತೆಗೆದುಕೊಳ್ಳುವವರೆಗೆ ಮುಂದುವರಿಯಲಿವೆ. ವಿಶ್ವಶಾಂತಿಗೆ ಮಾರಕವಾದ ಈ ಮಸೂದೆಗಳ ವಿರುದ್ಧ ಜಪಾನಿನ ಜನ ಈ ರೀತಿ ಎಚ್ಚರದಿಂದ ಎರಗಿರುವುದು 21 ನೇ ಶತಮಾನದ ಶಾಂತಿಯ ಭರವಸೆ ಮೂಡಿಸುವ ಶುಭಸೂಚಕ. ○

ಇ.ಎಂ.ಎಸ್. ಭವನ ನಿಧಿ



ಒಟ್ಟು ಮೊತ್ತ — ರೂ. 13,85,110.50

ವೆಲ್ ಕ್ಯಾಸ್ಟ್ ಎಂಪ್ಲಾಯಿಸ್ ಯೂನಿಯನ್- ಬೆಂಗಳೂರು 3500
ಹೆಚ್. ಎ.ಎಲ್ ಶಾಖೆ . ಬೆಂಗಳೂರು.
ಕೆ.ಎಲ್. ಸೈಮನ್ ಮೂಲಕ 15000
ಎನ್. ಕೆ. ಉಪಾಧ್ಯಾಯರ ಮೂಲಕ ಸಂಗ್ರಹ :
ವೆಂಕಟೇಶ್ವರ ಆಯಿಲ್ ಇಂಡಸ್ಟ್ರೀಸ್ ಬಿಜಾಪುರ 250
ಎಸ್. ಬಿ. ಶಿರೋಡಕರ, ಬಿಜಾಪುರ 500
ಬಿಜಾಪುರ ಜಿಲ್ಲ ಆರೋಗ್ಯ ನೌಕರರ ಸಂಘ 1000
ನಾಗೇಶ್ವರ- ಮೈಕೋ- ನಾಗನಾಥಪುರ 1000
ಹೆಚ್. ಕುಮಾರ ಸ್ವಾಮಿ- ಮೈಕೋ- ನಾಗನಾಥಪುರ 100
ಗಂಗಾರಮೇಶ-ಶರತ್ ಕೇಬಲ್ ನೆಟ್‌ವರ್ಕ್ ಶಾರದಾ ನಗರ ಬೆಂಗಳೂರು 100
ಜಿ. ಸಿದ್ದೇಗೌಡ ಎಸ್.ಆರ್.ಎಸ್ ಮಾರುತಿ ಸರ್ವಿಸ್ ತುಮಕೂರು 100
ಜಿ. ಕಾಶಿನಾಥ್ ಎಸ್.ಆರ್. ಎಸ್ ಮೋಟರ್. ತುಮಕೂರು 100
ಆರ್. ಗಂಗಾಧರ್ ಮಾಂಡವಿ ಮೋಟರ್ಸ್. ಬೆಂಗಳೂರು 100
ಜಗದೀಶ ಬಾಬು ಆರ್.ಎಲ್ ಬ್ರಿಟಿಷ್ ಬಯಾಲಿಜಿಕಲ್ಸ್ ಬೆಂಗಳೂರು 100
ಪರುಶರಾಮಹೆಚ್. ಎನ್. ಹೋರೇಕಲ್ಲು ತುಮಕೂರು 100
ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಮೂಲಕ
ಜೆ.ಎನ್ ಬಾದಾಮಿ ಎಲ್.ಐ.ಸಿರನಹಳ್ಳಿ 500
ಎಂ.ಆರ್.ಹೀರೆಮಠ
ಕೆನರಾ ಬ್ಯಾಂಕ್ ದಾವಣಗೆರೆ 300
ಶಿವನ ಕೆರೆ ಬಸವಲಿಂಗಪ್ಪ ದಾವಣಗೆರೆ 250
ಡಿ.ಯೂಕೂಬ್ ಎಲ್.ಐ.ಸಿ ದಾವಣಗೆರೆ 200
ಕೃಷ್ಣ ನಾಯರ್ ಕೆ.ಆರ್ ದಾವಣಗೆರೆ 100
ಕೆ.ಬಿ.ಡಿ ಶರ್ಮ ದಾವಣಗೆರೆ 100
ಶ್ರೀನಿವ್ವಾಸ ಪ್ರಕಾಶ್ ಜೋಷಿ ದಾವಣಗೆರೆ 50
ಜೆ.ಲತಾ. ದಾವಣಗೆರೆ 50
ಎಸ್.ಎಫ್.ಐ ಗುಲ್ಬರ್ಗಾ ಜಿಲ್ಲಾ ಸಮಿತಿ ಸಂಗ್ರಹ:
ಈಶ್ವರ್ ರೋಜಾ ಸುರಪುರ 20
ಮಲ್ಲಿಕಾರ್ಜುನ ಮಾನ್ಪಡೆ ಶತಪುರ 50
ಗಂಗಾಧರ ಬಿ. ಗುಲ್ಬರ್ಗಾ 11
ಮೈಸೂರು ಜಯರಾಮ್ ರವರಿಂದ
ವಿಕ್ರಾಂತ್ ಟೈರ್ಸ್ ರೇಡಿಯಲ್ ಸ್ಥಾವರದ
ಕೆ. ಶೇಖರಪ್ಪ 100
ಕೆ. ಭರಮನ ಗೌಡ 100
ಎಂ.ಬಿ.ಕೃಷ್ಣಪ 100
ಮುಖ್ಯ ಸ್ಥಾವರದ
ಜವರೇ ಗೌಡ 100
ದೇವರಾಜು 25
ಕೆ.ಶಿವಪ್ಪ 50
ರಾಮು ಎಂ.ನ್ 100
ಕೆ.ಕೆ. ರಾಘವ 50
ಎಂ. ಶ್ರೀದರ 50
ಡ್ರೈವರ್ ಕೃಷ್ಣಪ್ಪ 25
ಸಿ. ಮಹದೇವಪ್ಪ 50
ಎಸ್.ಎನ್. ಅಲ್ಲಿ 20
ಟಿ. ನರಸಿಂಹ 50
ಮಂಜುನಾಥ್ 50

ಒಟ್ಟು ಮೊತ್ತ — ರೂ.14,09,567.50

ಎ.ಕೆ.47- ಯಾವ ಸಂದೇಶ ಸಾರುವ ಪ್ರಯತ್ನ



ಚಿತ್ರದ ಕಟೌಟ್‌ಮುಂದೆ ನಿರ್ಮಾಪಕ ರಾಮು

ಈಗ ಕಾರ್ಗಿಲ್‌ನಲ್ಲಿ ನಡೆಯುತ್ತಿರುವ ಯುದ್ಧ, ಮುಂಬರಲಿರುವ ಲೋಕಸಭೆ, ವಿಧಾನಸಭಾ ಚುನಾವಣೆಗಳು ಈ ಸಂದರ್ಭದಲ್ಲಿ ಎ.ಕೆ.47 ತೆರೆಕಂಡಿದೆ. ಬಹುತೇಕ ಯುವಕರನ್ನು ಸೆಳೆಯುತ್ತಿದೆ. ಕನ್ನಡದ ಪತ್ರಿಕೆಗಳು ಭಾರೀ ಪ್ರಚಾರ ನೀಡಿದ ಈ ಚಿತ್ರವನ್ನು ಕುತೂಹಲದಿಂದ ನೋಡಿದಾಗ ಮೇಲುನೋಟಕ್ಕೆ ಇತರೆ ಚಿತ್ರಗಳಂತೆಯೇ ನಾಯಕನೊಬ್ಬನೇ ಶತ್ರುಗಳೆಲ್ಲರನ್ನು ಸದೆಬಡಿಯುವ, ಅನಗತ್ಯ ದುಂದುವೆಚ್ಚ ಮಾಡಿದ ಭಾರೀ ಅದ್ದೂರಿ ಚಿತ್ರವಾಗಿ ಕಂಡು ಬರುತ್ತದೆ. ಆದರೆ ಚಿತ್ರಕಥೆಯನ್ನು, ಸಂಭಾಷಣೆಗಳನ್ನು, ಪಾತ್ರಗಳನ್ನು ಪರಿಶೀಲಿಸಿದಾಗ ಚಿತ್ರದ ಉದ್ದೇಶ ಸ್ಪಷ್ಟವಾಗುತ್ತದೆ.

'ರಾಮ್' ಒಂದು ಬ್ರಾಹ್ಮಣ ಕುಟುಂಬದ ಯುವಕ. ಅನ್ಯಾಯವನ್ನು ಕಂಡಾಗ ಪ್ರತಿಭಟಿಸುವ ಇವನ ವರ್ತನೆ ತಂದೆಗೆ ಹಿಡಿಸದು. ಓದಿ ಉತ್ತಮ ಪ್ರಜೆಯಾಗಬೇಕೇ ಹೊರತು ಮಗ ಬೀದಿಗಿಳಿಯಬಾರದು ಎಂಬುದು ಅವರ ನಿಲುವು.(ಉತ್ತಮ ಪ್ರಜೆ ಎಂದರೆ ಯಾರು? ಹೇಗಿರಬೇಕು?. 'ತಮ್ಮ ಕೆಲಸ ತಾವು ನೋಡಿಕೊಂಡು, ತಮ್ಮ ಸುತ್ತಮುತ್ತಲಿನ ಆಗುಹೋಗುಗಳಿಗೆ ಕಿವಿಗೊಡನೆ ಮನೆಯಲ್ಲಿಯೇ ಕೂರಬೇಕು, ಪ್ರಾಮಾಣಿಕನಾಗಿರಬೇಕು' ಎಂಬ ಮಧ್ಯಮವರ್ಗದ ಕಲ್ಪನೆಯನ್ನು ಮಗನ ಮೇಲೆ ಹೇರುವ ತಂದೆ ತಾಯಿಗಳು)

ನಾಯಕನ ತಂದೆಗೆ ಬಾಂಬೆಗೆ ವರ್ಗವಾಗಿ ಅವರು ಕುಟುಂಬಸಮೇತ ಬಾಂಬೆಗೆ ಬರುತ್ತಾರೆ. ಇವರು ಬರುವ ಹೊತ್ತಿಗಾಗಲೇ 'ದಾವೂದ್'ನ ಧಾಳಿಗಳಿಂದ ಬಾಂಬೆ ಹೊತ್ತಿಉರಿಯುತ್ತಿರುತ್ತದೆ. ಉದ್ಯಮಿಗಳ ಹತ್ಯೆ, ಹಲವಾರು ಕಡೆ ಬಾಂಬ್ ಸ್ಫೋಟ ಇತ್ಯಾದಿ. ದಾವೂದ್‌ನನ್ನು ಮಟ್ಟಹಾಕಲು ಒಬ್ಬ ಪೋಲೀಸ್ ಅಧಿಕಾರಿ 'ಯಶವಂತ ಸಿನ್ಹಾ'(ಓಂಪುರಿ) ಸಜ್ಜಾಗಿರುತ್ತಾನೆ. ದಾವೂದ್‌ನಿಂದ ಈ ಅಧಿಕಾರಿಯ ಹತ್ಯೆಯಾಗುತ್ತದೆ. ಚಿತ್ರದ ನಾಯಕ 'ರಾಮ್' ಪೋಲೀಸ್ ಅಧಿಕಾರಿಯ ಹತ್ಯೆಯ ಆರೋಪಕ್ಕೆ ಗುರಿಯಾಗುತ್ತಾನೆ. ತನ್ನ ಸತ್ಯಸಂಧತೆಯನ್ನು ಸಾಬೀತುಪಡಿಸಲು 'ದಾವೂದ್' ನೊಂದಿಗೆ ಸೆಣೆಸಾಡುವ ಪ್ರಸಂಗ ಬರುತ್ತದೆ. ಮತ್ತು ಅವನು ಯಾರ ಸಹಾಯವೂ ಇಲ್ಲದೆ ದಾವೂದ್‌ನನ್ನು ಸದೆಬಡಿಯುತ್ತಾನೆ ಕೂಡ.

ಇಲ್ಲಿ ದಾವೂದ್‌ನ ವಿರುದ್ಧ ಹೋರಾಡಲು ಬ್ರಾಹ್ಮಣ ಕುಟುಂಬದ 'ರಾಮ'ನೇ ಏಕೆ? ಹಿಂದುಳಿದ ಜಾತಿಯವನೊಬ್ಬ ಏಕಾಗಲಿಲ್ಲ? ಮತ್ತು ಪದೆ ಪದೇ 'ಇದು ರಾಮಜನ್ಮಭೂಮಿ' ಎನ್ನುವ ಮಾತು ಏಕೆ? ದಾವೂದ್, ಐ.ಎಸ್.ಐ. ಹಾಗೂ ರಾಮಜನ್ಮಭೂಮಿಯ ಪ್ರಸ್ತಾಪ ಸ್ಪಷ್ಟವಾಗಿ ಹಿಂದು ಮತಾಂಧತೆಯ ಪರವಾದ ಧೋರಣೆಯನ್ನು ಪ್ರತಿಬಿಂಬಿಸುತ್ತದೆ.

ಬಾಬರಿ ಮಸೀದಿಯ ಧ್ವಂಸದ ನಂತರ ಅದರ ಪ್ರತಿಧ್ವನಿಯಾಗಿ ಈ ಗಲಭೆ, ಹತ್ಯಾಕಾಂಡಗಳು ನಡೆದರೂ ಬಾಂಬೆ ಹೊತ್ತಿಉರಿಯಲು ದಾವೂದ್‌ನ ಜೊತೆಗೆ 'ಶಿವಸೇನೆ'ಯ ಪಾತ್ರವೂ ದೊಡ್ಡದಿದೆ. 'ಶ್ರೀ ಕೃಷ್ಣ ಆಯೋಗ'ವು ಬಾಂಬೆಯ ಹತ್ಯಾಕಾಂಡಗಳಿಗೆ 'ಶಿವಸೇನೆ'ಯೇ ನೇರ ಹೊಣೆ ಎಂದು ಹೇಳಿದೆ. ಸಂಘಪರಿವಾರದ ಪಾತ್ರವೂ ಇದರಲ್ಲಿ ಕಡಿಮೆಯೇನಿಲ್ಲ. ಇವೆಲ್ಲದರ ಜೊತೆಗೆ ಇನ್ನಿತರ ಮಾಫಿಯ ದೊರೆಗಳಾದ ಛೋಟಾ ರಾಜನ್, ಅರುಣ್ ಗಾವ್ಳಿಯರೂ ಕೂಡ ಬಾಂಬೆಯಲ್ಲಿನ ಅತಂತ್ರದ ಸ್ಥಿತಿಗೆ ಕಾರಣರಾಗಿದ್ದಾರೆ. ಆದರೆ ಚಿತ್ರದಲ್ಲೆಲ್ಲೂ ಈ ಅಂಶಗಳು ಕಾಣುವುದೇ ಇಲ್ಲ. ಸ್ಪಷ್ಟವಾಗಿ ಒಂದು ಕೋಮಿನ ದುಷ್ಕೃತ್ಯಗಳನ್ನು ಮರೆಮಾಚಿ ಇನ್ನೊಂದು ಕೋಮಿನ ದುಷ್ಕೃತ್ಯಗಳನ್ನು ವೈಭವೀಕರಿಸಿ ಎಲ್ಲಾ ಅನಿಷ್ಟಗಳಿಗೂ ಅವರೇ ಹೊಣೆ ಎಂಬಂತೆ ಚಿತ್ರಿಸಿ ಜನಸಾಮಾನ್ಯರನ್ನು ಅವರ ಮೇಲೆ ಎತ್ತಿ ಕಟ್ಟುವ ಹೀನ ಕೆಲಸವನ್ನು ಚಿತ್ರ ನಿರ್ಮಾಪಕರು ಮಾಡಿದ್ದಾರೆ. ಇಲ್ಲಿನ ಪೋಲಿಸ್ ಅಧಿಕಾರಿಗೆ ದಾವೂದ್‌ನನ್ನು ಮಾತ್ರ ಮಟ್ಟ ಹಾಕುವ ಹವಣಿಕೆ, ಗಲಭೆಗಳಿಗೆ ದುಪ್ಪಟ್ಟು ಹೊಣೆಯಾದ ಶಿವಸೇನೆ, ಆರ್.ಎಸ್.ಎಸ್., ವಿ.ಹೆಚ್.ಪಿ.ಯ ವಿರುದ್ಧ ಮಾತೇ ಇಲ್ಲ! ಈ ಅಧಿಕಾರಿಯ ಪ್ರಕಾರ 'ಸ್ವಾತಂತ್ರ್ಯಕ್ಕಾಗಿ ಹಲವರು ಹೋರಾಡಿದರು 'ಮಹಾತ್ಮ' ಆಗಿದ್ದು, ಜನರ ಮನದಲ್ಲುಳಿದಿರುವುದು ಗಾಂಧಿ ಮಾತ್ರ'. ಮಹಾತ್ಮ ಆಗಿದ್ದು ಗಾಂಧಿ ಮಾತ್ರವೇ ಆದರೆ 'ಇದು ರಾಮಜನ್ಮ ಭೂಮಿ' ಎನ್ನುವ ಕಡೆ 'ಇದು ಗಾಂಧಿ ಜನ್ಮಭೂಮಿ' ಎಂದು ಯಾಕಾಗಬಾರದಿತ್ತು?

ಒಟ್ಟಿನಲ್ಲಿ ಈ ಚಿತ್ರವು ಸ್ಪಷ್ಟವಾಗಿ ಹಿಂದು ಮತಾಂಧತೆಯನ್ನು ಮರೆ ಮಾಚುವ, ಮುಸ್ಲಿಂ-ವಿರೋಧಿ ಭಾವನೆಯನ್ನು ಪ್ರಚೋದಿಸುವ 'ಖಾವಿ' ಕಣ್ಣೋಟದ ಚಿತ್ರವಾಗಿದೆ. ಕನ್ನಡದ ಪ್ರಮುಖ ಪತ್ರಿಕೆಯವರು ಸಹ ಈ ಅಂಶವನ್ನು ಮರೆಮಾಚಿ ಅದರ ಅದ್ದೂರಿತನಕ್ಕೆ ಒತ್ತುಕೊಟ್ಟು ಹೆಚ್ಚು ಪ್ರಚಾರ ಕೊಟ್ಟಿದ್ದಾರೆ.

ಏನೇ ಆಗಲಿ ರಾಜಕುಮಾರ್ ಗುಂಪಿನಿಂದ ಇಂಥದ್ದೊಂದು ಚಿತ್ರ ಬರಬಾರದಾಗಿತ್ತು. ಈ ಹಿಂದೆಯಲ್ಲಾ ಅವರ ಕೆಲವು ಚಿತ್ರಗಳಲ್ಲಿನ ಜನಪರ ಧೋರಣೆಗಳಿಂದಾಗಿ ಹಲವರು ತಮ್ಮ ಜೀವನ ಶೈಲಿಯನ್ನೇ ಬದಲಿಸಿಕೊಂಡ ಉದಾಹರಣೆಗಳಿವೆ. (ಉದಾ: ಬಂಗಾರದ ಮನುಷ್ಯ, ಮಣ್ಣಿನ ಮಗ, ದೂರದ ಬೆಟ್ಟ, ಜೀವನಚೈತ್ರ ಇತ್ಯಾದಿ). ಇತ್ತೀಚೆಗೆ ಶಿವರಾಜ್ ಕುಮಾರ್‌ರವರೇ ನಟಿಸಿದ 'ಜನುಮದ ಜೋಡಿ' ಕನ್ನಡದ ಮಣ್ಣಿನ ಸೊಗಡನ್ನು ಹೊಂದಿದ್ದೇ ಅಲ್ಲದೆ ಸಾಮಾಜಿಕ ಕಳಕಳಿ, ಸ್ತ್ರೀ ಸಮಾನತೆ ಇತ್ಯಾದಿ ಧೋರಣೆಗಳನ್ನೊಳಗೊಂಡ ಅತ್ಯುತ್ತಮ ಚಿತ್ರವಾಗಿತ್ತು ಮತ್ತು ಅತಿ ಹೆಚ್ಚು ಯಶಸ್ಸನ್ನೂ ಕೂಡ ಕಂಡಿತ್ತು. ಆದರೆ ಶಿವರಾಜ್ 'ಎ.ಕೆ.-47' ನಂತ ಕೋಮುವಾದಿ ಪ್ರಚೋದನೆಯ ಚಿತ್ರದಲ್ಲಿ ನಟಿಸಿ, ಈಗಿನ ಸನ್ನಿವೇಶದಲ್ಲಿ ತಮ್ಮ ಕುಟುಂಬದ 'ನಿಲುವು' ಏನು ಎಂಬುದರ ಬಗ್ಗೆ ಗುಮಾನಿ ಹುಟ್ಟಿಸಿದ್ದಾರೆ.

ಇನ್ನುಳಿದಂತೆ ಚಿತ್ರದ ತಾಂತ್ರಿಕತೆಗೆ ಸಂಬಂಧಿಸಿದಂತೆ ಚಿತ್ರಕ್ಕೆ ಪೂರಕವಲ್ಲದಿದ್ದರೂ ಹಣವನ್ನೂ ಖರ್ಚು ಮಾಡಲಾಗಿದೆ. ಆದರೂ ಕೆಲವೊಂದು ದೃಶ್ಯಗಳನ್ನು ಬಿಟ್ಟರೆ ಉಳಿದಂತೆ ಚಿತ್ರ ವೈಭವಯುತವಾಗೇನೂ ಕಾಣುವುದಿಲ್ಲ. ಬಸ್ಸುಗಳನ್ನು ಆಕಾಶಕ್ಕೆ ಚಿಮ್ಮಿಸಿ ... ಮಾಡುವುದರಿಂದ ಚಿತ್ರ ಅದ್ದೂರಿಯಾಗುತ್ತದೆ ... ಭ್ರಮೆಯನ್ನು ನಿರ್ದೇಶಕರು ಬಿಡುವುದು ಒಳ್ಳೆಯ... ಭಾರಿ ಪ್ರಚಾರ ಪಡೆದ 'ಸ್ಪೆಷಲ್ ಸೌಂಡ್ ಎಫ... ಮೊದಲೆರಡು ದೃಶ್ಯಗಳಲ್ಲಿ ಗಮನಕ್ಕೆ ಬಂದು... ಆನಂತರ ಮದ್ದು-ಗುಂಡುಗಳ ಸದ್ದಿನೊ... ಅಡಗಿಹೋಗಿದೆ. ಅಭಿನಯದಲ್ಲಿ ಶಿವರಾ... ಪರವಾಗಿಲ್ಲ. ಓಂಪುರಿಯನ್ನು ಮೊದಲಬಾ... ನೋಡಿದವರಿಗೆ 'ಸೂಪರ್' ಅನಿಸಿದರೂ ಅ... ಉತ್ತಮ ಅಭಿನಯದ ಚಿತ್ರಗಳನ್ನು ನೋಡಿದವ... ಇದು ಮಾಮೂಲು. 'ದಾವೂದ್' ಪಾತ್ರದ ಆಶಿ... ವಿದ್ಯಾರ್ಥಿ ಕೆಟ್ಟದಾಗಿ ನಟಿಸಿದ್ದಾರೆ, ಛಾಯಾಗ್ರ... ಚೆನ್ನಾಗಿದೆ.

ಪುಂಡು ಹುಡುಗರ 'ಬೀದಿ ಭಾಷೆ'ಯನ್ನು ಬ... ಅವರನ್ನು ಸೆಳೆಯುವ ಪ್ರಯತ್ನ ಮಾಡಿರ... 'ಎ.ಕೆ.47' ಅವರಲ್ಲಿ ಕೋಮು ಭಾವನೆ... ಬೀಜವನ್ನು ಬಿತ್ತುವ ಕೆಲಸ ಮಾಡಿದೆ. ಮುಂಬರ... ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂ... ನೋಡಿದಾಗ ಆ ಸಂದರ್ಭದಲ್ಲಿ ಚಿತ್ರವು ಅ... ಮೇಲೆ ಪ್ರಭಾವವನ್ನು ಬೀರುವ ಸಾಧ್ಯತೆ ಇದೆ...

ಕೋಮುವಾದಿ ಪ್ರಚೋದನೆಯುಳ್ಳ ... ಚಿತ್ರವನ್ನು ಸರಿಯಾದ ನಿಟ್ಟಿನಲ್ಲಿ ವಿಶ್ಲೇಷಿಸಿ ಅಂ... ಪ್ರಚೋದನೆಗಳಿಗೆ ಬಲಿಯಾಗದೆ ಇಡೀ ಭಾರತದ... ಇಂದು ಎದ್ದಿರುವ ಕೋಮುದ್ವೇಷ, ಹಿಂಸಾಕಾಂ... ಕಾರಣರಾರು ಎಂಬುದನ್ನು ಗುರುತಿಸಬೇಕಿ... ಬಾಬರಿ ಮಸೀದಿ ಧ್ವಂಸ, ನಂತರ ದೇಶದಲ್ಲಿ ಹ... ಕೋಮುದಳ್ಳುರಿ ಅದರ ಮುಂದುವರಿ... ಭಾಗವಾಗಿಯೇ ದಾವೂದ್‌ಗಳ... ಬಾಂಬ್‌ಸ್ಫೋಟಗಳು ಎಂಬುದನ್ನು - ಹಿಂದು... ಮುಸ್ಲಿಂ ಎರಡೂ ಮತಾಂಧ ಶಕ್ತಿಗಳ ಪಾತ್ರ... ಬಗ್ಗೆ ಸರಿಯಾದ ಕಲ್ಪನೆ ಪಡೆಯಬೇಕಾಗಿದೆ.

ಈ ಸಂದರ್ಭದಲ್ಲಿಯೇ ಬಿಜೆಪಿ ಸರ್ಕಾರ... ಪ್ರಮುಖ ಮಂತ್ರಿ ಹಾಗೂ ಬಿಜೆಪಿಯ ಕುಕೃತ್ಯ... ಸಮರ್ಥಕ ರಾಮಕೃಷ್ಣ ಹೆಗಡೆಯವರಿಗೆ ಈ ... ಕೃತಜ್ಞರಾಗಿರುವುದು ಅನೇಕ ಅರ್ಥಗಳನ್ನು ಕೊಡುತ್ತ...

ರಾವ...

ಟೆನ್ನಿಸ್: ಸ್ಮರಣೀಯ ಸಾಧನೆ


ಈ ಇಬ್ಬರು ಹುಡುಗರು ಮತ್ತೆ ಅದ್ಭುತ ಸಾಧನೆ ಮಾಡಿದ್ದಾರೆ. ದೇಶದ ಬಹುತೇಕ ಕ್ರೀಡಾಭಿಮಾನಿಗಳು ಇತ್ತೀಚಿನ ದಿನಗಳಲ್ಲಿ ಕ್ರಿಕೆಟ್ ಎಂಬ 'ಪಿತ್ತ'ವನ್ನು ನೆತ್ತಿಗೇರಿಸಿಕೊಂಡು ತಿರುಗುತ್ತಿದ್ದ ಸಂದರ್ಭದಲ್ಲಿ ಇವರು ಅವರೆಲ್ಲರ ಗಮನವನ್ನು ತಮ್ಮೆಡೆಗೆ ಸೆಳೆದುಕೊಂಡಿದ್ದಾರೆ. ಲಿಯಾಂಡರ್ ಫೇಸ್ ಮತ್ತು ಮಹೇಶ್ ಭೂಪತಿ, ಈ ವರ್ಷದ ಎಲ್ಲಾ ಮೂರು ಗ್ರಾಂಡ್‌ಸ್ಲಾಂಗಳಲ್ಲಿ ಫೈನಲ್ ಪ್ರವೇಶಿಸಿದ್ದಲ್ಲದೆ ಎರಡರಲ್ಲಿ ವಿಜಯವನ್ನೂ ಸಾಧಿಸಿದ್ದಾರೆ. ಮೊನ್ನೆ 'ಫ್ರೆಂಚ್ ಓಪನ್ ಟೆನಿಸ್' ಈಗ 'ವಿಂಬಲ್ಡನ್'.

ಟೆನಿಸ್ ಇದು ಒಂದು ವ್ಯಕ್ತಿಗತ ಕ್ರೀಡೆ. ಯಾರು ಗೆದ್ದರು ಎಂಬುದು ಮುಖ್ಯವಾಗುತ್ತದೆಯೇ ಹೊರತು ಯಾವ ದೇಶದವರು ಗೆದ್ದರು ಎಂಬುದು ಪ್ರಾಮುಖ್ಯತೆಯನ್ನು ಪಡೆಯುವುದಿಲ್ಲ. ಆದರೆ ಇಂದು ನಾವು ನಮ್ಮ ಹುಡುಗರನ್ನು ಅಭಿನಂದಿಸಲೇ ಬೇಕಾಗಿದೆ. ಟೆನಿಸ್ ರಂಗದಲ್ಲಿ ಭಾರತಕ್ಕೆ ಒಂದು ಪ್ರತಿಷ್ಠಿತ ಸ್ಥಾನವನ್ನು ಈ ಜೋಡಿ ತಂದುಕೊಟ್ಟಿದೆ.

ಇದುವರೆವಿಗೂ ಒಮ್ಮೆಯೂ ಒಂದೂ ಗ್ರಾಂಡ್‌ಸ್ಲಾಂಗಳಲ್ಲಿ ವಿಜಯ ಗಳಿಸಲು ಸಾಧ್ಯವಾಗದಿದ್ದಾಗ ಫೇಸ್-ಭೂಪತಿ ಜೋಡಿ ಈಗ ಸತತವಾಗಿ ಎರಡು ಗ್ರಾಂಡ್‌ಸ್ಲಾಂನಲ್ಲಿ ಡಬಲ್ಸ್‌ನಲ್ಲಿ ಜಯಗಳಿಸಿದ್ದೇ ಅಲ್ಲದೆ, ಫೇಸ್ ಮಿಕ್ಸೆಡ್‌ಡಬಲ್ಸ್‌ನಲ್ಲೂ ಕೂಡಾ ಅಮೆರಿಕದ ಲೀಸಾ ರೇಮಂಡ್‌ನೊಂದಿಗೆ ಸೇರಿ ವಿಜಯ ಸಾಧಿಸಿದ್ದಾರೆ.

ಫೇಸ್ ಮತ್ತು ಭೂಪತಿಯ ನಡುವೆ ವೈಮನಸ್ಯ ಉಂಟಾಗಿ ಇಬ್ಬರೂ ಬೇರ್ಪಡುವರು ಎಂಬ ಸುದ್ದಿಯಿಂದ ಆತಂಕ ಉಂಟಾಗಿತ್ತಾದರೂ ವಿಂಬಲ್ಡನ್‌ನಲ್ಲಿ ಈ ಜೋಡಿ ಆಡಿ ಜಯಗಳಿಸುವುದರೊಂದಿಗೆ ಆತಂಕವನ್ನು ದೂರಮಾಡಿದ್ದಾರೆ. ಅದರಲ್ಲೂ ಕ್ವಾರ್ಟರ್ ಫೈನಲ್‌ನಲ್ಲಿ ಮೊದಲೆರಡು ಸೆಟ್‌ಗಳನ್ನು ಸೋತು ಪಂದ್ಯಾವಳಿಯಿಂದ ಹೊರಬೀಳುವ ಸ್ಥಿತಿಯಲ್ಲಿದ್ದಾಗ ನಂತರದ ಮೂರು ಸೆಟ್‌ಗಳನ್ನು ವಿರೋಚಿತವಾಗಿ ಆಡಿ ಗೆಲುವು ಸಾಧಿಸಿದುದು ಈ ಜೋಡಿಯ ಸಾಮರ್ಥ್ಯಕ್ಕೆ ಸಾಕ್ಷಿ. ತಮ್ಮಿಬ್ಬರ ನಡುವೆ ಭಿನ್ನಾಭಿಪ್ರಾಯಗಳೇನೂ ಇಲ್ಲವೆಂದೂ ಮುಂದೆಯೂ ತಾವು ಒಟ್ಟಾಗಿ ಆಡುವುದಾಗಿ ಫೇಸ್ ಮತ್ತು ಭೂಪತಿ ಇಬ್ಬರ... ಹೇಳಿದ್ದಾರೆ. ಈ ಜೋಡಿ ಬೇರ್ಪಡದೆ ಆಡಿ... ಆದಲ್ಲಿ ಮುಂದೆಯೂ ಕೂಡ ಹಲವಾ... ಸಾಧನೆಗಳನ್ನು ಮಾಡುವ ಸಾಧ್ಯತೆಯಿದೆ. ... ನಿಟ್ಟಿನಲ್ಲಿ ನಿರೀಕ್ಷೆಗಳನ್ನು ಹುಸಿಗೊಳಿಸದೆ ಈ ಜೋ... ಯಶಸ್ಸು ಗಳಿಸಲು ಎಂಬುದು ಎಲ್ಲರ ಹಾರೈಕೆ...

- ಎಂ.ಆ...



Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ